ಪಡೆಯಬೇಕಾಗುತ್ತದೆ. ಆದ್ದರಿಂದ ಅವರ ಸಂಶಯವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸರ್ಕಾರ ಮುಕ್ತವಾದ ಮನಸ್ಸಿನಿಂದ ಇದೆ. ಅದನ್ನು ನಾನು ಗಂಭೀರವಾಗಿ ಗಮನಕ್ಕೆ ತೆಗೆದುಕೊಂಡು ಸರ್ಕಾರ ಪರಿಶೀಲನೆ ಮಾಡುತ್ತದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಈ ಧರಣಿಯನ್ನು ಮುಕ್ತಾಯ ಮಾಡಿ ಸರ್ಕಾರದ ಜೊತೆ ಸಹಕರಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಶ್ರೀ ಶೆಟ್ಟರ್‌ರವರೇ, I think, this is a proper answer ಎಂದು ಕಾಣುತ್ತದೆ. ದಯವಿಟ್ಟು ತಾವು ತಮ್ಮ ಸದಸ್ಯರನ್ನೆಲ್ಲರನ್ನು ಕರೆದು-ಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೋದರೆ ಮುಂದೆ ಕಾರ್ಯಕ್ರಮ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ.

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ತನಿಖೆ ಮಾಡಲಿಕ್ಕೆ ಮುಕ್ತ ಮನಸ್ಸು ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಕಾನೂನು ಚೌಕಟ್ಟಿನೊಳಗೆ ನೋಡಿಕೊಂಡು ತನಿಖೆ ಮಾಡುವುದಕ್ಕೆ ನಿರ್ಣಯ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರ ಈ ಸಂದರ್ಭದಲ್ಲಿ ತನಿಖೆ ಮಾಡಿರುವ ದೃಷ್ಟಿಯಿಂದ ಮುಕ್ತ ಮನಸ್ಸಿನಿಂದ ಇದ್ದದ್ದು ಒಳ್ಳೆಯ ವಿಚಾರ. ಇದನ್ನು ನಾವು ಸಾರ್ವಜನಿಕ ಹಿತದೃಷ್ಟಿಯಿಂದ ಚರ್ಚೆ ಮಾಡಿರುವಂಥದ್ದು. ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸ್ವಲ್ಪ ಮಾತಿನ ಘರ್ಷಣೆ ಆಗುವಂಥ ರೀತಿಯಲ್ಲಿ ನಡೆಯಿತು. ಮಾನ್ಯ ಸಭಾಧ್ಯಕ್ಷರು ಕಳೆದ ಮೂರುವರೆ ವರ್ಷದಲ್ಲಿ ಇವತ್ತು ಸಿಟ್ಟಾದಷ್ಟು ಬೇರೆ ಯಾವ ದಿನವೂ ನೋಡಿರಲಿಲ್ಲ.

ಅಧ್ಯಕ್ಷರು :- ಈ ರೀತಿ ಕಳೆದ ಮೂರು ವರ್ಷದಲ್ಲಿ ನೀವೂ ಸಹ ಮಾಡಿರಲಿಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಮಾತನಾಡುವಾಗ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ದಯವಿಟ್ಟು ಅದಕ್ಕೆ ಯಾವುದೇ ಬೇರೆ ರೀತಿಯ ತಪ್ಪು ಅರ್ಥ ಮಾಡಿಕೊಳ್ಳುವುದು ಬೇಡ. ತಮ್ಮ ಸ್ಥಾನಕ್ಕೆ ನಮ್ಮೆಲ್ಲರ ಗೌರವ ಇದೆ ಎನ್ನುವ ಮಾತನ್ನು ಹೇಳಿ ಇನ್ನು ಮುಂದಿನ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ದೊಡ್ಡ ಮನಸ್ಸು ಮಾಡಿ ಕ್ಷಮಿಸಿಬಿಡಿ ಸರ್.

ಅಧ್ಯಕ್ಷರು :- ಇಲ್ಲಿ ಕ್ಷಮಿಸುವಂಥದ್ದು ಏನಿದೆ? ಆಯಿತು. ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

2. ವಿತ್ತೀಯ ಕಾರ್ಯಕಲಾಪ

2003-2004ನೇ ಸಾಲಿನ ಆಯವ್ಯಯದ ಮೇಲಿನ (ಮುಂದುವರಿದ ಚರ್ಚೆ)

_+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ಈ ಸಾಲಿನ ಆಯವ್ಯಯದ ಬಗ್ಗೆ ವಿಚಾರದ ಮಂಡನೆಗೋಸ್ಕರವಾಗಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತಾ, ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಅರ್ಥಮಂತ್ರಿಗಳು ಮತ್ತು ರಾಜ್ಯದ ಮುಖ್ಯಮಂತ್ರಿಗಳು ಹೀಗೆ ಎರಡೂ ಸ್ಥಾನಗಳನ್ನು ಹೊಂದಿರುವಂಥ ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಏನನ್ನು ನಿರೀಕ್ಷಣೆ ಮಾಡಿದ್ದೇವೆ. ಏನೇನು ಒಳ್ಳೆಯದು ಆಗಿದೆ,

ಇನ್ನೇನು ಆಗಬೇಕಾಗಿದೆ ಎನ್ನುವಂಥ ವಿಚಾರವನ್ನು ಇಡುವಂಥ ಒಂದು ಅವಕಾಶವನ್ನು ನನಗೆ ಕಲ್ಪಿಸಿದ್ದೀರಿ. ಪ್ರಮುಖವಾಗಿ ಇಲ್ಲಿ ಪ್ರಗತಿದಾಯಕವಾದಂಥ ಒಂದು ವಿಚಾರವನ್ನು ಕಳೆದ ಎರಡು ವರ್ಷಗಳ ಕಾಲದಿಂದ ಆಯವ್ಯಯದಲ್ಲಿ ನಾವು ನೋಡುತ್ತಾ ಬರುತ್ತಿದ್ದೇವೆ. ಅಂದರೆ ಕಳೆದ ಸಾಲಿನಲ್ಲಿ ರಾಜ್ಯದ ಜಿ.ಡಿ.ಪಿ 8.3 ಪರ್ಸಂಟ್ ಆಗುತ್ತದೆ ಎನ್ನುವ ನಿರೀಕ್ಷಣೆಯನ್ನು ನಾವೆಲ್ಲರೂ ಮಾಡಿದ್ದೆವು. ಆದರೆ ಅದು ಪ್ರಕೃತಿಯ ವಿಕೋಪ ಇರಬಹುದು. ಬೇರೆ ಬೇರೆ ಕಾರಣಗಳು ಇರಬಹುದು. ಇಲ್ಲಿ ಪ್ರಮುಖವಾಗಿ ಆ ಹೆಜ್ಜೆಯಲ್ಲಿ ಮಹತ್ತರವಾದಂಥ ರೀತಿಯಲ್ಲಿ ಎಲ್ಲಿ ಹೋಗಲಿಕ್ಕೆ ಆಗಲಿಲ್ಲ ಎನ್ನುವಂಥದ್ದರ ಬಗ್ಗೆ ನಮ್ಮೆಲ್ಲರ ಮನಸ್ಸಿನಲ್ಲಿ ಆಘಾತವನ್ನು ಉಂಟುಮಾಡಿದೆ. ಕಳೆದ ವರ್ಷ ನಮ್ಮ ಸಾಧನೆ ಕೇವಲ ನಾಲ್ಕು ಪರ್ಸಂಟ್ ಮಾತ್ರ ಇದೆ ಎನ್ನುವಂಥದ್ದು ಆಘಾತ ತರುವ ವಿಚಾರ. ಕಳೆದ ಸಲ ನಮ್ಮ ಮಧ್ಯಂತರದ ಆರ್ಥಿಕ ಸ್ಥಿತಿಯ ವಿಶ್ಲೇಷಣೆ ಮಾಡುವಂಥ ಸಂದರ್ಭದಲ್ಲಿ ಶೇಕಡ 8ರಷ್ಟು ಜಿ.ಡಿ.ಪಿ.ಯನ್ನು ನಾವು ನಿರೀಕ್ಷಣೆ ಮಾಡುತ್ತೇವೆ ಎನ್ನುವಂಥ ವಿಶ್ಲೇಷಣೆಯನ್ನು, ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರು. ಆದರೆ 2003-04ನೇ ಸಾಲಿನ ಬಜೆಟ್‌ನ್ನು ನಾವು ನೋಡುವಂಥ ಸಂದರ್ಭದಲ್ಲಿ ಅನಿವಾರ್ಯವಾದಂಥ ಕಾರಣಗಳಿಂದ ಇದು ಶೇಕಡ 6ಕ್ಕೆ ಬರಬೇಕಾದಂಥ ಪ್ರಕರಣ ಇದೆ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಈ ಹನ್ನೊಂದನೇ ಫೈನಾನ್ಸ್ ಕಮಿಷನ್‌ನಲ್ಲಿ ಈ ಸಲ ನಮಗೆ 10.4 ಪರ್ಸಂಟ್ ಜಿ.ಡಿ.ಪಿ. ಇರಬೇಕು ಎನ್ನುವಂಥ ವಿಚಾರದಲ್ಲಿ ನಮ್ಮ ಸಾಧನೆ ಕೊನೆಯ ಪಕ್ಷ ಅದರ ಹತ್ತಿರದಲ್ಲಾದರೂ ರೀಚ್ ಆಗಲಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾದರೆ ಅಲ್ಲಿಂದ ಬರುವಂಥ ಆರ್ಥಿಕ ಸಹಾಯಕ ಮತ್ತು ನಮ್ಮ ರಾಜ್ಯದ ಪ್ರಗತಿಗೆ ಎಲ್ಲಿ ಕುಂಟಿತವಾಗುತ್ತದೋ, ಇದಕ್ಕೆ ಯಾವ ರೀತಿಯಾದಂಥ ವಿಚಾರವನ್ನು ನಾವು ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ, ಆದು ಅಡ್ಮಿನಿಸ್ಟ್ರೇಟಿವ್ ಎಕ್ಸ್ ಪೆನ್ಸ್‌ಸೆಸ್ ಕಂಟ್ರೋಲ್ ಇರಬಹುದು, ಅಥವಾ ನಮ್ಮ ಇನ್‌ಕಂ ಅನ್ನು ಎನ್‌ಹ್ಯಾನ್ಸ್ ಮಾಡಿಕೊಳ್ಳುವ ದೃಷ್ಟಿಯಲ್ಲಿ ನಮ್ಮ ಕ್ರಮ ಏನಾಗಬೇಕಾಗಿದೆ ಎನ್ನುವುದರ ಬಗ್ಗೆ ನಮ್ಮ ಚಿಂತನೆಯ ಅವಶ್ಯಕತೆ ಇದೆ. ಯಾವುದೇ ಒಂದು ಬಜೆಟ್‌ನ್ನು ಪ್ರಗತಿದಾಯಕವಾದ ಬಜೆಟ್ ಎಂದು ಎಲ್ಲಿ ಕರೆಯುತ್ತೇವೆಂದರೆ, ಒಂದು ಬಜೆಟ್‌ನ್ನು ಮಂಡನೆ ಮಾಡಿದ ನಂತರದಲ್ಲಿ ಆ ಬಜೆಟ್ ನಮ್ಮ ಎಸ್ಟಿಮೇಷನ್ ಮತ್ತು ಅಚೀವ್‌ಮೆಂಟ್ ಶೇಕಡ ಐದು ಪರ್ಸಂಟ್, ಆರು ಪರ್ಸಂಟ್ ಏಳು ಪರ್ಸಂಟ್ ನಷ್ಟು ಏನಾದರೂ ವ್ಯತ್ಯಾಸಗಳು ಇದ್ದಂಥ ಸಂದರ್ಭದಲ್ಲಿ ಅದನ್ನು ಪ್ರಗತಿದಾಯಕವಾದಂಥದ್ದು ಎಂದು ನಾವು ಕರೆಯುತ್ತೇವೆ. ಆದರೆ ಇಲ್ಲಿ ಪ್ರಮುಖವಾಗಿ ಕಳೆದ ವರ್ಷಗಳಲ್ಲಿ ಇರುವಂಥ ವ್ಯವಸ್ಥೆಯನ್ನು ನಾವು ನೋಡಿದಾಗ 2002ನೇ ಸಾಲಿನಲ್ಲಿ ರೆವಿನ್ಯೂ ರಿಸೀಟ್ 15,321 ಕೋಟಿ ರೂಪಾಯಿಗಳನ್ನು ನಾವು ಕಾಣುತ್ತೇವೆ. ರೆವಿನ್ಯೂ ಎಕ್ಸ್‌ಪೆಕ್ಟೆಡ್ 18605 ಕೋಟಿ ರೂಪಾಯಿಗಳು ಆಗಿವೆ. ಅಂದರೆ 3284 ಕೋಟಿ ರೂಪಾಯಿಗಳ ಕೊರತೆಯನ್ನು ನಾವು ಕಾಣುತ್ತಿದ್ದೇವೆ. ಅಂದರೆ ಆದರ ಅಚೀವ್‌ಮೆಂಟ್ ಅದರ repercussion ಮುಂದಿನ ವರ್ಷಕ್ಕೆ ಯಾವ ರೀತಿಯಲ್ಲಿ ಆಗುತ್ತದೆ ಎನ್ನುವಂಥದ್ದು ಬಹಳ ಮುಖ್ಯವಾದ ಅಂಶವಾಗಿದೆ. ಅದರ ಜೊತೆಗೆ ನಮ್ಮ ರಾಜ್ಯದ ಸೋಷಿಯಲ್ ಸೆಕ್ಟಾರ್ ಮತ್ತು ಬೇರೆ ಬೇರೆ ಪ್ರಗತಿಗೆ ಕುಂಟಿತವಾಗುವಂಥ ವ್ಯವಸ್ಥೆಗಳನ್ನು ನಾವು ಕಂಡಿದ್ದೇವೆ. ರೆವಿನ್ಯೂ ಎಕ್ಸ್‌ಪೆಂಡಿಚರ್ 18605 ಕೋಟಿ ರೂಪಾಯಿಗಳು ಎಂದು ನಾವು ಏನು ಅಂದುಕೊಂಡಿದ್ದೇವೆ ಅದರಲ್ಲಿ ನಾನ್ ಪ್ಲಾನ್ ಎಕ್ಸ್ ಪೆಂಡಿಚರ್ಸ್ ಇವೆಲ್ಲವನ್ನೂ ಕಳೆದು ನಮಗೆ ಉಳಿದು ಕೊಂಡಿರುವಂಥದ್ದು 5605 ಕೋಟಿ ರೂಪಾಯಿಗಳು ಮಾತ್ರ. ಈ ರಾಜ್ಯದ ಬೇರೆ ಬೇರೆ

ಕ್ಷೇತ್ರಗಳಿಗೆ ಅಲೊಕೇಷನ್ಸ್‌ನ್ನು ಕೊಟ್ಟುಕೊಂಡು ನಿಜವಾದ ಪ್ರಗತಿಗೆ ಎಷ್ಟು ಹಣವನ್ನು ಉಪಯೋಗಿಸಲಾಯಿತು ಎಂದರೆ ಕೇವಲ 5605 ಕೋಟಿ ರೂಪಾಯಿಗಳನ್ನು ಮಾತ್ರ ಉಪಯೋಗಿಸಿಕೊಂಡು ಪ್ರಗತಿಗೋಸ್ಕರ ಮಾಡಲಿಕ್ಕೆ ಸಾಧ್ಯವಾಯಿತು. ಇದು ಬಹಳ ನೋವಿನ ಸಂಗತಿ. ಕಾರಣ, development expenditure, it is only crores. ಅದರಲ್ಲಿ ಶೇಕಡ 50 ಭಾಗ ಮಾತ್ರ ರಿಯಲ್ ಆಗಿ ಅದು ಜನಸಾಮಾನ್ಯರಿಗೆ ಮುಟ್ಟುವಂಥ ವ್ಯವಸ್ಥೆಯಾಗಿದೆ ಎಂದು ಹೇಳುವುದಾದರೆ 2800 ಕೋಟಿ ರೂಪಾಯಿಗಳಲ್ಲಿ ಇಡೀ ರಾಜ್ಯದ ಐದು ಕೋಟಿ ಜನಗಳ ಪ್ರಗತಿಯನ್ನು ನಾವು ಹೇಗೆ ಸಾಧನೆ ಮಾಡಲಿಕ್ಕೆ ಆಗುತ್ತಿದೆ? ಈ ಬಗ್ಗೆ ಚಿಂತನೆ ಮಾಡಬೇಕಾದಂಥ ಅವಶ್ಯಕತೆ ಇದೆ. ಹಾಗೆಯೇ 1999ರಲ್ಲಿ ಒಂದು ರೂಪಾಯಿಯಲ್ಲಿ 78 ಪೈಸೆಯನ್ನು ಕ್ಯಾಪಿಟಲ್ ಔಟ್‌ಲೇಗೋಸ್ಕರವಾಗಿ ನಾವು ತೆಗೆದಿಟ್ಟಿದ್ದೆವು. ಆದರೆ ಅದು ಇವತ್ತು 22 ಪೈಸೆಗೆ ಬಂದಿದೆ ಅನ್ನುವಂಥದ್ದು ಇದೆಯಲ್ಲಾ ಅದು ನಮಗೆ ಆಘಾತವನ್ನು ತರುವಂಥ ವಿಚಾರ ಎಂದು ಹೇಳಲಿಕ್ಕೆ ನಾನು ಬಯಸುತ್ತೇನೆ. ನಾವು ಈ ವರ್ಷದ ಬಜೆಟ್‌ನ್ನು ವಿಶ್ಲೇಷಣೆ ಮಾಡುವಂಥ ಸಂದರ್ಭದಲ್ಲಿ ನಮ್ಮ ಫೈನಾನ್ಸಿಯಲ್ ಫಿಸ್ಕಲ್ ಡಿಫಿಸಿಟ್ 6032.79 ಕೋಟಿ ರೂಪಾಯಿಗಳು ಈ ಡಿಫಿಸಿಟ್‌ಗೆ ಬರುವುದಕ್ಕೆ ಮುಂಚೆ ಆಂತರಿಕವಾದಂಥ ಸಾಲ ಮತ್ತು ಅದರ ಬಡ್ಡಿಗಳನ್ನು ತೀರಿಸಲಿಕ್ಕೋಸ್ಕರವಾಗಿ ಎಷ್ಟು ಸಾಲವನ್ನು ಮಾಡುತ್ತಿದ್ದೇವೆ. ಎನ್ನುವಂಥದ್ದನ್ನು ನೋಡಿದಾಗ ನಮ್ಮೆಲ್ಲರಿಗೂ ಆಘಾತವನ್ನು ತರುವಂಥ ವಿಚಾರವಾಗಿದೆ. ಅಂದರೆ ಇವತ್ತು ಸ್ಮಾಲ್ ಸೇವಿಂಗ್ಸ್‌ನಿಂದ 1814 ಕೋಟಿ ರೂಪಾಯಿಗಳನ್ನು ನಾವು ಸಾಲ ರೂಪವಾಗಿ ತೆಗೆದುಕೊಳ್ಳುತ್ತಿದ್ದೇವೆ. ಅದೇರೀತಿ ಪಬ್ಲಿಕ್‌ನಿಂದ ಪಡೆದುಕೊಳ್ಳುತ್ತಿರುವ ಸಾಲ 973 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರ ಮತ್ತು ಬೇರೆ ಬೇರೆ ಕಡೆಗಳಿಂದ ನಾವು ತೆಗೆದುಕೊಳ್ಳುವಂಥ ಸಾಲ 2931 ಕೋಟಿ ರೂಪಾಯಿಗಳು ಹಾಗೂ ಕಂಟ್ರಾಕ್ಟ್ ಅಡಿಯಲ್ಲಿ ನಾವು ತೆಗೆದುಕೊಂಡಿರುವಂಥ ಸಾಲ 572 ಕೋಟಿ ರೂಪಾಯಿಗಳು. ಹೀಗೆ ಒಟ್ಟು 6240 ಕೋಟಿ ರೂಪಾಯಿಗಳ ಸಾಲದ ನಿರೀಕ್ಷೆಯಲ್ಲಿ ಈ ಬಜೆಟ್‌ನ್ನು ನಾವು ತಯಾರು ಮಾಡಿದ್ದೇವೆ. ಹಾಗಾದರೆ ನಮ್ಮ ಟೋಟಲ್ ಎಷ್ಟು ಆಯಿತು? ಡಿಫಿಸಿಟ್ ಬಜೆಟ್ 6032 ಕೋಟಿ ರೂಪಾಯಿಗಳು ಮತ್ತು 6240 ಕೋಟಿ ರೂಪಾಯಿಗಳ ಸಾಲ, ಅಂದರೆ ಇಡೀ ವ್ಯವಸ್ಥೆಯನ್ನು ನಾವು ಸಾಲದ ಆಧಾರದ ಮೇಲೆ ನಡೆಸುವಂಥ ವ್ಯವಸ್ಥೆಗಳು ನಮ್ಮ ಮುಂದೆ ಇರುವಂಥದ್ದು ಆಗಿದೆ. ಇದರಿಂದ ಇವತ್ತು ವಿಶೇಷವಾಗಿ ಪ್ರತಿಯೊಬ್ಬರಲ್ಲಿ ಕೂಡ ಆಘಾತವನ್ನು ತರುವಂಥ ವ್ಯವಸ್ಥೆಗಳು ಆಗಿವೆ. ಹಿಂದಿನ ವರ್ಷದ ಅಚೀವ್‌ಮೆಂಟ್ ಶೇಕಡ 80 ಪರ್ಸೆಂಟ್‌ನಷ್ಟೂ ಬರಲಿಲ್ಲ. ಈ ವರ್ಷ ಮತ್ತೊಂದು ಬಾರಿಗೆ ನಾವು ಸಾಲವನ್ನು ತೀರಿಸುವಂಥ ವ್ಯವಸ್ಥೆಗಳಿಗೆ ಬಂದಿದ್ದೇವೆ. 2001-2002ರಲ್ಲಿ 271,31 ಕೋಟಿ ರೂಪಾಯಿಗಳ ಸಾಲ ನಮ್ಮ ಮುಂದೆ ಇತ್ತು. ಅದರಲ್ಲಿ ಆಂತರಿಕವಾದ ಸಾಲ 10 ಸಾವಿರ ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರದಿಂದ ಸಾಲ 11 ಸಾವಿರ ಕೋಟಿ ರೂಪಾಯಿಗಳು, ಈ ರೀತಿ ಲೆಕ್ಕವನ್ನು ಹಾಕಿಕೊಂಡು ಹೋದಾಗ ಈ ವರ್ಷದಲ್ಲಿ ನಮಗೆ ಆಘಾತವನ್ನು ತರುವಂಥ ವಿಚಾರ ಏನೆಂದರೆ, ಎಕ್ಸ್‌ಪೆಂಡಿಚರ್‌ಗೋಸ್ಕರವಾಗಿ ಈ ಬಾರಿ ನಮ್ಮ ಮುಂದೆ ಇಟ್ಟಿರುವಂಥ ಖರ್ಚುವೆಚ್ಚಗಳ ವ್ಯವಸ್ಥೆಗಳನ್ನು ನೋಡಿದಾಗ ಕೇವಲ ನಮ್ಮ ಮುಂದೆ ಇರುವಂಥ ಸಾಲದ ಬಡ್ಡಿಯನ್ನು ತೀರಿಸಲಿಕ್ಕೋಸ್ಕರವಾಗಿ ಸಾಲವನ್ನು ತೀರಿಸುವುದು ಬೇರೆ ಮಾತು, ಸಾಲದ ಬಡ್ಡಿಯನ್ನು ತೀರಿಸಲಿಕ್ಕೋಸ್ಕರವಾಗಿ ಸಾಲವನ್ನು ತೀರಿಸುವುದು ಬೇರೆ ಮಾತು,

ಸಾಲದ ಬಡ್ಡಿಯನ್ನು ತೀರಿಸಲಿಕ್ಕೋಸ್ಕರವಾಗಿ ಕಳೆದ ಸಲ 3335 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ವರ್ಷ ಬಡ್ಡಿಗೋಸ್ಕರವಾಗಿ ತೆಗೆದಿಟ್ಟಿರುವಂಥ ಸಾಲ 3630 ಕೋಟಿ ರೂಪಾಯಿಗಳು. ಇಲ್ಲಿ ಆಂತರಿಕ ಸಾಲ ಇರಬಹುದು. ಕೇಂದ್ರ ಸರ್ಕಾರದಿಂದ ಸಾಲ ಇರಬಹುದು. ಆದರೆ ಇಲ್ಲಿ ವಿಶ್ವಬ್ಯಾಂಕ್ ಮತ್ತು ಬೇರೆ ಬೇರೆ ರೀತಿಯಲ್ಲಿರುವಂಥ ಎಕ್ಸ್‌ಟರ್ನಲ್ ಫೈನಾನ್ಸ್ ಏನು ಇದೆ ಅದರ ವಿಚಾರವನ್ನು ಇಲ್ಲಿ ಚರ್ಚೆ ಮಾಡಿಲ್ಲ. ಇಲ್ಲಿ ಇರುವಂಥದ್ದು ಏನೆಂದರೆ ವಿಶೇಷವಾಗಿ ಆಂತರಿಕವಾದ ಸಾಲ, ಸ್ಮಾಲ್ ಸೇವಿಂಗ್ಸ್‌ನಲ್ಲಿ ಪಡೆದಿರುವಂಥ ಸಾಲ, ಕೇಂದ್ರ ಸರ್ಕಾರದ ಸಾಲ ಮತ್ತು ಮೀಸಲು ನಿಧಿ ಮೇಲಿನ ಬಡ್ಡಿ, ಹಾಗೂ ಇತರ ಹೊಣೆಗಾರಿಕೆಗಳ ಮೇಲಿನ ಬಡ್ಡಿ, ಇಷ್ಟೂ ಸೇರಿ 3630 ಕೋಟಿ ರೂಪಾಯಿಗಳನ್ನು ಬಡ್ಡಿಯ ರೂಪದಲ್ಲಿ ಕೊಡುವಂಥ ವ್ಯವಸ್ಥೆಗಳನ್ನು ನಾವು ನೋಡಿದಾಗ ಕಳೆದ ಮೂರು ವರ್ಷಗಳ ಕಾಲದಲ್ಲಿ ನಮ್ಮ ಆರ್ಥಿಕ ವ್ಯವಸ್ಥೆಗಳು ಹೇಗೆ ದಿನೇದಿನೇ ಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ. -ಹಿಂದಿನ ಸರ್ಕಾರದ ರೀತಿಯಲ್ಲಿ ನಾವು ಓ.ಡಿ.ಯನ್ನು ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳಿದರು. ಓ.ಡಿ.ಯನ್ನು ತೆಗೆದುಕೊಂಡಿಲ್ಲ ಎಂದರೆ ನಮ್ಮ ಪ್ರಾರಂಭಿಕ ಶುಲ್ಕವೇ ಇದೆ? ಮೈನಸ್‌ನಿಂದಲೇ ಪ್ರಾರಂಭಮಾಡಲಾಗಿದೆ. ಅಂದರೆ ಇನ್‌ಎವಿಟೆಬಲ್ ಆಗಿ ನಾವು ಹೋಗಬೇಕಾಗಿತ್ತು. ಆದರೆ ಬ್ಯಾಲೆನ್ಸಿಂಗ್ ಮಾಡುವಂಥ ವ್ಯವಸ್ಥೆಯೊಳಗೆ ನಮ್ಮ ಡೆವಲಪ್‌ಮೆಂಟ್ ಎಲ್ಲಿ ಕರ್ಟೈಲ್ಡ್ ಆಗಿದೆ ಎನ್ನುವಂಥ ಚಿಂತನೆ ನಮಗೆ ಬಹಳ ಮುಖ್ಯವಾದಂಥ ವಿಚಾರವಾಗಿದೆ. ಹೀಗಾಗಿ ರಾಜ್ಯದಲ್ಲಿ ಫೈನಾನ್ಸಿಯಲ್ ಪೊಜಿಷನ್ ಬಹಳ ಕಠಿಣವಾದ ಸ್ಥಿತಿಗೆ ಬರುವಂಥದ್ದು, ಜೊತೆಗೆ ಸಾಲವನ್ನು ಏತಕ್ಕೋಸ್ಕರವಾಗಿ ಮಾಡುತ್ತಿದ್ದೇವೆ? ಅವರು ವಿಶೇಷವಾಗಿ ಹಣಕಾಸಿನ ವ್ಯವಸ್ಥೆಯೊಳಗಡೆ ಪರಿಣತೆಯನ್ನು ಹೊಂದಿರುವಂಥವರು. ಅವರ ನೇತೃತ್ವದಲ್ಲಿ ನಾವು ನಿರೀಕ್ಷಣೆಯನ್ನು ಮಾಡುವುದು, ನಾನು ಆಗಲೇ ಹೇಳಿದ ಹಾಗೆ 27 ಸಾವಿರ ಕೋಟಿ ರೂಪಾಯಿಗಳ ಸಾಲ ಇವತ್ತು ನಮ್ಮ ಮುಂದೆ ಇದೆ. ಮತ್ತು ಈಗ ತೆಗೆಯಲಿಕ್ಕೆ ಹೊರಟಿರುವಂಥ 6024 ಕೋಟಿ ರೂಪಾಯಿಗಳ ಸಾಲ ಅದನ್ನು ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್‌ಗೆ ಇಡುವಂಥ ವ್ಯವಸ್ಥೆಗಳು ಆದಾಗ ರಾಜ್ಯದ ಪ್ರಗತಿಯನ್ನು ಕಾಣಬಹುದು. ಆದರೆ ನಾವು ತರುತ್ತಿರುವಂಥ ಸಾಲದ ಶೇಕಡ 55 ಭಾಗ ಹಣವನ್ನು ಕೇವಲ ಬಡ್ಡಿಯನ್ನು ಕೊಡಲಿಕ್ಕೋಸ್ಕರವಾಗಿ ಸಾಲವನ್ನು ತರುವಂಥ ಅನಿವಾರ್ಯದ ಪರಿಸ್ಥಿತಿ ಈ ರಾಜ್ಯಕ್ಕೆ ಬಂದಿದ್ದರೆ, ಹಣಕಾಸಿನ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಹೇಗಿದೆ ಎನ್ನುವ ಒಂದು ಚಿಂತನೆ ಎಲ್ಲರ ಮನಸ್ಸಿನಲ್ಲಿ ಕಾಡುತ್ತಿದೆ. ಬಜೆಟ್‌ನಲ್ಲಿ ಈ ಭಾಗದಲ್ಲಿ ಸಾಲದ ಎತ್ತುವಳಿಗಳನ್ನು ತೋರಿಸಿದ್ದೀರಿ. ಅದು ವಿಶೇಷವಾಗಿ ಬೇರೆ ಬೇರೆ ಇಲಾಖೆಗಳಲ್ಲಿ, ಅದು ವಿಶೇಷವಾಗಿ ಕೆ.ಯು.ಡಬ್ಲ್ಯ್.ಎಸ್.ಎಸ್.ಬಿ. ಇರಬಹುದು. ಅಥವಾ ಎನ್.ಸಿ.ಡಿ.ಸಿ.ಗೆ ತೆಗೆದುಕೊಂಡಿರುವಂಥ ಸಾಲಗಳು ಇರಬಹುದು, ಲೋಕಲ್‌ಬಾಡಿಗಳು ತೆಗೆದುಕೊಂಡಿರುವ ಎಕ್ಸ್‌ಟರ್ನಲ್ ಸಾಲಗಳು ಇರಬಹುದು, ಗವರ್ನಮೆಂಟ್ ಕಂಪನಿಗಳು ತೆಗೆದುಕೊಂಡಿರುವಂಥ ಸಾಲಗಳು, ಹೀಗೆ ಬೇರೆ ಬೇರೆ ಕಂಪನಿಗಳು ಸರ್ಕಾರದ ಗ್ಯಾರಂಟಿಯನ್ನು ಪಡೆದುಕೊಂಡು ತೆಗೆದುಕೊಂಡಿರುವಂಥ ಸಾಲದ ಒಟ್ಟು ಮೊತ್ತ ಎಷ್ಟು? ಎನ್ನುವುದನ್ನು ಕಳೆದ ಮೂರು ವರ್ಷಗಳಲ್ಲಿ ಎಲ್ಲೂ ಮೆನ್‌ಷನ್ ಮಾಡಿರುವುದನ್ನು ನೋಡಿಲ್ಲ. ಇದರ ಮೆನ್‌ಷನ್ ಏಕೆ ಆಗುತ್ತಿಲ್ಲ? ಕೇವಲ ಬಜೆಟ್‌ನಲ್ಲಿ ಬರುವಂಥ ಫಿಸ್ಕಲ್ ಡಿಫಿಸಿಟ್ ಏನಿದೆ ಅದರ ಜೊತೆಯಲ್ಲಿ

ಚರ್ಚೆ ಮಾಡಿ, ನಮ್ಮ ಎಕ್ಸ್‌ಪೆಂಡಿಚರ್‌ನ್ನು ಚರ್ಚೆ ಮಾಡುವುದರ ಜೊತೆಯಲ್ಲಿ ನಾವು ಇದೇ ಸದನದ ಮುಂದೆ ಇಟ್ಟು ಸರ್ಕಾರದ ಬೇರೆ ಬೇರೆ ಅಂಗಸಂಸ್ಥೆಗಳೆಲ್ಲವೂ ಎಷ್ಟು ಸಾಲವನ್ನು ತೆಗೆದುಕೊಂಡಿದೆ, ಅದಕ್ಕೆ ಎಷ್ಟು ಪರ್ಸೆಂಟ್ ಬಡ್ಡಿಯನ್ನು ನಾವು ಕೊಡುತ್ತಿದ್ದೇವೆ, ಎನ್ನುವಂಥ ಚಿಂತನೆಯನ್ನು ಈ ಸದನದ ಮುಂದೆ ಇಟ್ಟು ಇದರ ಜೊತೆಗೆ ಅದನ್ನೂ ಕೂಡ ಒಂದು ಕೋಟಿಂಗ್‌ನ್ನು ತೆಗೆದುಕೊಂಡರೆ ಇಡೀ ರಾಜ್ಯದ ಒಂದು ವೈಟ್ ಪೇಪರ್ ಬೇಕೆಂದು ನಾವು ಏನು ಕೇಳುತ್ತಿರುತ್ತೇವೆ, ಇದರಿಂದ ಇಡೀ ರಾಜ್ಯದ ಅರ್ಥವ್ಯವಸ್ಥೆಯ ವೈಟ್ ಪೇಪರ್ ನಮ್ಮ ಮುಂದೆ ಸಿಕ್ಕಿದ ಹಾಗೆ ಆಗುತ್ತಲ್ಲವೇ? ಇದಕ್ಕೆ ಏನಾದರೂ ಕಾನೂನಿನ ಸಮಸ್ಯೆ ಇದೆಯೇ ಎಂದು ನಾನು ತಿಳಿದುಕೊಳ್ಳಲಿಕ್ಕೆ ಬಯಸುತ್ತೇನೆ. ಅದು ಆಗುವಂಥ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದ ಮುಖ್ಯಮಂತ್ರಿಗಳಾದ ತಾವು ಫೈನಾನ್ಸ್‌ನ್ನು ಬಹಳ ಚೆನ್ನಾಗಿ ಕಂಟ್ರೋಲ್ ಮಾಡುವಂಥವರು. ಆದರೆ ಇವತ್ತು ಮುಖ್ಯಮಂತ್ರಿಗಳಾಗಿ ಎರಡು ಜವಾಬ್ದಾರಿಗಳ ಮಧ್ಯದಲ್ಲಿ ತಮಗೆ ಕೆಲವು ಒತ್ತಡಗಳಿಂದ ಎಲ್ಲೋ ಒಂದು ಕಡೆ ಸ್ವಲ್ಪ ಸಮಸ್ಯೆಗಳು ಆಗಿವೆಯೋ ಏನೋ ಎಂದು ನನಗೆ ಅನ್ನಿಸುತ್ತಿದೆ. ಈ ಪುಸ್ತಕದಲ್ಲಿ ಯಾವ ಯಾವ ಸಾಲಕ್ಕೆ ಎಷ್ಟೆಷ್ಟು ಬಡ್ಡಿ ಕೊಡಲಾಗುತ್ತಿದೆ ಎನ್ನುವ ವಿವರ ಇದೆ. ಇವತ್ತು ಬ್ಯಾಂಕ್‌ನವರುಗಳು ಸಾಮಾನ್ಯ ಒಬ್ಬ ವ್ಯಕ್ತಿಯ ಮನೆಗೆ ಹೋಗಿ ಬಾಗಿಲು ತಟ್ಟಿ ನಿಮಗೆ ಎಷ್ಟು ಸಾಲಬೇಕೆಂದು ಕೇಳುವಂಥ ವ್ಯವಸ್ಥೆಗಳು ಇರುವಾಗ ರಾಜ್ಯಸರ್ಕಾರ ನೀಡುತ್ತಿರುವಂಥ ಬಡ್ಡಿಯ ಪ್ರಮಾಣವನ್ನು ನೋಡಿದರೆ ಶೇಕಡ 14, 14.50 14.7, 12.7 ಹೀಗೆ ಇಷ್ಟು ಪರ್ಸೆಂಟ್ ಬಡ್ಡಿಯನ್ನು ಕೊಟ್ಟು ಸಾಲವನ್ನು ಇನ್ನೂ ಕೂಡ ಇಟ್ಟುಕೊಳ್ಳುವಂಥ ಸಂದರ್ಭದಲ್ಲಿ, ಕಡಿಮೆ ಬಡ್ಡಿಯ ಸಾಲವನ್ನು ತೆಗೆದುಕೊಂಡು ಇಂಥ ಸಾಲವನ್ನು ತೀರಿಸುವಂಥ ವ್ಯವಸ್ಥೆಗಳು ಆದಾಗ ಕೊನೆಯ ಪಕ್ಷ ಸೇವಿಂಗ್ಸ್ ಅನ್ನಾದರೂ ಉಳಿಸಿಕೊಳ್ಳಬಹುದಾಗಿತ್ತು ಏನೋ ಎನ್ನುವ ಚಿಂತನೆ ನನ್ನ ಮನಸ್ಸನ್ನು ಕಾಡುತ್ತಿದೆ. ನಾನು ಆಗಲೇ ಹೇಳಿದ ಹಾಗೆ ಬೇರೆ ಬೇರೆ ಸೆಕ್ಟಾರ್ಸ್‌ಗೆ, ಅಟಾನಮಸ್ ಇನ್ಸ್ಟಿಟ್ಯೂಷನ್ಸ್ ಎಂದು ಕರೆದರೂ ಕೂಡ ಸರ್ಕಾರದ ನಿಯಂತ್ರಣದಲ್ಲಿರುವಂಥ ಸಂಸ್ಥೆಗಳು ಎಷ್ಟು ಸಾಲವನ್ನು ಪಡೆದಿವೆ? ಎಷ್ಟು ಸಾಲಕ್ಕೆ ಬಡ್ಡಿಯನ್ನು ಕಟ್ಟಬೇಕು? ಯಾವ ಸಂಸ್ಥೆಗಳಿಗೆ ಕಟ್ಟಬೇಕು ಎನ್ನುವಂಥ ವಿಚಾರದ ಬಗ್ಗೆ ಎಲ್ಲೂ ಹೇಳಿಲ್ಲ. ಸರ್ಕಾರದ ಗ್ಯಾರಂಟಿ ಬಗ್ಗೆ ಈಗ ಏನೋ ಬಿಲ್ ತಂದಿದ್ದೀರಿ. ಇಲ್ಲಿ ನಬಾರ್ಡ್ ಮತ್ತು ಬೇರೆ ಬೇರೆ ಕಡೆಯಿಂದ ಸಾಲವನ್ನು ಪಡೆದಿರುವಂಥ ಸಂದರ್ಭದಲ್ಲಿ ಕೆಲವು ಹಣಕಾಸು ಸಂಸ್ಥೆಗಳಿಗೆ ರಾಜ್ಯಸರ್ಕಾರ ಗ್ಯಾರಂಟಿಯನ್ನು ಕೊಟ್ಟಿದ್ದಾಗ, ಸಾಲವನ್ನು ತೀರಿಸಲಿಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿ ಬಂದಾಗ ಆ ಸಂಸ್ಥೆಗಳ ಮೇಲೆ ದಾವೆಯನ್ನು ಹೂಡುವಂಥ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿರುವಾಗ 3-4 ಪ್ರಕರಣಗಳಲ್ಲಿ ಆ ಒಂದು ಸಂಸ್ಥೆಗೆ ಪಡೆದಿರುವಂಥ ಸಾಲಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿ ಅಲ್ಲ ಎನ್ನುವಂಥ ಉತ್ತರವನ್ನು ಕೂಡ ಕೊಟ್ಟಿದೆ ಎನ್ನುವಂಥ ಅಂಶಗಳನ್ನು ನಾನು ಪತ್ರಿಕೆಗಳ ಮೂಲಕವಾಗಿ ಓದಿದ್ದೇನೆ. ಒಂದು ಸಲ ಸರ್ಕಾರ ಯಾವುದಕ್ಕಾದರೂ ಗ್ಯಾರಂಟಿಯನ್ನು ಕೊಟ್ಟ ನಂತರದಲ್ಲಿ ಆ ಸರ್ಕಾರ ಗ್ಯಾರಟಿಯಾಗಿ ಅಲ್ಲಿ ನಿಲ್ಲಲಿಲ್ಲ ಎನ್ನುವಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ವ್ಯವಸ್ಥೆಗಳು ಇನ್ನು ಮುಂದಕ್ಕೆ ಎಲ್ಲರ ದೃಷ್ಟಿಯಲ್ಲಿ ಯಾವ ರೀತಿಯಾಗಿ ಕಾಣುತ್ತದೆ? ಯಾವುದೇ ಫೈನಾನ್ಸ್‌ನ್ನು ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಇಂಥ ಒಂದು ಸಂಸ್ಥೆಗಳು ಮಾಡುವಂಥ ಸಾಲದ ಮೇಲೆ ಸರ್ಕಾರ ಏನು ನಿಯಂತ್ರಣವನ್ನು ಹೊಂದಿದೆ

ಎನ್ನುವಂಥದ್ದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ ಇನ್ನು ತಾವು ತಮ್ಮ ಬಜೆಟ್‌ನಲ್ಲಿ ಬಹಳ ಇಂಪಾರ್ಟೆನ್ಸ್‌ನ್ನು ಕೊಟ್ಟು 'ಹೌಸಿಂಗ್' ಬಗ್ಗೆ ಹೇಳಿದ್ದೀರಿ. ತಮ್ಮ ಪ್ರಗತಿಯ ಬಗ್ಗೆ ನಾನು ಸ್ವಾಗತವನ್ನು ಮಾಡುತ್ತಾ ದಾಖಲೆಯ ಮನೆಗಳನ್ನು ನಿರ್ಮಾಣ ಮಾಡಲಿಕ್ಕೋಸ್ಕರವಾಗಿ ದಿಟ್ಟವಾದ ಹೆಜ್ಜೆಯನ್ನು ಇಟ್ಟುಕೊಂಡು ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದಲ್ಲಿ ಒಂದು ಕ್ರಾಂತಿಯನ್ನು - You have declared a war - ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಒಂದು ಸಲ ಬಜೆಟ್‌ನ್ನು ನೋಡಿದಾಗ ನನ್ನ ಮನಸ್ಸಿಗೆ ಬಂದಂಥ ಭಾವನೆ ಏನೆಂದರೆ, ಈ ಬಾರಿ 2 ಲಕ್ಷದ 50 ಸಾವಿರ ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ಆದರೆ ತಾವು ಫೈನಾನ್ಸ್ ಅಲೊಕೇಶನ್‌ನಲ್ಲಿ ಎಷ್ಟಕ್ಕೋಸ್ಕರ ಬೇಕೆಂದು ಇದರಲ್ಲಿ ಕೊಟ್ಟಿದ್ದೀರಿ. ತಾವು ಹೌಸಿಂಗ್‌ಗೋಸ್ಕರವಾಗಿ ಇಟ್ಟಂಥ ಹಣ 146 ಕೋಟಿ ರೂಪಾಯಿಗಳು. 146 ಕೋಟಿ ರೂಪಾಯಿಗಳು ಹೇಗೆ ಸಾಧ್ಯ? ತಾವು ಈಗ 48.79 ಕೋಟಿ ರೂಪಾಯಿಗಳಿಗೆ ಲೇಖಾನುದಾನವನ್ನು ಕೇಳಿದ್ದೀರಿ. ರೂರಲ್ ಸಬ್ಸಿಡಿಯನ್ನು ಕೊಡಬೇಕಾದರೆಯೇ 250 ಕೋಟಿ ರೂಪಾಯಿಗಳು ತಮಗೆ ಬೇಕಾಗುತ್ತದೆ. 10 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡಬೇಕಾದರೆ ತಮಗೆ 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಲ್ಲದೆ ಪ್ರಮುಖವಾಗಿ ಈ ಕ್ಷೇತ್ರದಲ್ಲಿ ಪ್ರಗತಿಯನ್ನು ಮಾಡಲಿಕ್ಕೆ ಬೇಕಾಗಿರುವಂಥ ಅಂಶಗಳು ಏನೆಂದರೆ ಇದರಲ್ಲಿ ತಾವು 350 ಕೋಟಿ ರೂಪಾಯಿಗಳನ್ನು 'ಹುಡ್ಕೋ ಸಂಸ್ಥೆಯ' ಮೂಲಕವಾಗಿ ಪಡೆದಿದ್ದೀರಿ. ಇದರಲ್ಲಿ ಈಗಾಗಲೇ 60 ಕೋಟಿ ರೂಪಾಯಿಗಳು ರಿಲೀಸ್ ಆಗಿರುವಂಥದ್ದು ಇದೆ. ಅಂದರೆ 410 ಕೋಟಿ ರೂಪಾಯಿಗಳನ್ನು ಹುಡ್ಕೋ ಮೂಲಕವಾಗಿ ತಾವು ತೆಗೆದುಕೊಂಡು ಈ ಕೆಲಸವನ್ನು ಪ್ರಾರಂಭ ಮಾಡಿಸುತ್ತಿದ್ದೀರಿ. ಆದರೆ ಕಳೆದ ಸಲ ತಾವು ಇನ್ನೂ ಕೂಡ ಪೆಂಡಿಂಗ್ ಇರುವಂಥ ಹಣ 350 ಕೋಟಿ ರೂಪಾಯಿಗಳು. 2001-2002 ಮತ್ತು 2002-2003 ಈ ಸಾಲಿಗೆ ಸಂಬಂಧಪಟ್ಟಂಥ ಬಾಕಿ ಕೊಡಬೇಕಾದ ಹಣದ ಮೊತ್ತವೇ 350 ಕೋಟಿ ರೂಪಾಯಿಗಳು. ಅದರಲ್ಲಿ ಬರಬೇಕಾದ ಬಾಕಿಯನ್ನು ಕಳೆದರೆ ಕೊನೆಯ ಪಕ್ಷ 110 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ತೀರಿಸಬೇಕಾಗಿದೆ. ಹೀಗಾಗಿ ನನಗೆ ಏನು ಅನ್ನಿಸುತ್ತದೆ ಎಂದರೆ, ಎಲ್ಲೋ ಮುಖ್ಯಮಂತ್ರಿಗಳ ಕಣ್ಣಿಗೆ ತಪ್ಪಿ ಅದು 416 ಕೋಟಿ ರೂ. ಇದ್ದುದ್ದು 146 ಕೋಟಿ ರೂ. ಆಗಿದೆಯೇ? ಏಕೆಂದರೆ ಒಬ್ಬ ಕಾಮನ್ ಮ್ಯಾನ್ ಈ ವರ್ಷದ ಗುರಿ ಏನಿದೆ ಅದನ್ನು ತಲುಪುವುದರ ಜೊತೆಗೆ ಎರಡೂವರೆ ಲಕ್ಷಗಳನ್ನು ಮಾಡುತ್ತೇನೆ ಎನ್ನುವ ವ್ಯವಸ್ಥೆಗಳು ಬಂದಾಗ 146 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದಿಟ್ಟು How can We achieve the target? We cannot achieve the target of the previous year itself. ಹಳೆಯದು ಕೊಡಬೇಕಾಗಿರುವುದೇ ಅಷ್ಟು ಇದೆ. ಇಂಥ ಸಂದರ್ಭದಲ್ಲಿ ತಾವು ಏಕೆ ಇಷ್ಟು ಹಣವನ್ನು ತೆಗೆದಿಟ್ಟಿದ್ದೀರಿ? ತಮಗೆ ಏನಾದರೂ ಕನ್‌ಫ್ಯೂಷನ್ ಆಯಿತೆ? ಹಣದ ಶಾರ್ಟೇಜ್ ಇದೆಯೇ? ಇರುವುದಾದರೆ ನಿಮ್ಮ ಗುರಿಯನ್ನು ಕಡಿಮೆ ಮಾಡುತ್ತೀರಾ? ಈ ವಿವರಗಳನ್ನು ಕೇಳುವುದಕ್ಕೆ ನಾನು ಬಯಸುತ್ತೇನೆ. ಅರ್ಬನ್ ಆಶ್ರಯಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಅವರಿಗೆ ನೀವು ಇಂತಿಷ್ಟು ಕೋಟಾ ಎಂದು ಕೊಡುತ್ತಿದ್ದೀರಿ, ಅರ್ಬನ್‌ನಲ್ಲಿ ಆಶ್ರಯಗಳ ಅಚೀವ್‌ಮೆಂಟ್ ಇಲ್ಲವೆಂದು ಕಳೆದ ಸಲ ಬಂದಿದೆ. ಇದಕ್ಕೇನು ಕಾರಣ? ನಗರ ಪ್ರದೇಶಗಳಲ್ಲಿ ಭೂಮಿಯೇ ಇಲ್ಲ, ಭೂಮಿ ಇದ್ದರೆ ತಾನೇ ಯಾವುದಾದರೂ ಮನೆ ಕಟ್ಟುವುದು,

ತಮ್ಮಲ್ಲಿ ಆ ಭೂಮಿಯನ್ನು ಪರ್ಚೇಸ್ ಮಾಡಲಿಕ್ಕೆ ಸರ್ಕಾರಿ ಭೂಮಿಯಿಲ್ಲದಿದ್ದ ಸಂದರ್ಭದಲ್ಲಿ ಅರ್ಬನ್ ಆಶ್ರಯಕ್ಕೆ ಬೇಕಾಗಿರುವಂಥ ಭೂಮಿಯನ್ನು ಪರ್ಚೇಸ್ ಮಾಡಲಿಕ್ಕೆ ಬೇಕಾದ ಹಣವನ್ನು ಅಲೋಕೇಷನ್ ಮಾಡುವಂಥ ಕೆಲಸವನ್ನು ಎಲ್ಲೂ ಕೂಡ ನಾನು ಕಂಡಿಲ್ಲ. ಮತ್ತೊಂದು ಪ್ರಮುಖವಾಗಿ ತಾವು ಹೇಳಿರುವಂಥದ್ದು ಏನೆಂದರೆ, ತಮ್ಮ ಅಲೋಕೇಷನ್ ನಾನು ನೋಡಿದೆ. ಆಶ್ರಯದಲ್ಲಿ 100 ಮನೆಗಳನ್ನು ಕೊಟ್ಟರೆ 50 ಮನೆಗಳನ್ನು ಎಸ್‌ಸಿ-ಎಸ್‌ಟಿಗಳಿಗೆಂದು ಕೊಡುತ್ತೇವೆ, ಆದರೆ ತಮ್ಮ ಅಲೋಕೇಷನ್‌ನಲ್ಲಿ ಎಸ್‌ಇಪಿ ಬೇರೆ ಕೊಟ್ಟಿದ್ದೀರಿ. ಅದಲ್ಲದೆ ಬೇರೆ ಎಕ್ಸ್‌ಪಂಡೀಚರ್‌ನಲ್ಲಿ ತೋರಿಸುವಂಥ ಕೆಲಸ ಆಗಿದೆ. ಆದರೆ ಒಟ್ಟಾರೆಯಾಗಿ ಇರುವಂಥ ಪೂರ್ತಿ ಹಣವನ್ನು ಎಸ್‌ಸಿ-ಎಸ್‌ಟಿಗೆ ಕೊಡುವಂಥ ಸಂದರ್ಭದಲ್ಲಿ ಎಕ್ಸ್‌ಪಂಡಿಚರ್‌ಗೆ ಸಮಸ್ಯೆಗಳು ಆಗುವಂಥದ್ದರಲ್ಲಿ, ಏಸ್‌ಇಪಿ ಮತ್ತು ಬೇರೆ ಎನ್ನುವಂಥ ರೀತಿಯಲ್ಲಿ ಎಕ್ಸ್‌ಪಂಡೀಚರ್‌ಗೆ ತೋರಿಸಿರುವುದರಿಂದ ಕಳೆದ ಸಲ ಕೂಡ ತಾವು ಕೊಟ್ಟಂಥ ಹಣದಲ್ಲಿ ಪೂರ್ಣವಾದ ಉಪಯೋಗವನ್ನು ಎಸ್‌ಇಪಿ ನಲ್ಲಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ, ಇಲ್ಲಿಯವರೆವಿಗೂ ತಾವು ಕೊಟ್ಟಿರತಕ್ಕಂಥ ಗುರಿಯ ಪ್ರಕಾರ 92.5 ಕೋಟಿ ರೂಪಾಯಿಗಳನ್ನು ಸರ್ಕಾರ ಆಗಿರುವಂಥ ಪ್ರೋಗ್ರೆಸ್‌ಗೆ ನೀಡುವಂಥ ಅವಶ್ಯಕತೆ ಇದೆ. ಆ ಹಣವನ್ನು ಕೊಡುವಂಥ ಕೆಲಸ ಇನ್ನೂ ಆಗಿಲ್ಲ. ಕಳೆದ ಸಲ ತಾವು ಬಜೆಟ್ ಆದ ನಂತರ ಉತ್ತರವನ್ನು ಕೊಡುವಾಗ ಒಂದು ಘೋಷಣೆಯನ್ನು ಮಾಡಿದ್ದೀರಿ. ಅರ್ಬನ್ ಆಶ್ರಯಕ್ಕೆ ಸಂಬಂಧಪಟ್ಟಹಾಗೆ ಇನ್‌ಫ್ರಾಸ್ಟಕ್ಚರ್‌ಗೆ ನಾವು ಪ್ರಾವಿಜನ್ ಮಾಡಲಿಕ್ಕೆ ಆಗಿಲ್ಲ. ಅಲ್ಲಿಗೆ ಬೇಕಾಗಿರುವಂಥ ವಿದ್ಯುತ್, ಕುಡಿಯುವ ನೀರು, ರಸ್ತೆ, ಇವುಗಳಿಗೆ ಮುಂದಿನ ಬಜೆಟ್‌ನಲ್ಲಿ ನಾನು ಪ್ರೊವೈಡ್ ಮಾಡುತ್ತೇನೆಂದು ಹೇಳಿದ್ದಿರಿ, ಆದರೆ ಈ ಬಜೆಟ್‌ನಲ್ಲಿ ಅದರ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಅದರ ಜೊತೆಗೆ ಒಂದು ಪ್ರಗತಿಯನ್ನು ಮಾಡಿದ್ದೀರಿ, ಕೇಂದ್ರ ಸರ್ಕಾರ ಈ ಬಾರಿ "ಕುಟೀರ ಜ್ಯೋತಿ" ಯೋಜನೆಯಡಿಯಲ್ಲಿ ತಾವು ಕೊಟ್ಟಿರುವಂಥ ಹಣ ಏನಿದೆ ಅದರ ಮೂಲಕ ಆಶ್ರಯ ಮನೆಗಳಿಗೆ 14 ಲಕ್ಷ ರೂಪಾಯಿಗಳು, ರಾಜ್ಯ ಸರ್ಕಾರಕ್ಕೆ ಬಂದಂಥ ಒಂದು ಲಕ್ಷ ಕನೆಕ್ಷನ್ ಏನಿದೆ ಅದನ್ನು ಕೊಡಲಿಕ್ಕೆ ತಾವು ಯೋಜನೆ ತೆಗೆದುಕೊಂಡಿದ್ದೀರಿ. ಆದರೆ ರಾಜ್ಯ ಸರ್ಕಾರದ ಪಾಲೇನು? ಇದನ್ನು ಎಲ್ಲೂ ಹೇಳಿಲ್ಲ. ಕುಟೀರ ಜ್ಯೋತಿಗೆ ಕೇಂದ್ರ ಸರ್ಕಾರ ಕೊಟ್ಟಿರುವ 52 ಕೋಟಿ ರೂಪಾಯಿಗಳ ಜೊತೆಯಲ್ಲಿ, ಕೇಂದ್ರದ ಪಾಲು ಇನ್ ಫ್ರಾಸ್ಟಕ್ಚರ್‌ಗೆ 52 ಕೋಟಿ ರೂ ಇದೆ. ನಿಮ್ಮ ಪಾಲೆನು? ಇದನ್ನು ಹೇಳುವಂಥ ಕೆಲಸ ಮಾಡಿಲ್ಲ. ಆದ್ದರಿಂದ, ನನ್ನ ಒಂದು ಪ್ರಶ್ನೆ ಏನೆಂದರೆ, ತಾವು ಬಜೆಟ್‌ನಲ್ಲಿ ಹೌಸಿಂಗ್‌ನಲ್ಲಿ ಸಾಧನೆ ಮಾಡುತ್ತೇನೆ ಎನ್ನುವ ಏನು ಘೋಷಣೆ ಮಾಡಿದ್ದೀರಿ, ಅದಕ್ಕೆ ಹಣವನ್ನು ಅಲೋಕೇಷನ್ ಮಾಡಿಲ್ಲದಿರುವುದು ನಮ್ಮ ಮುಂದಿರುವ ಸ್ಪಷ್ಟವಾದ ವಿಚಾರ. ಇನ್ನು ಪವರ್ ಸೆಕ್ಟರ್‌ಗೆ ಸಂಬಂಧಪಟ್ಟಹಾಗೆ ಈಗಾಗಲೇ ಸರ್ಕಾರ ಕೆಇಆರ್‌ಸಿ ಮುಂದೆ 10.53 ಪರ್ಸೆಂಟ್ ಹೈಕ್‌ಗಾಗಿ ತಾವು ಕೇಳಿದಿರಿ, ಆದರೆ ಅಲ್ಲಿ 2.02 ಪರ್ಸೆಂಟ್ ಮಾತ್ರ ಅಂದರೆ 149 ಕೋಟಿ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆ ಅವರು ಮಾಡಿದರು, ಆದರೆ ನಮ್ಮ ಮುಂದೆ ಇರುವಂಥ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಘೋಷಣೆ ಮಾಡಿದ್ದು 2352 ಕೋಟಿ ರೂಪಾಯಿಗಳ ಹಣವನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದಿರಿ. ನನಗೆ ತಿಳಿದ ಪ್ರಕಾರ ವಿಶ್ವಬ್ಯಾಂಕಿನ ನಾರ್ಮ್ಸ್ ಪ್ರಕಾರದಲ್ಲಿ ಅವರ ಪತ್ರದ ಆಧಾರದ ಮೇಲೆ ತಾವು ಹಣವನ್ನು

ಕೊಟ್ಟಿಲ್ಲವೆಂದೋ, ಆದರೆ ತಾವು ಕೊಟ್ಟಂಥ ಹಣ ಕಳೆದ ಬಾರಿ 1515 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಮಧ್ಯೆ ತಾವೇ ಹೇಳಿರುವಂತೆ ಅಚೀವ್‌ಮೆಂಟ್‌ನ್ನು ನಾವು ಮಾಡಲಿಕ್ಕೆ ಆಗಲಿಲ್ಲ ಎನ್ನುವಂಥ ವಿಷಯವನ್ನು ಆಯವ್ಯಯದಲ್ಲಿ ಹೇಳಿದ್ದೀರಿ. ಅದು ಈ ರೀತಿ ಇದೆ.

"ರಾಜ್ಯ ಸರ್ಕಾರವು ವಿದ್ಯುತ್ ವಲಯಕ್ಕೆ 2340 ಕೋಟಿ ರೂಪಾಯಿಗಳ ಸಹಾಯಧನ, ಬೆಂಬಲವನ್ನು ನೀಡಿದೆ, ಆದರೂ ಸಹ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆಯಲ್ಲಿ ವಿದ್ಯುತ್ ವಲಯದಲ್ಲಿ ಗ್ರಾಹಕರ ಅತೃಪ್ತಿಯನ್ನು ಎದುರಿಸುತ್ತಿದೆ." ಇದನ್ನು ನೇರವಾಗಿ ತಾವೇ ಡಿಕ್ಲೇರ್ ಮಾಡಿದ್ದೀರಿ. 2340 ಕೋಟಿ ರೂಪಾಯಿಗಳೆಂದು ಹೇಳಿ ಜೊತೆಗೆ ನೀಡಲಾಗಿದೆ ಎಂದು ಇದೆ. ಹಾಗಾದರೆ ಕೆಇಆರ್‌ಸಿಯವರ ಮುಂದೆ ನಾಲ್ಕು ಎಸ್ಕಾಂಗಳು, ಕೆಪಿಟಿಸಿಎಲ್ ಒಂದು ಫೈಲಿಂಗ್ ಮಾಡಿದೆ. ಅದರ ಪ್ರಕಾರ ರಾಜ್ಯ ಸರ್ಕಾರ ನೀಡಿರುವಂಥ ಹಣ 1515 ಕೋಟಿ ರೂಪಾಯಿ ಎಂದು ಇದೆ. ಯಾವುದು ಸತ್ಯವೆಂದು ಒಪ್ಪಿಕೊಳ್ಳಲಿ? 2340 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎನ್ನುವುದನ್ನು ಒಪ್ಪಿಕೊಳ್ಳಲೇ ಅಥವಾ 4 ಎಸ್ಕಾಂಗಳು ಹೇಳಿರುವ ರೀತಿಯಲ್ಲಿ 1515 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ನಿಜ ಎಂದು ಒಪ್ಪಿಕೊಳ್ಳಲೇ ಇದು ಸದನಕ್ಕೆ ಗೊತ್ತಾಗಬೇಕಾದ ವಿಷಯ. ಇಷ್ಟು ಹಣವನ್ನು ಕೊಟ್ಟರೂ ಜನಗಳ ಮೇಲೆ ಹೇಗೆ ಹೊರೆ ಬಂತು ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ತಾವು ಹೇಳಿರುವಂತೆ 1511 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದರೆ 10.36 ಪರ್ಸೆಂಟ್ ಕೊಟ್ಟಂತೆ ಆಯಿತು. ಈ ಬಾರಿ ತಮ್ಮ ಅಲೋಕೇಷನ್ 1099.99 ಕೋಟಿ ರೂಪಾಯಿಗಳನ್ನು ಈ ಸಲದ ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ಇದು ತಮ್ಮಲ್ಲಿ ತೋರಿಸಿರುವಂಥ ಒಂದು ಪ್ರಗತಿ. ಅಂದರೆ, ಅದರ ಜೊತೆಯಲ್ಲಿ ಕಳೆದ ಬಾರಿ ಮತ್ತು ಈ ವರ್ಷದ ಬಜೆಟ್‌ನಲ್ಲಿ ಜನಗಳ ಸಹಕಾರವನ್ನು ಕೇಳುತ್ತಾ ಆರ್ಥಿಕ ಶಿಸ್ತು ತರುವಂಥ ಕೆಲಸ ನಾವು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ತಾವು ಕೊಟ್ಟಿರುವಂಥ 1099.99 ಕೋಟಿ ರೂ. ಯಾರಿಗಾಗಿ? ಕಳೆದ ಬಾರಿ ಕೊಟ್ಟಾಗಲೂ ಪ್ರಗತಿ ಕಾಣದಿದ್ದಂಥ ಸಂದರ್ಭದಲ್ಲಿ ಯಾವುದಕ್ಕೋಸ್ಕರವಾಗಿ ಈ ಹಣವನ್ನು ಕೊಟ್ಟಿದ್ದೀರಿ? ಇಡೀ ರಾಜ್ಯ ನಿರೀಕ್ಷೆ ಮಾಡಿರಲಿಲ್ಲ. ತಾವು ಈ ಸಲದ ಬಜೆಟ್‌ನಲ್ಲಿ ಶೇಕಡ 5ರಷ್ಟು ಹಣವನ್ನು valorem tax ವ್ಯಾಲ್ಯೂ ಮೇಲೆ ಯಾರ್ಯಾರು ಎಷ್ಟೆಷ್ಟು ವಿದ್ಯುತ್‌ನ್ನು ಉಪಯೋಗಿಸುತ್ತಾರೆ ಅದರ ಆಧಾರದ ಮೇಲೆ ಐದು ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕುವಂಥ ನಿರ್ಧಾರವನ್ನು ತಾವು ಕೈಗೊಂಡಿದ್ದೀರಿ. ಅಂದರೆ, ಮುಂಚನೇ, ಈಗಾಗಲೇ ವಿದ್ಯುತ್ ಇಲ್ಲದೇ ಸಮಸ್ಯೆಗಳನ್ನು ಎದುರಿಸುತ್ತಾ ಇರುವಂಥ ಪರಿಸ್ಥಿತಿಯಲ್ಲಿ ಐದು ಪರ್ಸೆಂಟ್, ಯಾವ ಕಾನೂನಿನ ಅಡಿಯಲ್ಲಿ ಈ ಅವಕಾಶ ಸಿಕ್ಕಿತು? ಯಾವುದೇ ದರವನ್ನು ನೀವು ಏರಿಕೆ ಮಾಡುವಾಗ ಕೆಇಆರ್‌ಸಿ ಮುಂದೆ ವಿಚಾರವನ್ನು ಇಡಬೇಕಾಗಿದೆ. ಆದರೆ ಸರ್ಕಾರ ಈ ಬಾರಿ ಕೆಇಆರ್‌ಸಿ ಮುಂದೆ ಫೈಲ್ ಮಾಡುವಂಥ ಸಂದರ್ಭದಲ್ಲಿ ಐದು ಪರ್ಸೆಂಟ್‌ನ ವಿಚಾರವನ್ನು ಎತ್ತಿಲ್ಲ. ಆದರೆ ಇಲ್ಲಿ ಐದು ಪರ್ಸೆಂಟ್ ಟ್ಯಾಕ್ಸ್‌ನ್ನು ಏನು ವಿದ್ಯುತ್ತಿನ ಮೇಲೆ ಹಾಕಿದ್ದೀರಿ, ಇದು ವಿಶೇಷವಾಗಿ ರೈತನ ಮೇಲೆ, ಸಾಮಾನ್ಯ ಗ್ರಾಹಕನ ಮೇಲೆ ಆಗುವಂಥ ದೊಡ್ಡ ಹೊರೆ ಏನಿದೆ ಅದನ್ನು ನಿರೀಕ್ಷಣೆ ಮಾಡಿರಲಿಲ್ಲ. ಮಾನ್ಯ ಅಧ್ಯಕ್ಷರೆ ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ಕಡೆ ತಾವು ಐದು ಪರ್ಸೆಂಟ್ ಹಾಕಿದಿರಿ, ಕೆಇಆರ್‌ಸಿ ಯವರು ಈಗಾಗಲೇ ನಮ್ಮ ಮುಂದೆ ಇರುವಂತೆ ಅಷ್ಟು ಪರ್ಸೆಂಟ್‌ನ್ನು ಹಾಕಿದ್ದಾರೆ.

ಅದರ ಜೊತೆಯಲ್ಲಿ ವಿಶೇಷವಾಗಿ ಕೆಪಿಟಿಸಿಎಲ್, ಕೆಇಆರ್‌ಸಿ ಮುಂದೆ ನಿನ್ನೆಯ ದಿವಸ ಒಂದು ಫೈಲ್ ಮಾಡಿದೆ.

4.40 ಪಿ.ಎಂ.

ಇದರಲ್ಲಿ ಅವರು ಏನು ಹೇಳುತ್ತಿದ್ದಾರೆಂದರೆ, ತಾವೇನು 5 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ, ಇದನ್ನು ಬಿಟ್ಟು ಈಗಾಗಲೇ ಕೊಟ್ಟಿರತಕ್ಕಂಥ ಹಣ ನಮಗೆ ಸಾಕಾಗುವುದಿಲ್ಲ. ಆದ್ದರಿಂದ, ನಮಗೆ ಅಡಿಷನಲ್ ಹಣವನ್ನು ಕೊಡಬೇಕೆಂದು ಕೇಳಿದ್ದಾರೆ. ಅಂದರೆ, 10.56 ಪರ್ಸೆಂಟ್ ಹಣವನ್ನು ಅಡಿಷನಲ್ ಆಗಿ ಕೊಡತಕ್ಕಂಥ ಕೆಲಸ ಆಗಬೇಕೆಂದು ದಿನಾಂಕ: 24.03.2003ರಂದು ಕೆ.ಇ.ಆರ್.ಸಿ. ಮುಂದೆ ನಾಲ್ಕು ಎಸ್ಕಾಮ್‌ಗಳ ಪರವಾಗಿ ಫೈಲ್ ಮಾಡಿದ್ದಾರೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರಾದ ಶ್ರೀ ಮನೋಹರ್ ಹೆಚ್. ತಹಶೀಲ್ದಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಸಂದರ್ಭದಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, Petition seeking review of Commission order: Inviting kind refence of Hon'ble Commission to Tariff order-2003 issued on 10.3.2003. I am directed to submit herewith 6 copies of Review petition praying for review of the Commission's Tariff order." ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರತಕ್ಕಂಥದು ಏನೆಂದರೆ ಇದರಲ್ಲಿ ಅವರು ಏನು ಹೇಳಿದ್ದಾರೆಂದರೆ I am directed to submit herewith the six copies' who has directed? The KPTCL to file a Revision petition before the KERC for 10.52% hike. ಪ್ರಗತಿಪರ ಸುಧಾರಣೆ ಮಾಡುವುದಕ್ಕೋಸ್ಕರ ನಾವು ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್‌ನ್ನು ಕಡಿಮೆ ಮಾಡುವುದಕ್ಕೆ ನಾವು ಹೊರಟಿದ್ದೇವೆಂದು ತಾವು ಹೇಳಿದ್ದೀರಿ. ತಾವು ಇದಕ್ಕೆ ಪರ್ಮಿಷನ್ ಕೂಡ ಕೊಟ್ಟಿದ್ದೀರಿ. ಆದರೆ, ಮತ್ತೆ ರಿವಿಜನ್ ಮಾಡುವುದಕ್ಕೆ ಕೆ.ಇ.ಆರ್.ಸಿ. ಮುಂದೆ ಹೋಗಿದ್ದೀರಿ. ಅಂದರೆ 2 ಪರ್ಸೆಂಟ್‌ನ್ನು 1ನೇ ತಾರೀಖಿನಿಂದ ಜಾಸ್ತಿ ಮಾಡುತ್ತೇವೆ. ಇದರ ಮೇಲೆ 5 ಪರ್ಸೆಂಟ್ ಟ್ಯಾಕ್ಸ್ ಹಾಕಿ ನಮ್ಮ ರಾಜ್ಯದಲ್ಲಿ ಇರತಕ್ಕಂಥ 1.25 ಕೋಟಿ ಗ್ರಾಹಕರು ಮತ್ತು ಇದರಲ್ಲಿ ಸೇರಿಕೊಂಡಿರತಕ್ಕಂಥ ರೈತರ ಮೇಲೆ ಬರೆ ಹಾಕತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಿ. ಮತ್ತೆ 10.53 ಪರ್ಸೆಂಟ್ ಜಾಸ್ತಿ ಮಾಡುವುದಕ್ಕೆ ಕೆ.ಇ.ಆರ್.ಸಿ ಮುಂದೆ ಫೈಲ್ ಮಾಡುತ್ತೇವೆ ಎನ್ನತಕ್ಕಂಥ ಅರ್ಥ ಏನು? who has given permission for KPTCL to go for the revision? ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಈಗ ಇರತಕ್ಕಂಥ ವ್ಯವಸ್ಥೆಯೊಳಗೆ ರಾಜ್ಯದಲ್ಲಿ ಹಣಕಾಸಿನ ಕೊರತೆ ಇದೆ ಎಂದು ಹೇಳುತ್ತಾ ಮತ್ತೆ 413.83 ಕೋಟಿ ರೂಪಾಯಿಗಳ ಬರ್ಡನ್ ಏನಿದೆ ಅದನ್ನು ಕಡಿಮೆ ಮಾಡಿಕೊಳ್ಳುವುದಕ್ಕೋಸ್ಕರ ಇದನ್ನು ಗ್ರಾಹಕರ ಮೇಲೆ ಹಾಕುವುದಕ್ಕೆ ಪರ್ಮಿಷನ್ ಕೊಡಬೇಕೆಂದು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಒಂದು ಆ್ಯಕ್ಟ್‌ನ್ನು ತಂದಿದ್ದರು. ಅದರ ಪ್ರಕಾರವೇ ಒಂದು ಆರ್ಥಿಕ ವರ್ಷದಲ್ಲಿ ಒಂದು ಸಾರಿ ಮಾತ್ರ ರಾಜ್ಯದಲ್ಲಿ ವಿದ್ಯುತ್ ದರವನ್ನು ಏರಿಸುವುದಕ್ಕೆ ಸಾಧ್ಯವಿದೆ. ಎನ್ನತಕ್ಕಂಥ ಆ್ಯಕ್ಟ್‌ನ್ನು ಇಲ್ಲಿ ನಾವೇ ಪಾಸ್ ಮಾಡಿಕೊಟ್ಟಿದ್ದೇವೆ. ಈ ರೀತಿಯಾದ ಒಂದು ಕಾನೂನು ಮಾಡಿದ ಮೇಲೂ ಕೂಡ ಇದರ ವಿರುದ್ಧವಾಗಿ ಒಂದು ವರ್ಷದಲ್ಲಿ ಎರಡು ಬಾರಿ

ರಿವಿಜನ್ ಪೆಟಿಷನ್ ಫೈಲ್ ಮಾಡಿದ್ದೀರಿ. who has permitted the KPTCL ಎನ್ನತಕ್ಕಂಥದ್ದನ್ನು ಇಂಧನ ಖಾತೆ ಹೊಂದಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಯವರೆ ಹೇಳಬಾಕಾಗುತ್ತದೆ. ಇದಕ್ಕೆ ತಾವು ಒಂದು ವೇಳೆ ಪರ್ಮಿಷನ್ ಕೊಡದಿದ್ದಲ್ಲಿ, ದಯವಿಟ್ಟು ಈ ಸದನದ ಮೂಲಕ ಅವರು ಹಾಕಿರತಕ್ಕಂಥ ರಿವಿಜನ್ ಪೆಟಿಷನ್ ಹಿಂದಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಯಾವರೀತಿಯಾಗಿ ಸ್ಪಂದಿಸುತ್ತದೆ ಎನ್ನತಕ್ಕಂಥದ್ದನ್ನು ನೋಡಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಈ ಒಂದು ವಿಷಯವನ್ನು ಬಜೆಟ್‌ನಲ್ಲಿ ಏಕೆ ಹೇಳಿದ್ದಾರೆ ಎನ್ನತಕ್ಕಂಥದು ನನಗೆ ಗೊತ್ತಾಗಿಲ್ಲ. ಬಜೆಟ್ ಪುಸ್ತಕದ ಪ್ಯಾರಾ 101ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಎಂದರೆ, "ಪ್ರಸ್ತುತ ವಿದ್ಯುತ್ ವಲಯದ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಶೇಕಡ 32 ರಿಂದ ಮುಂದಿನ ಆರ್ಥಿಕ ವರ್ಷದಲ್ಲಿ ಶೇಕಡ 30ಕ್ಕೆ ಇಳಿಸಬೇಕೆನ್ನುವ ಬಗ್ಗೆ" ತಮ್ಮ ಗುರಿಯನ್ನು ಕೊಟ್ಟಿದ್ದೀರಿ. ಆದರೆ, ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದೇನೆಂದರೆ, 1000 ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕ್ ಸಂಸ್ಥೆಯಿಂದ ಸಾಲ ತೆಗೆದುಕೊಂಡು ಬಂದಿದ್ದೀರಿ. ಈ ಹಣವನ್ನು ಎಲ್ಲಿ ಇನ್‌ವೆಸ್ಟ್ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ತಾವು ತಿಳಿಸಬೇಕು. ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್‌ನ್ನು ಕಡಿಮೆ ಮಾಡುವುದಕ್ಕೋಸ್ಕರ ನಾನು ಈಗಾಗಲೇ ಹೇಳಿದ ಹಾಗೆ ತಾವು ಬಹಳಷ್ಟು ಪ್ರಯತ್ನಗಳನ್ನು ಮಾಡಿದ್ದೀರಿ. ಇದಕ್ಕೆ ಎ.ಬಿ.ಡಿ.ಬಿ. ಯಿಂದ ಮತ್ತು ವಿಶ್ವಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡಿದ್ದೀರಿ. ಈ ಹಣವನ್ನು ಎಲ್ಲಿ ಖರ್ಚು ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ತಿಳಿಸಬೇಕು? ಈ ವರ್ಷ ತಮ್ಮ ಸರ್ಕಾರ ಕೆ.ಇ.ಆರ್.ಸಿ. ಮುಂದೆ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಶೇಕಡ 24 ಪರ್ಸೆಂಟ್‌ನಷ್ಟು ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್ ಇರಬೇಕಾಗಿತ್ತು. ಆದರೆ, ತಾವು ಕೊಟ್ಟಿರತಕ್ಕಂಥದ್ದು ಆಶ್ಚರ್ಯ ತರುವಂಥ ವಿಚಾರ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ತಾವು ಕೊಟ್ಟಿರುವಂಥ ಹಣ ಎಷ್ಟು ಎಂದು ಸ್ಪಷ್ಟಪಡಿಸಬೇಕೆಂದು ನಾನು ಈಗಾಗಲೇ ಕೇಳಿದ್ದೆ. ಇದೂ ಅಲ್ಲದೆ ಮತ್ತೊಂದು ಮಾತನ್ನು ಪ್ಯಾರಾ 100ರಲ್ಲಿ ಹೇಳಿದ್ದೀರಿ. ಅದೇನೆಂದರೆ, ಈಗ ವಿದ್ಯುತ್‌ವಲಯದ ಕೊರತೆ ಹೆಚ್ಚು ಕಡಿಮೆ ರಾಜ್ಯದ ಒಟ್ಟಾರೆ ರಾಜಸ್ವ ಕೊರತೆಗೆ ಸಮನಾಗಿದೆ ಎಂದು ಹೇಳಿದ್ದೀರಿ. ಅಂದರೆ, ನಮ್ಮ ಮುಂದೆ ಇರತಕ್ಕಂಥ ಕೊರತೆ ಏನಿದೆ ಅಷ್ಟು ಹಣವನ್ನು ವಿದ್ಯುತ್ ವಲಯಕ್ಕೆ ಕೊಡುತ್ತಿದ್ದೇವೆಂದು ತಾವು ಹೇಳುತ್ತಿದ್ದೀರಿ. ತಾವು 1515 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ 2600 ಕೋಟಿ ರೂಪಾಯಿಗಳು ನಿಮ್ಮ ಟೋಟಲ್ ಡಿಫಿಶಿಯಟ್ ಇದೆ. ಅಂದರೆ, ಈ ಹಣವನ್ನು ಕೊಡಲಿಕ್ಕೆ ಆಗಲಿಲ್ಲ ಎಂದು ಹೇಳಬೇಕು. ಅಥವಾ ಕೊಟ್ಟಿದ್ದರೆ, ಅದರ ಉಪಯೋಗ ಎಲ್ಲಿ ಆಗಿದೆ ಎನ್ನತಕ್ಕಂಥದ್ದನ್ನು ಮತ್ತು ಯಾವ ಅಕೌಂಟ್‌ನಲ್ಲಿ ಆಗಿದೆ ಎನ್ನತಕ್ಕಂಥದ್ದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ ನಾನು ಕೇಳುವುದೇನೆಂದರೆ, ಇದಕ್ಕೆ ತಾವೇ ಪರ್ಮಿಷನ್ ಕೊಟ್ಟರೆ ಹೇಗೆ? ಕೆಪಿಟಿಸಿಎಲ್ ರವರಿಗೆ 30 ಪರ್ಸೆಂಟ್‌ವರೆಗೆ ಮಾತ್ರ ಇಳಿಸಿ ಎಂದು they have declared that in this year they will bring down the Transmission & Distribution loss an theft for 28% ಎಂದು ಅವರೇ ಕೆ.ಇ.ಆರ್.ಸಿ. ಮುಂದೆ ಡಿಕ್ಲೇರ್ ಮಾಡಿದ್ದಾರೆ. 30 ಪರ್ಸೆಂಟ್‌ಗೆ ತಾವೇ ಪರ್ಮಿಷನ್ ಕೊಟ್ಟು 2 ಪರ್ಸೆಂಟ್ ಹೊಡೆಯತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ. 1 ಪರ್ಸೆಂಟ್ ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್

ಉಳಿಸಿದರೆ ಈ ರಾಜ್ಯಕ್ಕೆ ನಾವು 500 ಕೋಟಿ ರೂಪಾಯಿಗಳನ್ನು ಉಳಿಸಬಹುದಾಗಿದೆ. ಆದ್ದರಿಂದ, 2 ಪರ್ಸೆಂಟ್‌ಗೆ ತಾವೇ ಪರ್ಮಿಷನ್ ಕೊಟ್ಟರೆ 1000 ಕೋಟಿ ರೂಪಾಯಿಗಳನ್ನು ಲೂಟಿ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಂತಾಗಲಿಲ್ಲವೆ? ಈ ರೀತಿ ಏಕೆ ಮಾಡಿದ್ದೀರಿ? ಬಜೆಟ್ ಪುಸ್ತಕ ಪ್ಯಾರಾ 102 ರಲ್ಲಿ ಒಳ್ಳೆಯ ವಿಷಯವನ್ನು ಹೇಳಿದ್ದೀರಿ. ನಾನೂ ಕೂಡ ಕೆಇಆರ್‌ಸಿ ಮುಂದೆ ಫೈಲ್ ಮಾಡತಕ್ಕಂಥ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಿದ್ದೆ. ಏನೆಂದರೆ, ತಾವು ಕೊಡತಕ್ಕಂಥ ಹಣ ಪೈಟುಪೈ ತಾವು ಎಲ್ಲರ ತಲೆಯ ಮೇಲೆ ಹೊಡೆದು ಹಣವನ್ನು ವಸೂಲ್ಮಾಡಿ ಯಾರೋ ತಿನ್ನುವುದಕ್ಕೋಸ್ಕರ ಕೊಡಬಾರದು ಎನ್ನತಕ್ಕಂಥ ನಮ್ಮ ವಿಚಾರ ಏನಿದೆ, ಅದನ್ನು ತಾವು ನೇರವಾಗಿ ಏನು ಹೇಳಿದ್ದೀರಿ ಎಂದರೆ, ಸಬ್ಸಿಡಿಯನ್ನು ನೇರವಾಗಿ ರೈತರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಇದು ಯಾವ ರೀತಿ ಎಂದು ತಾವು ಹೇಳಬೇಕು? ರೈತನ ಹೆಸರಿನಲ್ಲಿ ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್‌ಗೆ ಈಗಾಗಲೇ ಕಡಿಮೆ ಹಣವೇನೂ ಕೊಟ್ಟಿಲ್ಲ. ಆ ಹಣ ಏನಾಗಿದೆ ಎಂದು ಹೇಳಬೇಕು. ಇವತ್ತಿನ ದಿವಸ ಯಾವುದೇ ರೀತಿಯ ಪ್ರೋಗ್ರೆಸ್ ಆಗದೇ ಇರುವಾಗ ಸರ್ಕಾರ ದಯಮಾಡಿ ಹೊರಕ್ಕೆ ಬಂದು ನೋಡಬೇಕಾಗುತ್ತದೆ. ರೈತರು ಉಪಯೋಗಿಸತಕ್ಕಂಥ ಕರೆಂಟ್‌ಗೆ ಇಷ್ಟು ಪರ್ಸೆಂಟ್ ಸಬ್ಸಿಡಿ ಕೊಡುತ್ತೇನೆಂದು ಹೇಳಿ ಅದಕ್ಕಾಗಿ ಒಂದು ಕಾರ್ಡ್ ಇಷ್ಯೂ ಮಾಡಿ. ಆತ 100 ರೂಪಾಯಿಗಳಷ್ಟು ಉಪಯೋಗ ಮಾಡಿದರೆ ಆತನಿಗೆ 25 ರೂಪಾಯಿಗಳಷ್ಟು ಉಪಯೋಗ ಮಾಡಿದರೆ ಆತನಿಗೆ 75 ರೂಪಾಯಿಗಳಷ್ಟು ಈ ವರ್ಷ ಸಬ್ಸಿಡಿ ಕೊಡಲಾಗುತ್ತದೆ ಎಂದು ಹೇಳಿ. ಇದನ್ನು ನೇರವಾಗಿ ಆತ ಕಾರ್ಡ್‌ನ ಮೂಲಕ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಬೇಕು. ಇವತ್ತು ನಮ್ಮಲ್ಲಿರತಕ್ಕಂಥ ನಾಲ್ಕು ಎಸ್ಕಾಮ್‌ಗಳಲ್ಲಿ ತಾವು ಏನು ಮಾಡುತ್ತಿದ್ದೀರಿ ಎಂದರೆ,ಇವತ್ತು ಯಾರು ಜಾಸ್ತಿ ಕಳ್ಳತನ ಮಾಡುತ್ತಿದ್ದಾರೆ ಅಂಥವರಿಗೆ ಹೆಚ್ಚಿನ ಲಾಭವನ್ನು ಕೊಡುತ್ತಿದ್ದೀರಿ. ಈ ಸಾರಿ ಬೆಂಗಳೂರಿನ ಬೆಸ್ಕಾಮ್‌ನವರು ಸುಧಾರಣೆಯನ್ನು ಮಾಡಿದ್ದಾರೆ. ಆದರೆ, ಇವರಿಗೆ ಕೇವಲ 400 ಕೋಟಿ ರೂ. ಹಣವನ್ನು ಕೊಟ್ಟಿದ್ದೀರಿ. ಇದು ಬಹಳ ಕಡಿಮೆ ಆದರೆ, ಬೆಸ್ಕಾಮ್‌ನವರು ಅತೀ ಹೆಚ್ಚಿನ ಹಣವನ್ನು ಲೂಟಿ ಮಾಡಿದ್ದಾರೆ. ಅವರಿಗೆ ನೀವು 800 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈ ರೀತಿಯಾಗಿ ಲೂಟಿ ಮಾಡುವವರಿಗೆ ಕೊಡುವ ಬದಲು ನೇರವಾಗಿ ರೈತರಿಗೆ ತಾವು ಕೊಡತಕ್ಕಂಥ ಹಣ ಏನಿದೆ, ಅದು ಇವತ್ತಿನದಿವಸ ಭಾಗ್ಯ ಜ್ಯೋತಿ ಅಥವಾ ಕುಠೀರ ಜ್ಯೋತಿಗಾಗಲಿ ಅಥವಾ ರೈತನ ಪಂಪ್‌ಸೆಟ್‌ಗೆ ನೇರವಾಗಿ ಆ ಒಂದು ಸಬ್ಸಿಡಿ ಹಣವನ್ನು ಮುಟ್ಟಿಸುವಂಥ ಕೆಲಸವನ್ನು ಮಾಡಿದರೆ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅನಂತರ ವಿದ್ಯುತ್ ವಲಯದಲ್ಲಿ ಎಲ್ಲೆಲ್ಲಿ ಸಮಸ್ಯೆ ಇದೆ, ಅದನ್ನು ಸರಿ ಮಾಡಬಹುದೆಂಬುದು ನನ್ನ ಭಾವನೆಯಾಗಿದೆ. ಹಾಗೆಯೇ ಪ್ಯಾರಾ 103ರಲ್ಲಿ ಏನು ಹೇಳಿದ್ದಾರೆ ಎಂದರೆ, "ವಿದ್ಯುತ್ ವಲಯಯನ್ನು ಖಾಸಗೀಕರಣಗೊಳಿಸಲು ನನ್ನ ಸರ್ಕಾರ ಬದ್ಧವಾಗಿದ್ದು,ಈ ನಿಟ್ಟಿನಲ್ಲಿ 2003-2004ನೇ ಸಾಲಿನಲ್ಲಿ ನಾವು ನಿರ್ಣಾಯಕ ಹೆಜ್ಜೆಗಳನ್ನು ಇಡಲಿದ್ದೇವೆ" ಎಂದು ಹೇಳಿದ್ದೀರಿ. ಒಂದು ಕಡೆ ಖಾಸಗೀಕರಣ ಮಾಡತಕ್ಕಂಥ ಬಗ್ಗೆ ಒಂದು ವರ್ಷದ ಹಿಂದೆಯೇ ಚರ್ಚೆ ಪ್ರಾರಂಭವಾಗಿತ್ತು. ಇದನ್ನು ಖೋಡೆಯವರು ತೆಗೆದುಕೊಳ್ಳುತ್ತಾರೆಂದೂ ಮತ್ತು ಮಲ್ಯಾರವರು ತಮಗೆ ಬೇಕೆಂದು ಕೇಳುತ್ತಿದ್ದಾರೆಂದೂ ಮತ್ತು ಟಾಟಾದವರೂ ಸಹ ಕೇಳುತ್ತಿದ್ದಾರೆಂದು ಹಾಗೂ ಎಲ್ ಅಂಡ್ ಟಿ ಯವರು ತಮಗೆ ಬೇಕೆಂದು ಕೇಳುತ್ತಿದ್ದಾರೆಂದು ಮತ್ತು ಮೈಸೂರಿನ ವಿಭಾಗವನ್ನು

ನಾಗಾರ್ಜುನದವರು ಕೇಳುತ್ತಿದ್ದಾರೆ ಎನ್ನತಕ್ಕಂಥ ವಿಚಾರಗಳೆಲ್ಲವೂ ನಮ್ಮ ಮುಂದೆ ಬರುತ್ತಿದೆ. ಇನ್ನೊಂದು ಬಹಳ ಆಘಾತ ತರುವಂಥದ್ದು ಏನೆಂದರೆ, ನಾಲ್ಕು ಸಂಸ್ಥೆಗೆ ಸಂಬಂಧಪಟ್ಟಂತೆ ತಾವು ಒಂದು ಕಮೀಷನ್‌ನ್ನು ನೇಮಕ ಮಾಡಿದ್ದಿರಿ. ಅದು ಯಾವುದೆಂದರೆ CMS Camara, Rops Child, IDFC ಈ ಮೂರು ಸಂಸ್ಥೆಗಳನ್ನು ತಾವು ನೇಮಕ ಮಾಡಿ ಪ್ರಮುಖವಾಗಿ ಏನು ಕೇಳಿದ್ದೀರಿ ಎಂದರೆ, ಡಿಸ್ಟ್ರಿಬ್ಯೂಷನ್ ಮಾರ್ಜಿನ್ ಎನ್ನತಕ್ಕಂಥ ಕಾನ್ಸೆಪ್ಟ್‌ನ ಹೆಸರಿನಲ್ಲಿ ಖಾಸಗೀಕರಣ ಮಾಡುವುದಕ್ಕೋಸ್ಕರ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಮೂರು ಜನ ಸೇರಿಕೊಂಡು ಇದನ್ನು ಸುಧಾರಣೆ ಮಾಡುವುದಕ್ಕೋಸ್ಕರ ಖಾಸಗೀಕರಣ ಮಾಡಿ ಎಂದು ಹೇಳುವುದಕ್ಕೋಸ್ಕರ ಅವರಿಗೆ ಇವರು ಸರ್ವೀಸ್ ಚಾರ್ಜ್ ಎಂದು 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೇವಲ ಒಂದು ರಿಪೋರ್ಟ್‌ಗೋಸ್ಕರ 15 ಕೋಟಿ ರೂಪಾಯಿಗಳನ್ನು ಕೆಪಿಟಿಸಿಎಲ್ ಮೂಲಕ ಕೊಡುವಂಥದು ಆಗಿದೆ ಎನ್ನತಕ್ಕಂಥದ್ದು ನಿಜವಾಗಿಯೂ ಕೂಡ ಆಘಾತವನ್ನು ತಂದಿದೆ. ಎರಡನೇ ವಿಷಯವನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಬೆಂಗಳೂರಿನ ಬೆಸ್ಕಾಮ್‌ನ್ನು ಖಾಸಗೀಕರಣ ಮಾಡುವುದಕ್ಕೆ ಈಗಾಗಲೇ ಹೆಜ್ಜೆ ಇಟ್ಟಿದ್ದಾರೆ. ಖಾಸಗೀಕರಣ ಮಾಡುವಾಗ ಕೂಡ ಆಯಾಯ ವಲಯಗಳಲ್ಲಿ ಇರತಕ್ಕಂಥ ಬಿಲ್ಡಿಂಗ್ ಸಮೇತ ಅದರ ಬುಕ್ ವ್ಯಾಲ್ಯು ತೆಗೆದುಕೊಂಡು ಕೊಡಬೇಕು ಎನ್ನತಕ್ಕಂಥ ವಿಚಾರ ಈಗಾಗಲೇ ಹಬ್ಬಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಹೆಜ್ಜೆಯನ್ನು ಇಡತಕ್ಕಂಥ ಸಂದರ್ಭದಲ್ಲಿ ಇಂಥ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನು ಇಡಬೇಕೆಂದು ಹೇಳುತ್ತೇನೆ. ಆದರೆ ಇದನ್ನು ಹೇಳಿರತಕ್ಕಂಥ ಮರ್ಮ ಏನು ಎನ್ನತಕ್ಕಂಥದ್ದು ನನಗೆ ಗೊತ್ತಾಗುತ್ತಿಲ್ಲ. ಆ Hidden Agenda ಏನಿದೆ ಎನ್ನತಕ್ಕಂಥದ್ದು ನನಗೆ ಇನ್ನೂ ಗೊತ್ತಾಗುತ್ತಿಲ್ಲ. ತಾವು ಪವರ್ ಜನರೇಷನ್ ಬಗ್ಗೆ ಹೇಳಿದ್ದೀರಿ. ನಾನು ಕಳೆದ ವರ್ಷದ ಬಜೆಟ್ ಪುಸ್ತಕವನ್ನು ನೋಡಿದ್ದೇನೆ. ಬಳ್ಳಾರಿಯಲ್ಲಿ 500 ಮೆ.ವ್ಯಾ. ಥರ್ಮಲ್ ಪ್ಲಾಂಟ್ ಮಾಡುತ್ತೇವೆಂದು ಕಳೆದ ವರ್ಷವೂ ಕೂಡ ಹೇಳಿದ್ದೀರಿ. ಹಾಗೆಯೇ, ಈ ವರ್ಷ ಕೂಡ ಮತ್ತೆ ಹೇಳಿದ್ದೀರಿ. ಆದರೆ, ಅದರ ಪ್ರಗತಿ ಏನಾಗಿದೆ ಎನ್ನತಕಂಥದ್ದು ಇದುವರೆಗೂ ಗೊತ್ತಾಗಿಲ್ಲ. ಆದರೆ, ಆರ್.ಟಿ.ಪಿ.ಸಿ.ಯಲ್ಲಿ ಇರತಕ್ಕಂಥದನ್ನು ತಾವು ಪ್ರಾರಂಭ ಮಾಡಿದ್ದೀರಿ. ಆದರೆ ಅದರ ಜೊತೆಯಲ್ಲಿ ಎಸ್ಟಿಮೇಟ್ ಕಾಸ್ಟ್ ಎಷ್ಟೆಂದರೆ 2266 ಕೋಟಿ ರೂಪಾಯಿಗಳು. ಇದನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ 51 ಪರ್ಸೆಂಟ್‌ನ್ನು ರಾಜ್ಯ ಸರ್ಕಾರದವರು ಇಟ್ಟುಕೊಂಡರು, ಆದರಲ್ಲಿ 49 ಪರ್ಸೆಂಟ್‌ನ್ನು ಜಿಂದಾಲ್‌ಗೆ ಕೊಟ್ಟಿದ್ದೀರಿ, ಹೀಗೆ ಕೊಡುವಂತಹ ಸಂದರ್ಭದಲ್ಲಾದರೂ ಕೂಡ ಯಾವುದಾದರೂ ವಿಚಾರದಲ್ಲಿ ಅವರಲ್ಲದೆ ಬೇರೆ ಯಾರಾದರೂ ಬಿಡ್ಡಿಂಗ್ ಮಾಡಬಹುದಾ ಎಂದೂ ಎಲ್ಲೂ ಕೇಳಿಲ್ಲ. 49 ಪರ್ಸೆಂಟ್ ಷೇರನ್ನು ಹೇಗೆ ನೇರವಾಗಿ ಇದಕ್ಕೆ ಬೇಕಾಗಿರುವಂತಹ 2266 ಕೋಟಿ ರೂಪಾಯಿಗಳಲ್ಲಿ 49 ಪರ್ಸೆಂಟ್‌ನ್ನು ಜಿಂದಾಲ್‌ಗೆ ಕೊಟ್ಟಿರುವ ಬಗ್ಗೆ ಸಂಶಯವು ಎಲ್ಲರ ಮನಸ್ಸಿನಲ್ಲಿದೆ. ಆ ಸಂಶಯವನ್ನು ದೂರ ಮಾಡುವಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ಸ್ಮಾಲ್ ಸೇವಿಂಗ್ಸ್‌ಗೆ ಬಡ್ಡಿ ಕಡಿಮೆಯಾಗಿದೆ. ಜನಸಾಮಾನ್ಯರು ಇಂತಹ ವಿಶೇಷವಾಗಿ ಪವರ್ ಪ್ರಾಜೆಕ್ಟ್‌ಗಳು ಇರಬಹುದು ಇಂತಹದ್ದಕ್ಕೆ ನೇರವಾಗಿ ಹಣವನ್ನು ಇನ್‌ವೆಸ್ಟ್ ಮಾಡುವುದಕ್ಕೆ ಸಿದ್ಧವಾಗಿದ್ದಾನೆ. ತಾವು ಅವರ ಮೂಲಕವಾಗಿ ಇಂತಹ ಪ್ರಾಜೆಕ್ಟ್‌ಗಳಿಗೆ ನೇರವಾಗಿ ಜನಸಾಮಾನ್ಯರ

ಹಣವನ್ನು ಅಂದರೆ 25 ಅಥವಾ 26 ಪರ್ಸೆಂಟ್ ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಬಾಂಡ್ಸ್‌ನ್ನು ಇಷ್ಯೂ ಮಾಡಬಹುದೆಂದು ನಾವು ಅಂದುಕೊಂಡಿದ್ದೆವು. ಆದರೆ ಪೂರ್ತಿಯಾದ ಹಣವನ್ನು ಜಿಂದಾಲ್‌ಗೆ ಕೊಡುವಂತಹ ಕೆಲಸ ಎಲ್ಲೆಲ್ಲಿ ಆಗಿದೆ, ಇದು ಯಾರಿಂದ ಆಗಿದೆ, ಆದು ಇನ್ನೂ ಕೂಡ ಸರ್ಕಾರದಿಂದ ಹೊರಗಡೆ ಬರಬೇಕಾದಂತಹ ಅಂಶವಾಗಿದೆ. ಕಳೆದ ವರ್ಷ ಹಾಗೂ ಈ ವರ್ಷವೂ ಕೂಡ ಬಿಡದಿಯ ಬಗ್ಗೆ ಹೇಳಿದ್ದೀರಿ, 700 ಮೆಗಾವ್ಯಾಟ್‌ನ ಬಿಡದಿಯ ಗ್ಯಾಸ್ ಬೇಸ್ಡ್ ಕಂಬೈನ್ಡ್ ಸೈಕಲ್ ಪ್ಲಾಂಟ್ ಮಾಡುತ್ತೇವೆಂದು ಹೇಳಿದ್ದೀರಿ, ಇದರ ವೆಚ್ಚವು 2265 ಕೋಟಿ ರೂಪಾಯಿಗಳು ಇದರಲ್ಲಿ ಪ್ರಗತಿಯು ಏನಾಗಿದೆ ಎಂದೂ ಕಳೆದ ವರ್ಷವೂ ಗೊತ್ತಿಲ್ಲ ಈ ವರ್ಷವೂ ಗೊತ್ತಿಲ್ಲ. ಈ ವಿಚಾರವನ್ನು ಇಡೀ ರಾಜ್ಯವು ನಿರೀಕ್ಷಣೆಯನ್ನು ಮಾಡುವಂತಹದ್ದಾಗಿದೆ. ನನಗೆ ತಾವು ಹಣವನ್ನು ಮೊಬಿಲೈಜ್ ಮಾಡಬೇಕು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಗ್ರಾಹಕನ ಮೇಲೆ ತಾವು ಐದು ಪರ್ಸೆಂಟ್ ಹಣವನ್ನು ಟ್ಯಾಕ್ಸ್‌ನ್ನು ಹಾಕುವ ಮುಖಾಂತರದಲ್ಲಿ 260 ಕೋಟಿ ರೂಪಾಯಿಗಳನ್ನು ಅವರ ಮೇಲೆ ಎತ್ತುವಂತಹ ಕೆಲಸವನ್ನು ಪ್ರಾರಂಭ ಏತಕ್ಕಾಗಿ ಮಾಡಿದ್ದೀರಿ? ಈಗಾಗಲೇ ತಾವು ವಿದ್ಯುತ್ ಶಾಕ್‌ನ್ನು ಎಲ್ಲರಿಗೂ ಕೊಟ್ಟಾಗಿದೆ. ಈಗ ವಿದ್ಯುತ್ ಇಲ್ಲ, ಬಿಲ್ ಬಂದಾಗ ಎಲ್ಲರಿಗೂ ಶಾಕ್‌ನ್ನು ಕೊಡುತ್ತಿದ್ದೀರಿ. ಐದು ಪರ್ಸೆಂಟ್ ಟ್ಯಾಕ್ಸ್‌ನ್ನು ಏನು ಗ್ರಾಹಕರ ಮೇಲೆ ಹಾಕಿದ್ದೀರಿ ದಯಮಾಡಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ನಂ: 1 ಮುಖ್ಯಮಂತ್ರಿ ಎಂದು ತಮ್ಮನ್ನು ಹೇಳುವಾಗ ಕಾಂಪಿಟೇಷನ್ ಇದೆ, ನಿಮಗೂ ಹಾಗೂ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಿಗೂ, ನಮ್ಮ ಮುಖ್ಯಮಂತ್ರಿಗಳೇ ನಂ: 1 ಎಂದು ಆಗಲಿ ಎಂದು ನಾನು ಸ್ವಾಗತವನ್ನು ಮಾಡುತ್ತೇನೆ. ಅವರು ನಂ: 1 ಆಗಬೇಕಾದರೆ ಏನೇನೂ ಹೆಜ್ಜೆಗಳನ್ನು ಇಟ್ಟಿದ್ದಾರೆ, ಅಷ್ಟಾದರೂ ಕೂಡ ನಾವು ನಿರೀಕ್ಷಣೆ ಮಾಡಬೇಕಲ್ಲವೇ? ನಿನ್ನೆ ತಾನೇ 25ನೇ ತಾರೀಖು ಆಂಧ್ರಪ್ರದೇಶದಲ್ಲಿ ಒಂದು ಟ್ಯಾರೀಫ್ ಆರ್ಡರ್ ಬಂತು, ಅದರಲ್ಲಿ ಎರಡು ಅಂಶಗಳನ್ನು ನಾವು ನಿಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. ಆ ಟ್ಯಾರೀಫ್ ಆರ್ಡರನಲ್ಲಿ ಆ ರಾಜ್ಯದಲ್ಲಿ ಇಂಡಸ್ಟ್ರೀಯಲ್ ಗ್ರೋಥ್ ನೆರೆರಾಜ್ಯಗಳಿಗಿಂತಲು ಕೂಡ ಹೆಚ್ಚು ಆಗಬೇಕೆನ್ನುವಂತಹ ಕಾರಣಕ್ಕೋಸ್ಕರ ಕಳೆದ ವರ್ಷ ಇದ್ದಂತಹ ಟ್ಯಾರೀಫ್ ಆರ್ಡರ್‌ನಲ್ಲಿ ವಿದ್ಯುತ್‌ನ ದರ ಏನಿದೆ, ಅದರಲ್ಲಿ ಮೂರು ಪರ್ಸೆಂಟ್ ಕಡಿಮೆ ಮಾಡಿದ್ದಾರೆ. We have to see the progress. ಅಲ್ಲಿ ಬರಗಾಲ ಬಂದಿಲ್ಲವೇ? ಅಲ್ಲಿ ಇವತ್ತು ಹೈಡಲ್, ನಿನ್ನೆ ಕೈಗಾರಿಕೆಯವರಿಗೆ ಮೂರು ಪರ್ಸೆಂಟ್ ವಿದ್ಯುತ್‌ದರವನ್ನು ಕಡಿಮೆ ಮಾಡಿದ್ದಾರೆ. ಅಲ್ಲಿರುವಂತಹ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳ ಗ್ರೋಥ್ ಆಗಬೇಕೆನ್ನುವಂಥದ್ದನ್ನು ಇವತ್ತು ಅಗಲೇ ಟ್ಯಾರೀಫ್ ಆರ್ಡರ್‌ನಲ್ಲಿ ಕೊಟ್ಟಿದ್ದಾರೆ. ಇನ್ನೊಂದು ಸಂತೋಷವೆಂದರೆ, ಅಲ್ಲಿಯ ಅಗ್ರಿಕಲ್ಚರಿಸ್ಟ್‌ಗಳಿಗೆ ನಿನ್ನೆಯ ದಿವಸ ಘೋಷಣೆಯನ್ನು ಮಾಡಿದ್ದಾರೆ ಅಲ್ಲಿ ಡೊಮೆಸ್ಟಿಕ್:ಮತ್ತು ಅಗ್ರಿಕಲ್ಚರಿಸ್ಟ್‌ಗಳು ಯಾರಿದ್ದಾರೆ, ಅವರುಗಳಿಗೆ ಈಗಿರುವಂತಹ ದರಗಳಿಗಿಂತಲೂ ಕೂಡ ಅವರ ಉಪಯೋಗದ ಅಧಾರದ ಮೇಲೆ ದರವನ್ನು ಪರ್ಸೆಂಟೇಜ್‌ನ ಆಧಾರದ ಮೇಲೆ ಕಡಿಮೆ ಮಾಡುತ್ತಾ ಹೋಗುತ್ತೇವೆ. ಅದರಲ್ಲೂ ವಿಶೇಷವಾಗಿ ಐ.ಪಿ. ಸೆಟ್‌ಗಳಿಗೆ ಎಕ್ಸೆಮ್‌ಷನ್‌ನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಹಾಗಾದರೆ ನಾವು ಬಿಟ್ಟಿ ಕೊಡಿ

ಎಂದು ಕೇಳುವುದಿಲ್ಲ. ಅವರಿಗೆ ಬೇಕಾಗಿರುವುದೇನು, uninterrupted ಕ್ವಾಲಿಟಿ ಕರೆಂಟ್‌ನ್ನು ಕೊಡುವಂತಹ ಅಷ್ಯೂರೆನ್ಸ್ ಈ ಸಂದರ್ಭದಲ್ಲಿ ಅವಶ್ಯಕತೆ ಇದೆ. ಇನ್ನೊಂದು ತಾವು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೀರಿ. ರೈಲ್ವೆಯ ಇಲಾಖೆಯಿಂದ ರಾಜ್ಯಕ್ಕೆ ಕಾಂಟ್ರಿಬ್ಯೂಷನ್ ಏನು? ಎಸ್, ಆ ಪ್ರಶ್ನೆಯನ್ನು ನೀವು ಕೇಳುವಂತಹದ್ದೇ, ನಾವೂ ಸಹ ರಾಜ್ಯದ ಒಬ್ಬ ಪ್ರತಿನಿಧಿಯಾಗಿ ಕೇಳಬೇಕಾಗುತ್ತದೆ. ನಮ್ಮ ಕಾಂಟ್ರಿಬ್ಯೂಷನ್ ಏನು ಎಂದೂ ನಾನು ಹೇಳಬೇಕಲ್ಲಾ ಇವತ್ತು ಆ ದೃಷ್ಟಿಯಿಂದ ಆಂಧ್ರಪ್ರದೇಶ ಕೇಂದ್ರದ ಜೊತೆಯಲ್ಲಿ ಆ ಲೈನ್‌ಗಳನ್ನು ವಿದ್ಯುದ್ದೀಕರಣಗಳ ಲೈನ್‌ನ್ನು ತೆಗೆದುಕೊಳ್ಳಬೇಕೆಂಬ ವಿಚಾರವನ್ನು ಇಟ್ಟುಕೊಂಡು ನಿನ್ನೆಯ ದಿವಸ ಟ್ಯಾರೀಫ್ ಆರ್ಡರ್‌ನಲ್ಲಿ ಆಂಧ್ರಪ್ರದೇಶದಲ್ಲಿ ಇಲ್ಲಿಯವರೆವಿಗೆ ರೈಲ್ವೆಗೆ ವಿಧಿಸಿರತಕ್ಕಂತಹ ಟ್ಯಾರೀಫ್ ಆರ್ಡರ್‌ನಲ್ಲಿ ಶೇಕಡ ಆರು ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ನಾವೇನೂ ನಿರೀಕ್ಷಣೆ ಮಾಡೋಣ? ಏನು ವಿದ್ಯುತ್ತಿನ ಲೈನ್‌ಗಳ ಪರಿವರ್ತನೆಯಾಗಬೇಕಾಗಿದೆ ಅದಕ್ಕೆ ಶೇಕಡ ಆರು ಪರ್ಸೆಂಟ್‌ನ್ನು ಕಡಿಮೆ ಮಾಡಿ ನಿನ್ನೆಯ ದಿವಸ 24ನೇ ತಾರೀಖು ಕೇಂದ್ರ ಸರ್ಕಾರಕ್ಕೆ ಅವರು ಪತ್ರವನ್ನು ಬರೆದಿದ್ದಾರೆ ಮತ್ತು ಟ್ಯಾರೀಫ್ ಆರ್ಡರ್‌ನಲ್ಲಿ ಘೋಷಣೆಯನ್ನು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೇ ತಾವು ದಯಮಾಡಿ ಈ ವರ್ಷವಾದರೂ ಕೂಡ ಕೆಪಿಟಿಸಿಎಲ್ ಅಧಿಕಾರಿಗಳಿಂದ ಆಗುತ್ತಿರುವಂತಹ ಕಳ್ಳತನವನ್ನು ನಿಲ್ಲಿಸುವಂತಹ ದೃಷ್ಟಿಯಲ್ಲಿ ಇವತ್ತು ಆ್ಯಂಟಿ ಥೆಫ್ಟ್ ಲಾ ಮಾತ್ರ ಸಾಧ್ಯವಿಲ್ಲ. ಸ್ಟ್ರಿಕ್ಟ್ ಆದಂತಹ ವಿಚಾರವನ್ನು ತೆಗೆದುಕೊಂಡರೆ ಹೇಗೆ ಆಗುತ್ತದೆ? ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ, ಎಪಿಡಿಪಿಯ ಹಣವನ್ನು ತಾವೇನು ತಂದಿರಿ, ಅದೇ ರೀತಿಯಲ್ಲಿ ಒಂದು ಎಕ್ಸ್‌ಪೆರಿಮೆಂಟ್ ಮಾಡಿದರು, ಅದರಲ್ಲೂ ವಿಶೇಷವಾಗಿ ಅವರ ಜಿಲ್ಲೆಯಲ್ಲಿ, ಅವರ ಕ್ಷೇತ್ರದಲ್ಲಿಯೇ ಮಾಡಿದ್ದಾರೆ. ಅಲ್ಲಿರುವಂತಹ ಎಲ್ಲಾ ಲೈನ್‌ಗಳಿಗೂ ಕೂಡ ಬೇಕಾದಂತಹ ಕಂಡಕ್ಟರ್ಸ್‌ಗಳ ಮೇಲೆ ಒಂದು ಪೈಪ್‌ನ್ನು ಹಾಕುವಂತಹ ಕೆಲಸವನ್ನು ಮಾಡಿದರು. ಆ ರಾಜ್ಯದಲ್ಲಿದ್ದಂತಹ ಟ್ಯಾರೀಫ್ (ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್) 32.4 ಪರ್ಸೆಂಟ್ ಇತ್ತು, ಈ ವರ್ಷ 24.63 ಪರ್ಸೆಂಟ್ ಲಾಸ್ ಬಂದಿದೆ. ಮುಂದಿನ ವರ್ಷ they have declared that the transmission and Distribution loss will be only 20% ಈಗ ಅವರ ಸಾಧನೆ 24.63 ಪರ್ಸೆಂಟ್ ಆಗಿದೆ. ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷಣೆ ಮಾಡುವುದು ತಪ್ಪಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ನಾನು ಐ.ಪಿ.ಪಿ.ಗಳ ಬಗ್ಗೆ ಹೇಳಿದಾಗ ಕಳೆದ ಸಲ ಇದು ನನ್ನ ಕೂಸಲ್ಲವೆಂದು ತಾವು ಹೇಳಿದಿರಿ. Yes, I admit. ಇವತ್ತು ತಣ್ಣೀರುಬಾವಿ ನಿಮ್ಮ ಕೂಸಲ್ಲ? ಆದರೆ ನಾನು ನಿಮ್ಮಿಂದ ಇವತ್ತೂ ಕೂಡ ಈ ಸದನ ನಾವು ನಿರೀಕ್ಷಣೆಯನ್ನು ಮಾಡುತ್ತದೆ, 16 ಪರ್ಸೆಂಟ್ ಪ್ರಾಫಿಟ್‌ನ್ನು ಅಷ್ಯೂರ್ ಮಾಡಿದ್ದೆವು ಅವರಿಗೆ It is on record ಅಂದರೆ ಅವರು ಹಾಕಿರುವಂತಹ 800 ಕೋಟಿ ರೂಪಾಯಿಗಳಿಗೆ 1080 ಕೋಟಿ ರೂಪಾಯಿಗಳನ್ನು ಅವರಿಗೆ ಲಾಭ ಮತ್ತು ಎಲ್ಲವನ್ನೂ ಸೇರಿಸಿಕೊಟ್ಟಿದ್ದೇವು. ಆದರೆ ಅವರು ಮತ್ತೇ ಕೇಳುತ್ತಿರುವುದೆಷ್ಟು, 1041 ಕೋಟಿ ರೂಪಾಯಿಗಳ ಎಕ್ಸ್‌ಟ್ರಾ ಹಣವನ್ನು ಕೇಳುತ್ತಿದ್ದಾರೆ. ಅವರು ಯಾವ ಆಧಾರದ ಮೇಲೆ ಎಂದರೆ ಹಿಂದೆ ಮಾಡಿಕೊಂಡಿರುವಂತಹ ಲೂಪ್‌ಹೋಲ್ಸ್ ಆಧಾರದ ಮೇಲೆ ಎಂದಿದ್ದಕ್ಕೆ ಅದರ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ

ಮುಂದೆ ಕೇಳುತ್ತೇನೆ. ಈ ಒಂದು ಕಂಟ್ರಾಕ್ಟ್ ಏನಿದೆ, this is not a concluded contract. ಇದು ಕನ್‌ಕ್ಲೂಡೆಡ್ ಅಲ್ಲವೆಂದು ಹೇಳಿ ಕೆಪಿಟಿಸಿಎಲ್‌ನವರು ಕೆಇಆರ್‌ಸಿ ಮುಂದೆ ಫೈಲ್ ಮಾಡಿದ್ದಾರೆ. ಹೀಗಿರುವಾಗ ತಮ್ಮದೇ ಪಕ್ಷದ ಮುಖ್ಯ ಮಂತ್ರಿಗಳು, ಮಧ್ಯಪ್ರದೇಶದಲ್ಲಿ ಇಂಥದ್ದೇ ಒಂದು ಪ್ರಕರಣದಲ್ಲಿ ಸುಪ್ರಿಂಕೋರ್ಟಿನಲ್ಲಿ ಕೇಸ್ ಹಾಕಿದ್ದರು. ಆ ಸುಪ್ರಿಂಕೋರ್ಟಿನಲ್ಲಿ ಒಂದು ಜಡ್ಜ್‌ಮೆಂಟಾಗಿದೆ. ಅದು ಕರ್ನಾಟಕಕ್ಕೆ ಫೇವರ್ ಆಗಿದೆ. Wherever there is no concluded contract, the Court has no jurisdiction to play ಬಹಳ ಮಹತ್ವವಾದಂತಹ ಒಂದು ಸುಪ್ರಿಂಕೋರ್ಟಿನ ಜಡ್ಜ್‌ಮೆಂಟ್ ಇದೆ. ಇವತ್ತಾದರೂ ಕೂಡ ತಾವು ಮನಸ್ಸನ್ನು ಮಾಡಿ. ತಣ್ಣೀರುಬಾವಿಗೆ ನಾವು ಕೊಡುವಂತಹ ಹಣವೇನಿದೆ, 1048 ಕೋಟಿ ರೂಪಾಯಿಗಳ ಎಕ್ಸ್‌ಚೆಕರ್‌ಯನ್ನು ಮತ್ತೆ ಕೊಡುವುದಕ್ಕೆ ಹೊರಟಿದ್ದೇವೆ ಅದನ್ನು ತಪ್ಪಿಸುವುದಕ್ಕೋಸ್ಕರವಾಗಿ ಧೀಮಂತವಾದ ಹೆಜ್ಜೆಯನ್ನು ತಾವು ಇಟ್ಟರೆ ನನ್ನ ಅಪ್ರೀಷಿಯೇಷನ್ ಜೊತೆಗೆ ಇಡೀ ರಾಜ್ಯದ ಐದು ಕೋಟಿ ಜನರು ಅಪ್ರೀಷಿಯೇಟ್ ಮಾಡುತ್ತಾರೆ. ಮಾಡಿಲಿಲ್ಲವೆಂದರೆ ಅದು ಬೇರೆಯವರ ಕೂಸು ಎಂದು ಹೇಳಿಬಿಟ್ಟರೆ ಇಡೀ ರಾಜ್ಯಕ್ಕೆ ತಮ್ಮನ್ನೂ ಕೂಡ ಎಲ್ಲೋ ಅದರಲ್ಲಿ ಏಕೆ ಈ "ದೀಪಕ್ ಪರೇಖ್" ಕಮಿಟಿ ಬಂದ ನಂತರದಲ್ಲೂ ಕೂಡ ತಾವು ಏತಕ್ಕಾಗಿ ಸುಮ್ಮನೆ ಇದ್ದೀರಿ ಅಂದಾಗ ಡೌಟ್ ಎಲ್ಲರ ಮನಸ್ಸಿನಲ್ಲೂ ಕೂಡ ಪ್ರಾರಂಭವಾಗುವಂತಹ ವ್ಯವಸ್ಥೆಗಳಾಗುತ್ತವೆ. ನಾನು ಅದನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನನ್ನ ಮುಂದೆ ಬಹಳಷ್ಟು ವಿಚಾರಗಳಿವೆ, ಅದರ ದೀಪಕ್ ಪರೇಖ್ ಕಮಿಟಿಯ ವಿಚಾರದಲ್ಲಿ ಬಹಳಷ್ಟು ವಿಚಾರಗಳಿವೆ ಅದನ್ನು ಈಗ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇನ್ನು ಎರಡನೆಯದು ನಮ್ಮ ಮುಂದೆ ಇರುವುದು ರಾಯಲ್ ಸೀಮಾ, ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ ಈ ಬಾರಿಯ ತಮ್ಮ ಸರ್ಕಾರ ಒಂದು ಇಆರ್‌ಸಿಯನ್ನು ಫೈಲ್ ಮಾಡಿದ್ದೀರಿ, ಅದರಲ್ಲಿ ರೇಟ್ ಎಷ್ಟು ಎಂದು ಹಾಕಿದ್ದೀರಾ? ಹಾಕಿಲ್ಲ, ಬ್ಲಾಂಕ್ ಬಿಟ್ಟಿದ್ದೀರಿ ಏಕೆ? ಕಳೆದ ವರ್ಷ ಒಂದು ಯೂನಿಟ್‌ಗೆ 7.11 ಪೈಸೆ ಕೊಟ್ಟಿದ್ದೀರಿ, ಈ ವರ್ಷ ಅದರ ಬೇಲೆ ಎಷ್ಟಾಗುತ್ತದೆಯೋ ಗೊತ್ತಿಲ್ಲ. ತಮ್ಮ ಬಜೆಟ್‌ನಲ್ಲಿ ಹಣ ಏನು ಕೊಟ್ಟಿದ್ದೀರಿ, ಅದರಲ್ಲಿ 21.63 ಕೋಟಿ ರೂಪಾಯಿಗಳು ಒಂದೇ ಒಂದು ಯೂನಿಟ್ ವಿದ್ಯುತ್‌ನ್ನು ಕೊಂಡುಕೊಳ್ಳದೆಯೇ ಅವರು ಕೊಡುವಂತಹ ಕೆಲಸವನ್ನು ಯಾವ ಪುರುಷಾರ್ಥಕ್ಕೋಸ್ಕರ ನಾವು ಮಾಡಬೇಕಾಗಿದೆ? ಅದಕ್ಕೋಸ್ಕರವಾಗಿ Please reconsider the PPA we have signed with the Rayalsima, still we have provision for that... ಆ ದೃಷ್ಟಿಯಲ್ಲಿ ತಾವು ಹೆಜ್ಜೆಯನ್ನು ಇಡುತ್ತೀರಿ ಎನ್ನುವಂತಹ ವಿಚಾರವನ್ನು ಹೇಳುತ್ತಾ ಇವತ್ತು ವಿದ್ಯುತ್ ಕ್ಷೇತ್ರದಲ್ಲಿ ತಾವು ಇಂತಹ ಒಂದು ಅವಕಾಶವನ್ನು ಬ್ಲಾಂಕ್ ಚೆಕ್‌ನ್ನು ಆ ಅಧಿಕಾರಿಗಳಿಗೆ ಕೊಡುವಂತಹ ಕೆಲಸವಾಗಬಾರದು ಎನ್ನುವಂತಹ ನಿರೀಕ್ಷಣೆಯನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಆಗಲೇ ಹೇಳುವಂತಹ ಸಂದರ್ಭದಲ್ಲಿ ತಮ್ಮ ಮುಂದೆ ಇಷ್ಟೊಂದು ಕಷ್ಟಪಟ್ಟು ಎಕ್ಸ್‌ರ್‌ಸೈಜ್ ಮಾಡಿ ಹಣವನ್ನು ತಂದು ಎಲ್ಲೋ ಒಂದು ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಗಳು ತುಂಬಾ ಕ್ಷೀಣವಾಗಿದೆ ಎನ್ನುವಂತಹ ರೀತಿಯಲ್ಲಿ ಆಗಬಾರದೆನ್ನುವಂಥ ಎಕ್ಸ್‌ರ್‌ಸೈಜ್ ಮಾಡುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಒಂದು

ಕಡೆ ಅದು ಆದರೆ ತಾವು ತಮ್ಮ ಗಮನಕ್ಕೆ ಒಂದೊಂದು ಪೈಗೂ ಕೂಡ ಇಲ್ಲಿ ಅಕೌಂಟಿಂಗ್‌ನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ತಾವು ವೋಟ್ ಆನ್ ಅಕೌಂಟ್‌ನ್ನು ತೆಗೆದುಕೊಳ್ಳುವಾಗ ನಾವೆಲ್ಲರೂ ಹೇಳಿದುದ್ದಕ್ಕೆ ಉತ್ತರವನ್ನು ಕೊಡಬೇಕಾದಂತಹ ಜವಾಬ್ದಾರಿ ನಿಮ್ಮದು ಇದೆ. ಆದರೆ ಅದೇ ಸರ್ಕಾರಿ ಸಾಮ್ಯದಲ್ಲಿರುವಂತಹ ಬೇರೆ ಬೇರೆ ಸಂಸ್ಥೆಗಳು ತರುವಂತಹ ಸಾಲಕ್ಕೆ ಯಾವುದೇ ಅಕೌಂಟೇಬಿಲಿಟಿ ಇಲ್ಲವಾ? ಯಾವುದೇ ಈ ಸದನಕ್ಕೆ ಆ ಜವಾಬ್ದಾರಿ ಇಲ್ಲವೇ?

ಉಪಾಧ್ಯಕ್ಷರು : ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 45 ನಿಮಿಷಗಳಾಯಿತು. ಇನ್ನು 5 ನಿಮಿಷಗಳನ್ನು ಕೊಡುತ್ತೇನೆ ಅಷ್ಟರಲ್ಲಿ ತಾವು ಮುಗಿಸಬೇಕು.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ಇನ್ನು ಎರಡು ವಿಷಯಗಳಿವೆ, ಫಾರೆಸ್ಟ್ ಡಿಪಾರ್ಟ್‌ಮೆಂಟನ್ನು ಬೇಕಾದರೆ ಬಿಡುತ್ತೇನೆ, ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ರಾಮದಾಸ್‌ರವರೆ, ತಾವು 5 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎ. ರಾಮದಾಸ್ : ನಾನು 15 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ಆಗುವುದಿಲ್ಲ. ಬೇಗನೆ ಮುಗಿಸಿ.

ಶ್ರೀ ಎ. ರಾಮದಾಸ್ : ಇಲ್ಲಿ ಪ್ರಮುಖವಾಗಿ ಅರ್ಬನ್ ಡೆವಲಪ್‌ಮೆಂಟ್‌ನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಯಾವುದೇ ಸದನದಲ್ಲಿ ಒಂದು ಸಮಿತಿಗಳನ್ನು ಮಾಡುತ್ತೀರಿ, ಅದು ಸ್ಟ್ಯಾಂಡಿಂಗ್ ಕಮಿಟಿ ಇರಬಹುದು, ಸಬ್ಜೆಕ್ಟ್ ಕಮಿಟಿ ಇರಬಹುದು, ಕಾರಣವೇನು? ತಾವು ಏನು ಈಗ ಬೇರೆ ಬೇರೆ ಕಮೀಷನ್‌ಗಳನ್ನು ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡಿದೆವು. ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್, ಟ್ಯಾಕ್ಸ್ ರಿಫಾರ್ಮ್ಸ್, ಬೇರೆ ಬೇರೆ ಬಂದಂತಹ ಒಳ್ಳೆಯ ವಿಚಾರಗಳನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಏನು ಮಾಡಿದ್ದೀರಿ, ಅದೇ ರೀತಿಯಲ್ಲಿ ಈ ಸದನದಲ್ಲಿ ಈ ಸದನದ ಆಸ್ತಿಯಾಗಿ ಒಂದೊಂದು ಸಮಿತಿಗಳನ್ನು ರಚನೆ ಮಾಡುತ್ತೀರಿ, ಆ ಸಮಿತಿಗಳಲ್ಲಿ ಆಡಳಿತ ಮತ್ತು ವಿರೋಧಪಕ್ಷದವರೆಲ್ಲರೂ ಇದ್ದು, ಆ ವರದಿಯನ್ನು ಸಬ್‌ಮಿಟ್ ಮಾಡಿದ ನಂತರದಲ್ಲಿ ಆ ವರದಿಯು ಜಾರಿಗೆ ಬರಬೇಕೇ ಅಥವಾ ಬೇಡವೇ? ಅದನ್ನು ಜಾರಿಗೆ ಕೊಡುವಂತಹ ವಿಚಾರದಲ್ಲಿ ರಕ್ಷಣೆಯನ್ನು ಯಾರು ಕೊಡಬೇಕು? ಸರ್ಕಾರಕ್ಕೆ ಅದಕ್ಕೆ ರಕ್ಷಣೆಯ್ನು ಕೊಡುವುದಾ? ಇನ್ನು ಮುಂದೆ ಯಾವುದೇ ಸಮಿತಿಗಳನ್ನು ರಚನೆಯನ್ನು ಮಾಡುವುದನ್ನೇ ಬಿಟ್ಟುಬಿಡಿ ಎಂದು ನನಗನಿಸುತ್ತದೆ. ಏಕೆಂದರೆ, ಯಾವುದೇ ಆಗಲಿ, ಅಶ್ಯೂರೆನ್ಸ್ ಕಮಿಟಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇರಬಹುದು ಬೇರೆ ಬೇರೆ ಕಮಿಟಿಗಳಲ್ಲಿ ಬಂದಂತಹ ವರದಿಯನ್ನು ಅನುಷ್ಠಾನವನ್ನು ಮಾಡುವುದಕ್ಕೂ ಕೂಡ ಸರ್ಕಾರಕ್ಕೆ ಆಗುವುದಿಲ್ಲ ಎಂಬ ವ್ಯವಸ್ಥೆಗಳು ಬಂದಾಗ ಇದರ ಅರ್ಥವು ನನಗೆ ಕಾಣಿಸುತ್ತಿಲ್ಲ. ಇವತ್ತಿನದಿವಸ ನನ್ನ ಮುಂದೆ ಇರುವುದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ವರದಿಯನ್ನು ಸದನದ ಮುಂದೆ 5ನೆ ಆಗಸ್ಟ್ 2002ಕ್ಕೆ ಮಂಡನೆ ಮಾಡಿತು. ಇವತ್ತು ಈ ಒಂದು ಸಮಿತಿಯಲ್ಲಿ ಪ್ರಮುಖವಾಗಿ ಅಲ್ಲಿ ಸಿಎಜಿಯ ವರದಿ ಇದೆ, ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸುಮೋಟೋ ಯಾವುದೇ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಯಾವುದನ್ನು ಸಿಎಜಿಯವರು

ಪ್ಯಾರಾವೈಸಸ್‌ನ್ನು ನೋಡಿ ಅದಕ್ಕೆ ಸಂಬಂಧಪಟ್ಟಂತಹ ರೀಮಾರ್ಕ್ಸ್‌ನ್ನು ಕೊಟ್ಟಿರುತ್ತಾರೆ ಅದರ ಆಧಾರದ ಮೇಲೆ ಇವತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ತನ್ನ ವಿಚಾರವನ್ನು ಕೊಡುತ್ತದೆ. ಅದರಲ್ಲಿ 1999-2000, 1998-1999 ಈ ಸಾಲುಗಳಿಗೆ ಸಂಬಂಧಪಟ್ಟ ಹಾಗೆ ಅದು ಅಪಖ್ಯಾತಿ ಹೊಂದಿದ ಸಂಸ್ಥೆಯಿಂದ ನಕಲಿ ಬ್ಯಾಂಕ್ ಸುರಕ್ಷಣಾ ಖಾತೆಗೆ ಒಪ್ಪಿಗೆಯನ್ನು ನೀಡಿರುವುದರ ಬಗ್ಗೆ ಎಂದು ಹೇಳಿ ಅದಕ್ಕೆ ಸಂಬಂಧಪಟ್ಟಹಾಗೆ ಚಿಕ್ಕಮಗಳೂರು, ಕೆ.ಆರ್.ನಗರ, ತುಮಕೂರು, ಹೀಗೆ ಕರ್ನಾಟಕ ರಾಜ್ಯದ ಅರ್ಬನ್ ವಾಟರ್ ಸಪ್ಲೈಗೆ ಸಂಬಂಧಪಟ್ಟಹಾಗೆ ದೊಡ್ಡ ಪ್ರಕರಣವು ನಮ್ಮ ಮುಂದೆ ಬಂತು. ನಂತರದಲ್ಲಿ ಇದಕ್ಕೆ ಸಂಬಂಧಪಟ್ಟಂತಹ ವರದಿಯನ್ನು 2002ರಲ್ಲಿ ಸಬ್‌ಮಿಟ್ ಮಾಡಿದ ನಂತರದಲ್ಲಿ ಆರು ತಿಂಗಳ ಒಳಗಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ಕಾನೂನಿನಲ್ಲಿರುವಂತಹ ಅವಕಾಶವಿದೆ. ಇವತ್ತಿನವರೆವಿಗೂ ಅದು ಏನು ಕ್ರಮವನ್ನು ಕೈಗೊಂಡಿದೆ? ಇದರ ಬಗ್ಗೆ ನಾನು ವಿರೋಧಪಕ್ಷದಲ್ಲಿ ಸ್ಥಾನದಲ್ಲಿ ನಿಂತು ನಾನು ಹೇಳುವಂತಹ ವಿಚಾರವಲ್ಲ. ತಮ್ಮ ಪಕ್ಷದಲ್ಲಿ ಇದ್ದಂತಹ ಹಾಲಿ ಈಗ ಮಂತ್ರಿಗಳೂ ಕೂಡ ಈ ಒಪ್ಪಂದಕ್ಕೆ ಸಹಿಯನ್ನು ಹಾಕಿದ್ದಾರೆ. ಈ ಒಪ್ಪಂದಕ್ಕೆ ಸಹಿ ಎಂದರೆ ಈ ಒಂದು ರಿಪೋರ್ಟನ್ನು ಕೊಟ್ಟನಂತರದಲ್ಲೂ ಕೂಡ ತಮ್ಮ ಕಛೇರಿಯಲ್ಲಿ ಏನಾಗಿದೆ ಎಂದರೆ ಇದರ ಬಗ್ಗೆ ನಾನು ನೊಂದು ಒಂದು ಮಾತನ್ನು ಹೇಳಬೇಕಾಗಿದೆ. ಇದಕ್ಕೆ ಸಂಬಂಧಪಟ್ಟಹಾಗೆ ವರದಿಯು ಸಬ್‌ಮಿಟ್ ಆದಮೇಲೆ ವರದಿಯ ವಿಚಾರಗಳು ಪತ್ರಿಕೆಗಳಲ್ಲಿ ಬಂದ ನಂತರದಲ್ಲಿ ಒಂದು ಪತ್ರವನ್ನು ತಮ್ಮ ಕಛೇರಿಯಿಂದ ಬರೆಯುತ್ತಾರೆ. ಇದರ ವರದಿ ಏನಿದೆ, ಅದರ ಸಾಧಕ ಮತ್ತು ಭಾದಕಗಳು ಇದರಲ್ಲಿ ಸರಿ ಇದೆಯೇ ಎಂಬುದನ್ನು ನೋಡಬೇಕೆಂಬುದನ್ನು ತಮ್ಮ ಕಛೇರಿಯಿಂದ ಪತ್ರವನ್ನು ಬರೆಯುವ ಮುಖಾಂತರದಲ್ಲಿ ಇದನ್ನು stall ಮಾಡುವಂತಹ ವ್ಯವಸ್ಥೆಗಳು ಹೇಗೆ ಸಾಧ್ಯ under what Rule? under what Act? ಅಂದರೆ ಇವತ್ತು ಯಾರು ಇದರಲ್ಲಿ ಸಮಸ್ಯೆಯಲ್ಲಿದ್ದಾರೆ, ಯಾರು ಅಧಿಕಾರಿಗಳು ಇವತ್ತು ಹಣವನ್ನು ಲೂಟಿಯನ್ನು ಮಾಡಿದ್ದಾರೆಂದು ಇದೆ, ಅಂತಹವರಿಗೆ ರಕ್ಷಣೆಯನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತೇ ಎಂದಾದರೆ ಹೇಗೆ? ಅದಿರಲಿ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್. ಅದನ್ನು ತಾವು ತಂದಿರಿ, ಎಲ್ಲರೂ ಕೂಡ ಬೆಂಚ್‌ನ್ನು ಕುಟ್ಟಿ ಸ್ವಾಗತನ್ನು ಮಾಡಿದೆವಲ್ಲಾ, ಆದರೆ ಇಲ್ಲಿ ಒಂದು ವರದಿಯನ್ನು ಯಾರಿಗೆ ಕೊಡುತ್ತಾರೆಂದರೆ, ಈ ಸಮಿತಿಯವರು ಒಂದು ಪತ್ರವನ್ನು ಬರೆಯುತ್ತಾರೆ, ಇದಕ್ಕೆ ಸಂಬಂಧಪಟ್ಟಂತಹ ಒಂದು ಕಡತವನ್ನು ಕೊಡಿ ಎಂದು ಹೇಳಿದರೆ ಆ ಕಡತಕ್ಕೆ ಸಂಬಂಧಪಟ್ಟಹಾಗೆ ಉತ್ತರವನ್ನು ಬರೆಯುತ್ತಾರೆ. ಅದು ಹೇಗಿದೆ: ಟೆಂಡರ್ ಪ್ರಸ್ತಾವನೆಯಲ್ಲಿ ಭಾಗವಹಿಸಿದ ಕಂಪನಿಗಳ ಪೂರ್ವಭಾವಿ ಅರ್ಹತೆಗಳನ್ನು ನಿರ್ಧರಿಸುವಂತಹ ಸಂದರ್ಭದಲ್ಲಿ ಆಗಿರುವ ಲೋಪದೋಷಗಳ ಬಗ್ಗೆ ವರದಿಯನ್ನು ಕೊಟ್ಟುಕೊಂಡು ಒಂದು ಹಂತದಲ್ಲಿ ಬ್ಯಾಂಕ್‌ನಲ್ಲಿ ನಕಲಿ ಚೆಕ್‌ನ್ನು ಕೊಟ್ಟು ಇದಕ್ಕೆ ಸಂಬಂಧಪಟ್ಟಹಾಗೆ ವಿಚಾರಗಳ ಗಮನ ಮುಂಚೆಯೇ ಬಂದಿದ್ದು ಅಂದರೆ we may pay advance for Chickmagalur project now and for K.R. Nagar project after the performance guarantee extended to the required period." ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಸ್ವತಃ ಅವರು ಬರೆದಿರುವಂತಹ ಷರಾ ನನ್ನ ಕೈಯಲ್ಲಿದೆ. ಇದರ ಆಧಾರದ ಮೇಲೆ ಫೇಕ್ ಡಾಕ್ಯುಮೆಂಟ್‌ನ್ನು ಇಟ್ಟುಕೊಂಡು ಒಂದು ಕೋಟಿ 33 ಲಕ್ಷರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಅದು ಫೇಕ್ ಕಂಪನಿ,

ಇಲ್ಲಿ ತಮ್ಮ ಮುಂದೆ ವಿಚಾರವಿದೆ, ಇದು ಯಾವ ಬ್ಯಾಂಕ್ ಎಂಬುದು ಯಾರಿಗೂ ಗೊತ್ತಿಲ್ಲ? ಇದರಲ್ಲಿ ಮೋನೋಗ್ರಾಮ್ ಇಲ್ಲ, ಬ್ಯಾಂಕಿನ ನಂಬರ್ ಇಲ್ಲ, ಒಂದು ವೈಟ್ ಪೇಪರ್ ಮೇಲೆ ಟೈಪ್ ಮಾಡಿರುವುದನ್ನು ತೆಗೆದುಕೊಂಡರೆಂದು ಹೇಳಿ ಇದರ ಜೇರಾಕ್ಸ್ ಪ್ರತಿಯನ್ನೂ ಕೂಡ ಇದರಲ್ಲಿ ಹಾಕಿದ್ದೇವೆ. ಇದರ ಆಧಾರದ ಮೇಲೆ ನಾವು ಸಂಬಂಧಪಟ್ಟಂತಹ ಕಡತಗಳನ್ನು ರಕ್ಷಣೆಯನ್ನು ಕೊಟ್ಟಿದ್ದಾರೆನ್ನತಕ್ಕಂತಹ ಎಲ್ಲಾ ವಿಚಾರಗಳನ್ನು ಬಂದು ಒಂದು ವಿಚಾರವನ್ನು ಇವರ ಮುಂದೆ ಕೇಳಲಾಗುತ್ತದೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧಿಕೃತವಾಗಿ ಕೋರಿರುವ ಹೆಚ್ಚುವರಿ ಮಾಹಿತಿಯ ಕಡತಗಳನ್ನು ಪ್ರಸ್ತುತಪಡಿಸಲು ನಿರಾಕರಿಸಿರುವ ಬಗ್ಗೆ. ಇದು ಹೇಗೆ ಸಾಧ್ಯ? ಅಂದರೆ ಈ ಸದನವೇ ರಚನೆ ಮಾಡಿರುವಂತಹ ಒಂದು ಸ್ಟ್ಯಾಂಡಿಂಗ್ ಕಮಿಟಿ, ಒಂದು ಕಡತವನ್ನು ಕೊಡುವುದಕ್ಕೆ ಕೇಳುತ್ತಾರೆ, ದಿನಾಂಕ: 8-03-2002ರಂದು ನಡೆದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಸಭೆಯಲ್ಲಿ 1999-2000ನೇ ಸಾಲಿನ ಸಿಎಜಿ ವರದಿಯ 6.1ಕ್ಕೆ ನಕಲಿ ಬ್ಯಾಂಕ್ ಗ್ಯಾರಟಿ ಸ್ವೀಕರಿಸಿರುವ ಮೊಬಿಲೈಜೇಷನ್ ಅಡ್ವಾನ್ಸ್ ಬಿಡುಗಡೆ ಮಾಡಿರುವ ಬಗ್ಗೆ ಅನ್ವಯಿಸುವಂತೆ ಅಧ್ಯಕ್ಷರು ಕಡತದ ಸಂಖ್ಯೆ: ಯುಡಿಡಿ:107:ಯುಎಂಎಫ್:2000 ಇದನ್ನು ಸಮಿತಿಯ ತಪಾಸಣೆಗೆ ಪ್ರಸ್ತುತಪಡಿಸಲು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಿರುತ್ತಾರೆ. ದಿನಾಂಕ: 10.4.2002ರಂದು ಸಮಿತಿಯು ಸಭೆಯ ಉಲ್ಲೇಖದ ಸಂಖ್ಯೆ:107:ಯುಎಂಎಸ್:2000ದ ದಿನಾಂಕ: 5-4-2002ರ ಪತ್ರವನ್ನು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಕರ್ನಾಟಕ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಗಳಿಗೆ ಸದರಿ ಕಡತವನ್ನು ಸಮಿತಿಗೆ ಸಲ್ಲಿಸಲು ಸಾಧ್ಯವಿಲ್ಲವೆಂಬ ನಿರ್ಣಯಕ್ಕೆ ಬಂದಿರುವುದಾಗಿ ತಿಳಿಸಿರುತ್ತಾರೆ. ಅಂದರೆ ಎಲ್ಲಿ ಹೋಯಿತು, ಟ್ರಾನ್ಸ್‌ಫರೆನ್ಸಿ ಆ್ಯಕ್ಟ್? ಯಾರನ್ನು ಅವರು ಕೇಳುತ್ತಿದ್ದಾರೆ? ತಾವು ರಚನೆ ಮಾಡಿರುವಂತಹ ಒಂದು ಸಮಿತಿ. It is a part and parcel of this Assembly. ಅವರು ಕಡತವನ್ನು ಕೊಡಿ ಎಂದು ಹೇಳಿದರೆ ಏತಕ್ಕಾಗಿ ಕೊಡುವುದಿಲ್ಲ? ಅಂದರೆ ಒಂದು ಭಾಗ ಪಾರ್ಲಿಮೆಂಟ್‌ನಲ್ಲಿ ಇದನ್ನು ಬರೆಯುವಂತಹ ಸಂದರ್ಭದಲ್ಲಿ ಇದನ್ನು ಅವರೇ ಬರೆದಿದ್ದಾರೆ. ಏನೆಂದರೆ, ಇದಕ್ಕೆ ಸಂಬಂಧಪಟ್ಟಹಾಗೆ, ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿಯೂ ಕೂಡ ಶವಪೆಟ್ಟಿಗೆಗೆ ಸಂಬಂಧಪಟ್ಟ ಹಾಗೆ ಅಲ್ಲಿಯ ರೇಕಾರ್ಡ್ಸ್‌ನ ಕೇಳಿದಾಗ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಅಲ್ಲಿಯ ಪಿಎಸಿಯ ಛೇರ್ಮನ್ ಯಾರು ಇದ್ದರು ಅವರು ತಮ್ಮ ರಾಜೀನಾಮೆಯನ್ನು ಕೊಡುವಂತಹ ವಿಚಾರವನ್ನು ಹೇಳುತ್ತಾರೆ. ಆದರೆ ಇಲ್ಲಿ ರಾಜ್ಯ ಸರ್ಕಾರ ಕಡತ ಸಂಖ್ಯೆ 107ರ ಫೈಲ್‌ನ್ನು ಏತಕ್ಕಾಗಿ ಕೊಟ್ಟಿಲ್ಲ? ಆ ಕಡತದಲ್ಲಿ ಏನಿತ್ತು? ಕಡತದಲ್ಲಿ ಒಂದು ದಿವಸ ಶುಕ್ರವಾರ ಸಾಯಂಕಾಲ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ಸಸ್ಪೆಂಡ್ ಮಾಡುತ್ತಾರೆ. ಆದರೆ ಸೋಮವಾರ ಅದು ಇಷ್ಯೂ ಆಗುವುದಕ್ಕೆ ಮೊದಲೆ ಅದನ್ನು ಮತ್ತೇ ಹಾಗೆ ಉಳಿಸಿಕೊಳ್ಳುತ್ತಾರೆ. ಏಕೆ? ಇದನ್ನು ಯಾರು ಹೇಳಿದರು? ಯಾರು ಆದೇಶವನ್ನು ಕೊಟ್ಟಿದ್ದರು? ದೆಹಲಿಯಿಂದ ಹೋಗಿ ಬರುವುದರೊಳಗಾಗಿ ಆ ಕಡತವು ಹಾಗೆ ಉಳಿದುಕೊಳ್ಳುವಂತಹ ವ್ಯವಸ್ಥೆಗಳಾಗುತ್ತೆ ಎನ್ನುವುದಾದರೆ ಎಲ್ಲಿ ಉಳಿದುಕೊಂಡಿತು ಟ್ರಾನ್ಸ್‌ಫರೆನ್ಸಿ? ಅಂದರೆ ಈ ಸದನದಲ್ಲಿ ಆಗುವಂತಹ ವಿಚಾರಗಳ ಬಗ್ಗೆಯೂ ಕೂಡ ಮೆಜಾರಿಟಿ ಇದೆ ಎಂದು ಹೇಳಿ ಅವರು ಕಾನೂನಿನಲ್ಲಿರುವಂತಹ ವ್ಯವಸ್ಥೆಗಳಿಗೂ ಕೂಡ ರಕ್ಷಣೆಯನ್ನು ಕೊಡದೆ ಇದ್ದಾಗ

ನೀವಾದರೂ ರಕ್ಷಣೆಯನ್ನು ಕೊಡಬೇಕಲ್ಲವೇ? ಇದರ ಬಗ್ಗೆ ಮಾನ್ಯ ಸ್ಪೀಕರ್‌ರವರಿಗೂ ಕೂಡ ಪತ್ರವನ್ನು ಬರೆದರು, ಇದೊಂದೇ ಅಲ್ಲ ಎರಡು ಕಡತಗಳನ್ನು ಈ ಸರ್ಕಾರ ಯಾವುದೇ ಕಮಿಟಿಯ ಮುಂದೆ ಕೊಟ್ಟಿಲ್ಲ. ಅಲ್ಲಿ ಬರೆದಿರುವಂತಹ ಆಶ್ಚರ್ಯವೇನಾಗುತ್ತದೆಂದರೆ ಏಕೆ ಕೊಟ್ಟಿಲ್ಲವೆಂದರೆ, "ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಸದರಿ ಕಡತದಲ್ಲಿ ಕೆಲವೊಂದು ದಾಖಲಾತಿಗಳನ್ನು ಬಹಿರಂಗಪಡಿಸುವುದರಿಂದ ರಾಜ್ಯದ ಹಿತರಕ್ಷಣೆಗೆ ಪ್ರತಿಕೂಲವಾಗಬಹುದೆಂದು ತಾವು ಕೋರಿರುವ ಕಡತದ ಸಂಖ್ಯೆ: ನಅಇ:107:ಯುಎಂಎಸ್:2000ನ್ನು ಸನ್ಮಾನ್ಯ ಸಮಿತಿಗೆ ಸಲ್ಲಿಸಲು ಸಾಧ್ಯವಿಲ್ಲವೆಂದು ನಿರ್ಣಯಕ್ಕೆ ಸರ್ಕಾರವು ಬಂದಿರುತ್ತದೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ. ಇದರ ಬಗ್ಗೆ ಒಂದು ವಿಚಾರ ಬಂತು, ಇಂತಹ ಕಡತವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ, ರೆಫ್ಯೂಸ್ ಮಾಡುವುದಕ್ಕೆ ಅಧಿಕಾರ ಇರುವುದು ಯಾರಿಗೆ ಎಂದರೆ ಕೇವಲ ಮುಖ್ಯಮಂತ್ರಿಗಳಿಗೆ ಮಾತ್ರ. ಮುಖ್ಯಮಂತ್ರಿಗಳು ಈ ಕಡತವನ್ನು ಕೊಡಬಾರದೆಂದು ಏನಾದರೂ ಹೇಳಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಹೌದು, ಮುಖ್ಯಮಂತ್ರಿಗಳೇ ಈ ಕಡತವನ್ನು ಕೊಡಬೇಡಿ ಎಂದು ಫೈಲ್ ಮೇಲೆಯೋ ಬರೆದಿದ್ದಾರೆ. ಅಂದರೆ ಅರ್ಥ ಎಲ್ಲಿ ಹೋಯಿತು ಟ್ರಾನ್ಸ್‌ಫರೆನ್ಸಿ, ಈ ರಾಜ್ಯದ ಮುಖ್ಯಮಂತ್ರಿಗಳೇ ಒಂದು ಸಮಿತಿಯನ್ನು ಸಮಿತಿಯ ಮುಂದೆ ಕೊಡಬೇಡಿ ಎನ್ನುವಂತಹ ವ್ಯವಸ್ಥೆಗಳು ಇದೆ ಎನ್ನುವುದಾದರೆ ತಮ್ಮ ಹೆಸರುಗಳನ್ನು ಇಲ್ಲಿ ತೆಗೆದುಕೊಳ್ಳುವಂತಹ ವ್ಯವಸ್ಥೆಗಳಾದರೆ I cannot understand, ಎಲ್ಲಿದೆ ಟ್ರಾನ್ಸ್‌ಪರೆನ್ಸಿ ಆ್ಯಕ್ಟ್ ಅಂತ? ಅಬ್ಕಾರಿ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರವು ಇದೇ ನಿಲುವನ್ನು ತಳೆದಿರುವ ಬಗ್ಗೆ ಸಹ ಸಮಿತಿಯು ಸದರಿ ಸಭೆಯಲ್ಲಿ ಪ್ರಸ್ತಾವಿಕವಾಗಿ ಚರ್ಚಿಸಿತು. ಈ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಶವಪೆಟ್ಟಿಗೆಯ ಖರೀದಿಯ ಪ್ರಕರಣದಲ್ಲೂ ಸಹ ಮಾನ್ಯ ಪ್ರಧಾನಮಂತ್ರಿಗಳು ಮಧ್ಯಸ್ಥಿಕೆ ವಹಿಸಿ ವಿಷಯವನ್ನು ಇತ್ಯರ್ಥಗೊಳಿಸಿರುವುದರ ಬಗ್ಗೆ ವಿಚಾರವನ್ನು ಸಭಾಧ್ಯಕ್ಷರ ಗಮನಕ್ಕೂ ಕೂಡ ತರಲಾಯಿತು. ಆ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕೂಡ ಪತ್ರವನ್ನು ಬರೆಯಲಾಯಿತು. ಆದರೆ ಮುಖ್ಯಮಂತ್ರಿಗಳು ಫೈಲ್‌ನ ಮೇಲೆ ಕಡತವನ್ನು ಕೊಡಬೇಡಿ ಎಂದು ಹೇಳಿ ಇದರ ಮೇಲೆ ಮುಖ್ಯಮಂತ್ರಿಗಳು ಷರಾವನ್ನು ಬರೆಯುತ್ತಾರೆಂದರೆ, What secrecy is there? ರಾಜ್ಯದ ರಕ್ಷಣೆ ಏನಿದೆ?

5.10 ಪಿ.ಎಂ.

ಯಾವ ಚಿಕ್ಕಮಗಳೂರಿಗೆ ತೆಗೆದುಕೊಂಡು ಹೋಗುವಂತಹ ನೀರಿನಲ್ಲಿ ಒಂದು ಕೋಟಿ 33 ಲಕ್ಷ ರೂಪಾಯಿಗಳ ಅವ್ಯವಹಾರವಾಗಿದೆ. ಕಳ್ಳಬ್ಯಾಂಕಿನ ಒಂದು ಖಾತೆಯನ್ನು ಕೊಟ್ಟಿದ್ದಾರೆ, ಅಲ್ಲಿ ಕೊಟ್ಟಿರುವಂತಹ ಠೇವಣಿ ಕಳ್ಳತನದ್ದು, ಆ ಸಂಸ್ಥೆ ಕಳ್ಳತನದ್ದು ಎಂದು ಹೇಳಿ ರಿಪೋರ್ಟನ್ನು ಕೊಟ್ಟರು. ಆದಕ್ಕೆ ಸಂಬಂಧಪಟ್ಟಹಾಗೆ ಈ ಕಡತವನ್ನ ಕೇಳಿದಾಗ ಮುಖ್ಯಮಂತ್ರಿಗಳು ಈ ಕಡತವನ್ನು ಕೊಡಬಾರದು ಎಂದು ಷರಾ ಬರೆಯುತ್ತಾರೆ ಎಂದರೆ ಇದು ಎಲ್ಲಿಯ ಪಾರದರ್ಶಕತೆ? ಇದು ಯಾರ ರಕ್ಷಣೆ ಆಗಬೇಕಾಗಿದೆ? ನಿಮ್ಮನ್ನು ರಕ್ಷಣೆ ಕೇಳಿದಾಗಲೂ ಕೂಡ ಯಾವರೀತಿಯಲ್ಲಿ ತಾವು ಸ್ಪಂದನವನ್ನು ಮಾಡುತ್ತೀರೋ ಅದರ ಆಧಾರದಮೇಲೆ ಸದನದ ಟ್ರಾನ್ಸಫರೆನ್ಸಿಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಈ ದೃಷ್ಟಿಯಲ್ಲಿ ಶುಕ್ರವಾರ ದಿವಸ ಆದಂಥ ಪನಿಶ್‌ಮೆಂಟ್‌ಗೆ

ಅದು ಸೋಮವಾರದೊಳಗೆ ರದ್ದಾಗುತ್ತದೆ ಎನ್ನುವುದಾದರೆ ಇದರ ಹಿಂದೆ ನಡೆದಿರುವಂಥ ವ್ಯವಹಾರಗಳು ಏನು? ಹಾಗಾದರೆ ಈ ಸಮಿತಿಗೆ ಸಂಬಂಧಪಟ್ಟಹಾಗೆ ಈ ಸದನದ ನಿರ್ಣಯ ತೆಗೆದುಕೊಂಡಿದ್ದಕ್ಕೆ ನ್ಯಾಯ ಸಿಗಬೇಕು ಎನ್ನುವುದಾದರೆ ನ್ಯಾಯಾಲಯಕ್ಕೇ ಹೋಗಬೇಕಾ? ಒಂದು ಕಡೆ ನ್ಯಾಯಾಲಯ ವಿಚಾರದಲ್ಲಿ ಇಲ್ಲಿ ನಾವು ಹೇಳುತ್ತೇವೆ. ನಾವು ರಕ್ಷಣೆ ಸಿಕ್ಕಿಲ್ಲ ಎಂದಾಗ ನ್ಯಾಯಾಲಯಕ್ಕೆ ಒಬ್ಬ ಶಾಸಕನಾಗಿ ಹೋಗಬೇಕಾದ ಪರಿಸ್ಥಿತಿ ಎಷ್ಟು ನೋವಿನ ವಿಚಾರ ಅಲ್ಲವೆ? ಏಕೆಂದರೆ ವಿಷಯ ಸಮಿತಿಗಳನ್ನು ತಾವು ಮಾಡುತ್ತಿದ್ದೀರಿ. ಸ್ಟ್ಯಾಂಡಿಂಗ್ ಕಮಿಟಿಗಳನ್ನು ಮಾಡುತ್ತಿದ್ದೀರಿ. ಅದರ ಅವಶ್ಯಕತೆ ಇದೆಯೇ ಎನ್ನತಕ್ಕಂಥ ದೃಷ್ಟಿಯಿಂದ ತಾವು ಚಿಂತನೆಯನ್ನು ಮಾಡಬೇಕು. ಸಮಾಜದ ಬಗ್ಗೆ ಚಿಂತನೆ ಮಾಡುವಂಥ ವ್ಯವಸ್ಥೆ ಇವತ್ತು ನಮ್ಮ ಮುಂದಿದೆ. ಅದರ ಜೊತೆಯಲ್ಲಿ ಕೇವಲ ಇದೊಂದೇ ಪ್ರಕರಣವಲ್ಲ ಇಡೀ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಹದಿನಾಲ್ಕು ಇಂತಹ ಸ್ಕೀಮ್‌ಗಳಿಗೆ ಸಂಬಂಧಪಟ್ಟ ಹಾಗೆ ಅವ್ಯವಹಾರಗಳು ಏನಾಗಿವೆ, ಇದಕ್ಕೆ ರಕ್ಷಣೆ ಕೊಡುತ್ತಾ ಹೋದರೆ ಮುಂದಿನಪರಿಸ್ಥಿತಿ ಏನು? ಸರ್ಕಾರವೇ ಇಲ್ಲಿ ಆಗಿರತಕ್ಕಂಥ ಅವ್ಯವಹಾರಗಳಿಗೆ ರಕ್ಷಣೆ ಕೊಟ್ಟರೆ ಇನ್ನು ಯಾರನ್ನು ಕೇಳುವುದಕ್ಕೆ ಸಾಧ್ಯವಿದೆ? ಇದರ ಹಿಂದೆ ಯಾರ ರಕ್ಷಣೆಗೆ ಪ್ರಯತ್ನ ಇರುವಂಥಾದ್ದು? ಇಲ್ಲಿ ವ್ಯವಸ್ಥಾಪಕ ನಿರ್ದೇಶಕರ ರಕ್ಷಣೆ ಇದೆಯೇ ಅಥವಾ ರಾಜ್ಯದ ಹಿತರಕ್ಷಣೆ ಇದೆಯೋ? ಈ ಪ್ರಶ್ನೆಯನ್ನು ನಾವೆಲ್ಲರೂ ಕೂಡ ಕೇಳಬೇಕಾದಂಥ ಅವಶ್ಯಕತೆ ಇದೆ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಂಸ್ಥೆ ಇಲ್ಲಿಯವರೆಗೆ 2600 ಕೋಟಿ ರೂಪಾಯಿಗಳ ಸಾಲವನ್ನು ಎತ್ತಿ ಇವತ್ತಿನವರೆಗೂ ಅದರ ಖರ್ಚುವೆಚ್ಚಗಳ ಬಗ್ಗೆ ಸಿ ಅಂಡ್ ಎ.ಜಿ. ಯವರು ಏನು ವರದಿಯನ್ನು ಕೊಟ್ಟಿದೆ ಅದಕ್ಕೆ ಯಾವುದೇ ರೀತಿಯಾದಂಥ ಕ್ರಮವೂ ಇಲ್ಲ ಎನ್ನುವುದಾದರೆ ಇದು ಯಾವ Financial discipline ತಾವು ಹೇಳಿದ್ದೀರಿ Financial discipline ತರುವುದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ ಎಂದು. ಇದು ಯಾವರೀತಿ ಬದ್ಧತೆ? Financial discipline ತರುವಂಥ ವಿಚಾರದಲ್ಲಿ ಕೇವಲ ಇಷ್ಟು ಮಾತ್ರವಲ್ಲ, ಕೊನೆಯಲ್ಲಿ ತಾವು ಹೇಳಿದ್ದೀರಿ. ಇಷ್ಟೆಲ್ಲವನ್ನೂ ತಂದು ಈ ಬಾರಿ ಕೊರತೆ ಏನಿದೆ ನನ್ನ ಸರ್ಕಾರ ಅದನ್ನು ಕಡಿಮೆ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ ಎನ್ನತಕ್ಕಂಥ ವಿಚಾರವನ್ನೂ ಕೂಡ ತಾವು ಹೇಳಿದ್ದೀರಿ. ಈ Financial discipline ಸಾಮಾನ್ಯವಾದ ಮಟ್ಟದಿಂದಲೇ ಬರಲಿಲ್ಲ ಎನ್ನುವುದಾದರೆ ಇನ್ನು ಮಂತ್ರಿಗಳಲ್ಲಿ ಕಾಣುವುದಕ್ಕೆ ಸಾಧ್ಯವಿದೆಯಾ? ಇನ್ನು ಆಡಳಿತವನ್ನು ನಡೆಸುವಂಥ ಅಧಿಕಾರಿಗಳಿಂದ ಏನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ? ಅದ್ದರಿಂದ Financial discipline ಇಲ್ಲದೇ ಇರುವಂತಹ ಆಡಳಿತ ವ್ಯವಸ್ಥೆಯಲ್ಲಿ ಇವತ್ತು ಇಂತಹ ಅರಣ್ಯರೋಧನ ಮಾಡುವಂತಹ ಅನಿವಾರ್ಯತೆ ಏಕೆ ಉಂಟಾಗಿದೆ? ಇಷ್ಟೆಲ್ಲಾ ವಿವರಗಳನ್ನು ಕೊಟ್ಟನಂತರವೂ ಕೂಡ ಸರ್ಕಾರ ತನಿಖೆಗೆ ಬಹುಮತ ಇದೆಯೆಂದು ಹೇಳಿಕೊಂಡು ತಾನು ಹೇಗೆ ಇದೆಯೋ ಹಾಗೆ ನಡೆದುಕೊಳ್ಳಬಹುದು ಎಂದು ಹೇಳುವುದಾದರೆ ನಾವು ಇದನ್ನೇ Financial discipline ಎಂದು ತಿಳಿದುಕೊಳ್ಳಬೇಕಾದಂಥ ಅನಿವಾರ್ಯತೆ ಬರುತ್ತದೆ ಎಂದು ಹೇಳುತ್ತಾ ಈಗಾಗಲೇ ನಾನು ಮೂರು ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಸಮಯ ಇಲ್ಲದೇ ಇರುವುದರಿಂದ ನಾನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ಸಲ ಹಣ ಕೊಡುವಾಗಲೂ ಕೂಡ ಅರಣ್ಯದ ಬೆಳವಣಿಗೆಗೆ ಈ ಕ್ಯಾಪಿಟಲ್

ಇನ್‌ವೆಸ್ಟ್‌ಮೆಂಟ್‌ಗೆ ತಾವು ಕೊಟ್ಟಿರುವ ಹಣವನ್ನು ನೋಡಿದಾಗ ನನಗೆ ಬಹಳಷ್ಟು ನೋವಾಗಿದೆ. ಕಾರಣ ಏನೆಂದರೆ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್‌ಗೆ ಕೊಟ್ಟಿರುವುದು ಕೇವಲ ಹದಿನೈದು ಪರ್ಸೆಂಟ್ ಮಾತ್ರ ಇನ್ನು ಎಂಬತ್ತೈದು ಪರ್ಸೆಂಟ್ ಯಾವುದಕ್ಕೋಸ್ಕರ ಕೊಟ್ಟಿದ್ದೀರಿ? ಇಲ್ಲಿ ಇರುವಂಥ ಯಾರು ಡಿ.ಎಫ್.ಒ.ಗಳು ಕನ್ಸರ್‌ವೇಟರ್‌ಗಳು, ಇವರಿಗೆ ಅನುಕೂಲ ಮಾಡಿಕೊಡಲು ಈ ಐದು ಕಂಪನಿಗಳನ್ನು ಏನು ಮಾಡಿದ್ದೀರಿ, ಇವತ್ತು ಯಾರ ಹಣದಲ್ಲಿ ಸಂಪೂರ್ಣವಾಗಿ ಕಾಡಿನ ರಕ್ಷಣೆ ಮಾಡುವ ಬದಲು ಅವರವರೇ ರಕ್ಷಣೆ ಮಾಡಿಕೊಳ್ಳುವಂಥ ಅಧಿಕಾರಿಗಳು ಯಾರು ಇದ್ದಾರೆ ಇದೆಲ್ಲಾ ಅವರಿಗೋಸ್ಕರವೇ ಖರ್ಚುಮಾಡಿಕೊಳ್ಳುತ್ತಿದ್ದಾರೆ. ಅಂದರೆ ಕೇವಲ 15 ಪರ್ಸೆಂಟ್ ಮಾತ್ರ ಕ್ಯಾಪಿಟಲ್ ಇನ್ಸ್‌ವೆಸ್ಟ್‌ಮೆಂಟ್‌ಗೆ ಕೊಡುತ್ತಿದ್ದೀರಿ ಎಂದು ಹೇಳುವಾಗ ಒಂದು ಸಲ ಚಿಂತನೆಯನ್ನು ಮಾಡಬೇಕಾದಂಥ ಅವಶ್ಯಕತೆ ಇದೆ. ಕಾರಣ ಏನೆಂದರೆ 1999ರಲ್ಲಿ 211 ಕೋಟಿ ರೂಪಾಯಿಗಳಷ್ಟು ಲಾಭ ನಮಗೆ ಕಾಡಿನಿಂದ ಬಂದಿತ್ತು. ಇವತ್ತು ನಾವೇ ಅವರಿಗೆ ಹಣ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ. ಆರು ನೂರು ಕೋಟಿ ರೂಪಾಯಿಗಳನ್ನು ನಾವು ನಮ್ಮ ಬೊಕ್ಕಸದಿಂದ ಖರ್ಚುಮಾಡುತ್ತಿದ್ದೇವೆ. ಅಲ್ಲಿಂದ ಬರುತ್ತಾ ಇರತಕ್ಕಂಥ ಲಾಭವಾದರೂ ಏನು? ಬರೇ ಅರಣ್ಯಲೂಟಿ ಮಾತ್ರ. ಅದನ್ನು ಬಿಟ್ಟು ಬೇರೆ ಏನೂ ಆಗುವಂತಹ ವ್ಯವಸ್ಥೆ ನಮಗೆ ಕಾಣುತ್ತಿಲ್ಲ. ಹೀಗಾಗಿ ನಾನು ಇಲ್ಲಿ ಮಾತನಾಡುವುದು ಅರಣ್ಯದಲ್ಲಿ ಏನಾಗುತ್ತದೋ ಹಾಗೆ ಇಲ್ಲಿಯೂ ಅರಣ್ಯರೋಧನ ಆಗುವುದಿಲ್ಲವೇನೋ ಎನ್ನುವಂತಹ ವಿಶ್ವಾಸ ಇನ್ನೂ ಇದೆ. ಇದೇ ರೀತಿಯಾದಂಥ ಅರಣ್ಯರೋಧನ ಆಗುವುದಾದರೆ ಇಲ್ಲಿ ಮಾತನಾಡುವ ಅವಶ್ಯಕತೆ ಇಲ್ಲ ಎನ್ನುವಂಥ ವಿಚಾರವನ್ನು ಹೇಳುತ್ತಾ ತಮಗೂ ಕೂಡ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ ಅವರು ಇದು ನಾಲ್ಕನೇ ವರ್ಷದ ಬಜೆಟ್‌ನ್ನು ಅವರು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಈಗಾಗಲೇ ಮೂರು ಬಜೆಟ್‌ಗಳನ್ನು ಅವರು ಕೊಟ್ಟಿದ್ದು ಮೊದಲನೇ ವರ್ಷದ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಹೈಟೆಕ್ ಎಂದು ಹೇಳಿ ಬೆಂಗಳೂರನ್ನು ಸಿಂಗಾಪುರನ್ನಾಗಿ ಮಾಡತಕ್ಕಂಥಾದ್ದು, ನಗರಗಳನ್ನು ಅಭಿವೃದ್ಧಿ ಮಾಡುವಂತಹ ಧೋರಣೆಯನ್ನು ಆ ದಿಸೆಯಲ್ಲಿ ಇಟ್ಟುಕೊಂಡಿದ್ದರು. ಏನು ಈ ಆರ್ಥಿಕ ವ್ಯವಸ್ಥೆಯನ್ನು ಅದರತ್ತ ಬಳಸಿಕೊಳ್ಳುವುದು ಮತ್ತು ಸರ್ಕಾರದ ದಿಕ್ಸೂಚಿಯನ್ನು ಕೊಡುವಂತಹ ಕಾರ್ಯವನ್ನು ಮುಖ್ಯಮಂತ್ರಿಗಳು ಮಾಡಿದ್ದರು. ಹೀಗೆ ಮೊದಲನೇ ವರ್ಷದಲ್ಲಿ ಹೈಟೆಕ್ ಎಂದು ಹೇಳಿ ಆ ರೀತಿ ಪ್ರಗತಿಯನ್ನೂ ಕೂಡ ಕಂಡಂಥಾದ್ದು. ನಗರಗಳ ಅಭಿವೃದ್ಧಿಯಾಬೇಕು, ಪಟ್ಟಣಗಳ ಅಭಿವೃದ್ಧಿಯಾಗಬೇಕು ಎನ್ನತಕ್ಕಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಮಾಡಿದಂಥ ಬಜೆಟ್ ಅದಾಗಿತ್ತು. ಅದಾದಮೇಲೆ ಎರಡನೇ ಮತ್ತು ಮೂರನೇ ವರ್ಷ ಐ.ಟಿ.ಬಿ.ಟಿ ಎಂದು ಹೇಳಿಕೊಂಡು ಬಯೋಟೆಕ್ನಾಲಜಿ ಎಂದು ನಾನಾ ರೀತಿಯಿಂದ ಹೇಳಿಕೊಂಡು ಆ ಒಂದು ಪ್ರಗತಿಯ ದೃಷ್ಟಿಯಿಂದ, ಆ ದೃಷ್ಟಿಕೋನದಿಂದ ಕೊಟ್ಟಂತಹ ಬಜೆಟ್‌ಗಳು ಅವುಗಳಾಗಿದ್ದವು. ಆದರೆ ಈ ವರ್ಷ ಮಾನ್ಯ ಮುಖ್ಯಮಂತ್ರಿಗಳಿಗೆ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಕಡೆಗೆ ಅಥವಾ ಕೃಷಿಯ ಕಡೆಗೆ ಗಮನ ಹರಿದು ಈ ದಿಸೆಯಲ್ಲಿ ಒಂದಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ನಾಲ್ಕನೇ ವರ್ಷದಲ್ಲಿ ಮುಂದಿನ ಚುನಾವಣೆ ದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೆಲವೊಂದು ಏರಿಯಾಗಳನ್ನು ತೋರಿಸಿರುವಂಥಾದ್ದು ಮತ್ತು ಪ್ರಗತಿಯನ್ನು

ತೋರುವಂತಹ ಕಾರ್ಯಕ್ರಮಗಳನ್ನು ಅವರು ಇಲ್ಲಿ ತೋರಿಸಿದ್ದಾರೆ. ಆದರೆ ಈ ಬಜೆಟ್ ಏನಿದೆ ಇದರಲ್ಲಿ ಕೇವಲ ಅದು ದರ ಏರಿಸುವಂಥಾದ್ದು ಇರಬಹುದು ಅಥವಾ ಸರ್ಕಾರಕ್ಕೆ ಆದಾಯವನ್ನು ತರುವಂಥಾದ್ದೂ ಇರಬಹುದು, ಈ ರೀತಿಯಾಗಿ ತೋರುವಂತಹ ಒಂದು ಚಿತ್ರ. ಅದು ಅಲ್ಲಿ ಸಮಗ್ರವಾಗಿ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಏನೇನು ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಿಕೊಂಡಿದೆ ಎಂದು ನೋಡುವಂತಹ ಒಂದು ಸಂಪೂರ್ಣ ಚಿತ್ರ ನಮ್ಮ ಮುಂದಿದೆ. ಇದರಲ್ಲಿ ಬೇರೆಬೇರೆ ಸದಸ್ಯರುಗಳು ಸಾಕಷ್ಟು ಚರ್ಚೆ ಮಾಡಿದ್ದಾರೆ. ನಾನು ವಿಶೇಷವಾಗಿ ಏನು ಈ ಕೆ.ಎಸ್.ಆರ್.ಟಿ.ಸಿ.- ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇದೆ, ಆ ಬಗ್ಗೆ ಮಾತನಾಡುವುದಾದರೆ ಅಲ್ಲಿ ಇವತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಾಲ್ಕು ಕಾರ್ಪೊರೇಷನ್‌ಗಳನ್ನು ಮಾಡಿರತಕ್ಕಂಥಾದ್ದು ಇದೆ. ನಾವು ಅಧಿಕಾರದಲ್ಲಿದ್ದಂಥ ಕಾಲದಲ್ಲಿ ನಷ್ಟದಲ್ಲಿ ಇದ್ದಂಥ ಕೆಎಸ್‌ಆರ್‌ಟಿಸಿ ಇವತ್ತು ನಾರ್ತ್‌ವೆಸ್ಟ್ ಎಂದು ಹುಬ್ಬಳ್ಳಿಯಲ್ಲಿ ಇರುವಂಥ ಕಾರ್ಪೊರೇಷನ್, ಬೆಂಗಳೂರಿನಲ್ಲಿ ಬಿ.ಎಂ.ಟಿ.ಸಿ ಮತ್ತು ಗುಲ್ಬರ್ಗಾದಲ್ಲಿರುವಂಥಾದ್ದು ಹಾಗೂ ಕೆ.ಎಸ್.ಆರ್.ಟಿ.ಸಿ. ಎಂದು ಹೇಳಿ ಈ ನಾಲ್ಕು ಸಂಸ್ಥೆಗಳಲ್ಲಿ ಸುಮಾರು ಎಂಭತ್ತು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದು ಒಂದು ಅತಿ ದೊಡ್ಡ ಪಿ.ಎಸ್.ಯು. ಇದರ ಜತೆಗೆ ನೂರು-ನೂರೈವತ್ತು ಕೋಟಿ ರೂಪಾಯಿಗಳ ವರೆಗೂ ಲಾಭದಲ್ಲಿ ಇರುವಂತಹ ಸಂಸ್ಥೆ ಈ ಕೆ.ಎಸ್.ಆರ್.ಟಿ.ಸಿ. ಆಗಿದೆ. ಮಾನ್ಯ ದೇವರಾಜ್ ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗ 1976ರಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ಆ್ಯಕ್ಟ್‌ನ್ನು ತಂದು ಅವತ್ತು ಖಾಸಗಿ ಬಸ್ಸುಗಳನ್ನು ಸ್ವಾಧೀನ ಮಾಡಿಕೊಳ್ಳುವಂತಹ ಕೆಲಸ ಮಾಡಿದ್ದರು. ಅದನ್ನು ತೆಗೆದು ಇವತ್ತು ಕಾಂಟ್ರಾಕ್ಟ್ ಕ್ಯಾರೇಜ್ ಆ್ಯಕ್ಟ್‌ನ್ನು ಮತ್ತೆ ಮುಂದುವರೆಸಿ ಅವರಿಗೆ ಅವಕಾಶ ಮಾಡಿಕೊಡುವಂತಹದ್ದನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಈ ಆರ್ಥಿಕ ಪತ್ರದಲ್ಲಿ ತಿಳಿಸಿದ್ದಾರೆ. ಏಕೆಂದರೆ ಇದುವರೆಗೂ ಆ ಚಿಂತನೆಯೇ ಇರಲಿಲ್ಲ. ಯಾರು ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದರು ಅಥವಾ ಯಾವ ಅಧಿಕಾರಿಗಳು ಈ ಯೋಚನೆ ಮಾಡಿ ಈ ಸಂಸ್ಥೆಯನ್ನು ಹಾಳು ಮಾಡುವ ಮಾಡುವುದಕ್ಕೆ ಮುಂದಾಗಿದ್ದಾರೋ ಗೊತ್ತಿಲ್ಲ. ಅವರು ಒಂದೇ ಪಾಯಿಂಟ್ ಏನು ಹೇಳುತ್ತಾರೆ ಎಂದರೆ ಕಂಟ್ರಾಕ್ಟ್ ಕ್ಯಾರೇಜ್ ಇದ್ದರೆ ಈ ಬಸ್ಸುಗಳಿಗೆ ಬೇರೆ ಜನ ಬಂದವರು, ಯಾರೋ ಬಂಗಾಳದಿಂದ, ಕಲ್ಕತ್ತಾದಿಂದ ಬರುತ್ತಾರೋ, ಅಥವಾ ಆಂಧ್ರ ಮುಂತಾದ ಕಡೆ ಎಲ್ಲಿಂದಲೋ ಬರುವಂತಹವರಿಗೆ ಈ ಕೆ.ಎಸ್.ಆರ್.ಟಿ.ಸಿ. ಅಥವಾ ಬಿ.ಎಂ.ಟಿ.ಸಿ ಬಸ್ಸುಗಳನ್ನು ಬೇಕೆಂದು ಹೋಗಿ ಕೇಳಿದಾಗ ಬಸ್ಸುಗಳಿಲ್ಲ, ನಾವು ಕೊಡುವುದಕ್ಕೆ ಸಾಧ್ಯವಿಲ್ಲ, ಎಂದು ಹೇಳುತ್ತಾರೆ. ಆದ್ದರಿಂದ ಅವರು ಹೋಗುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಇವತ್ತು ನಾವು ಅವರನ್ನು ಬಿಡುತ್ತಿದ್ದೇವೆ ಎಂದು ಹೇಳುವಂಥಾದ್ದು ಇದೆ. ಇದರ ಜತೆಯಲ್ಲಿ ಉದಾರೀಕರಣ ಎಂದು ಹೇಳಿಕೊಂಡು ಮತ್ತು ಖಾಸಗೀಕರಣ ದೃಷ್ಟಿಯಿಂದ ಈ ಖಾಸಗೀಕರಣ ವ್ಯವಸ್ಥೆಯಲ್ಲಿ ನಾವು ಅವನ್ನೆಲ್ಲಾ ಬಿಡುತ್ತಿದ್ದೇವೆ ಎಂದು ಹೇಳಿ ಇವತ್ತು ಈ ಕಾರ್ಯವನ್ನು ಮಾಡುತ್ತಿದ್ದಾರೆ. ಇವತ್ತು ಎಂಭತ್ತು ಸಾವಿರ ಅಥವಾ ಒಂದು ಲಕ್ಷ ಜನ ಈ ದೊಡ್ಡ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಹತ್ತು ಸಾವಿರ ಜನ ಹೊಸದಾಗಿ ನೇಮಕಾತಿಯಾಗಿದ್ದಾರೆ. ಅವರು ಕಂಡಕ್ಟರ್‌ಗಳು ಇರಬಹುದು. ಡ್ರೈವರ್‌ಗಳು ಇರಬಹುದು. ಸುಮಾರು 14,500 ಉತ್ತಮ ಸ್ಥಿತಿಯಲ್ಲಿರುವ ಬಸ್ಸುಗಳು ಓಡಾಡುತ್ತಿದ್ದು ಇವರುಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು

ರಾಜ್ಯದಲ್ಲಿ ಒಟ್ಟಾಗಿ ಸುಮಾರು ಒಂದು ಲಕ್ಷ ಕಿಲೋಮೀಟರ್‌ನಷ್ಟು ದೂರ ಓಡಿದರೆ ಆ ಬಸ್‌ನ್ನು ತೆಗೆಯುವಂಥ ಒಂದು ವ್ಯವಸ್ಥೆ ಕೂಡ ಇದೆ. ಇಡೀ ಏಷಿಯಾ ಖಂಡದಲ್ಲೇ ಇದು ಬಹಳ ಉತ್ತಮವಾದ ಸಂಸ್ಥೆಯಾಗಿ ನಡೆದುಕೊಂಡು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಈ ದೃಷ್ಟಿಯಿಂದ ಇವತ್ತು ಈ ಎಂಬತ್ತು ಸಾವಿರ ಕಾರ್ಮಿಕರು ಏನಿದ್ದಾರೆ, ಅವರನ್ನು ಅವಲಂಬಿಸಿರತಕ್ಕಂಥವರು ಆ ಕುಟುಂಬದವರು ಎಲ್ಲಾ ಸೇರಿದರೆ ಸುಮಾರು ಐದು ಲಕ್ಷ ಜನ ಇರತಕ್ಕಂಥಾದ್ದು ಇದೆ. 1:5 ಎಂದರೆ ಒಟ್ಟು ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ ಒಂದರಷ್ಟು ಜನ ಇಲ್ಲಿ ನೌಕರಿಯಲ್ಲಿದ್ದು ಜೀವನ ಮಾಡುತ್ತಿದ್ದಾರೆ. ಚೆನ್ನಾಗಿ ಬೆಳೆಸಿರತಕ್ಕಂಥ ಈ ಸಂಸ್ಥೆಯಲ್ಲಿ ಅದು ಬಸ್ಸು ನಿಲ್ದಾಣಗಳು ಇರಬಹುದು. ಡಿಪೋಗಳು ಇರಬಹುದು. ಇವತ್ತು ಕೊಟ್ಟಿರುವಂತಹ ಲಕ್ಸುರಿ ಬಸ್ಸುಗಳು ಇರಬಹುದು, ವೋಲ್ವೋ ಬಸ್ಸುಗಳು ಇರಬಹುದು, ಎಲ್ಲವನ್ನೂ ಅತ್ಯಾಧುನಿಕವಾಗಿ ಮಾಡಿಕೊಂಡು ಹೋಗುತ್ತಿರುವಂಥ ಸಂದರ್ಭದಲ್ಲಿ, ಒಂದು ಒಳ್ಳೆಯ ವ್ಯವಸ್ಥೆ ಬಂದಿರತಕ್ಕಂಥ ಸಮಯದಲ್ಲಿ ಇದನ್ನು ಖಾಸಗಿಯವರಿಗೆ ಅವಕಾಶ ಮಾಡಿಕೊಟ್ಟು ಈ ಬಸ್ಸುಗಳಿಂದ ಏನು ಉದ್ದೇಶವನ್ನು ಇಟ್ಟುಕೊಂಡಿದ್ದೆವು ಅದು ಸಂಪೂರ್ಣವಾಗಿ ಹಾಳು ಮಾಡುವಂತಹ ಕಾರ್ಯ ಇವತ್ತು ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರಬಹುದು, ತಾವು ತಿಳಸಬೇಕಾಗುತ್ತದೆ. ತಾವು ಇದನ್ನು ಕೈಬಿಡಬೇಕಾಗುತ್ತದೆ. ಇದರ ಜೊತೆಯಲ್ಲಿ ಮಜಲು ವಾಹನವೆಂದು ಮ್ಯಾಕ್ಸಿಕ್ಯಾಬ್‌ಗಳಿಗೇನು ಕರೆಯುತ್ತೇವೆ, ಜಿಲ್ಲಾ ಕೇಂದ್ರಗಳಿಂದ ಇಪ್ಪತ್ತು ಕಿ.ಮೀ. ವ್ಯಾಪ್ತಿಯಲ್ಲಿ ಆ ವಾಹನಗಳು ಓಡಾಟ ಮಾಡಿಕೊಂಡು ಆ ಮೂಲಕ ಪ್ರಯಾಣಿಕರನ್ನು ಕ್ಯಾರಿ ಮಾಡುವುದಕ್ಕೆ ಅನುಮತಿ ಕೊಡುವ ವ್ಯವಸ್ಥೆಯಾದರೆ ಕೆ.ಎಸ್.ಆರ್.ಟಿ.ಸಿ. ಹಾಗೂ ಬಿ.ಎಂ.ಟಿ.ಸಿ.ಯನ್ನು ಸಂಪೂರ್ಣವಾಗಿ ಮುಚ್ಚಿ ಹೋಗುತ್ತದೆ. ಇವತ್ತೇನು ನಮ್ಮ ಕೆ.ಎಸ್.ಆರ್.ಟಿ.ಸಿ. 150 ಕೋಟಿ ರೂ. ಲಾಭದಲ್ಲಿದೆ ಅದು ಮುಚ್ಚಿಹೋಗುತ್ತದೆ. ಇದಕ್ಕೆ ನಾನು ಸ್ವಲ್ಪ ದಿವಸ ಸಚಿವನಾಗಿದ್ದೆ, ನಮ್ಮ ಸಿಂಧ್ಯಾರವರು ಅಲ್ಲಿ ಬಹಳ ವರ್ಷ ಅದರಲ್ಲಿ ಸಚಿವರಾಗಿದ್ದು ಬಹಳ ಶ್ರಮಪಟ್ಟು ಅದನ್ನು ಉಳಿಸಿದಂಥವರು. ಒಂದು ಹಂತದಲ್ಲಿ ಇದು ಮುಚ್ಚೇಹೋಯಿತು ಎಂದು ಅಂದುಕೊಂಡಿದ್ದೆವು. ಆದರೆ ಅದಕ್ಕೆ ಮತ್ತೆ ಜೀವ ಕೊಡುವ ಕೆಲಸ ಮಾನ್ಯ ಜೆ.ಹೆಚ್. ಪಟೇಲರು ಮಾಡಿದರು. ನಮ್ಮ ಹಣವನ್ನು ಅದಕ್ಕೆ ತುಂಬಿ ಆ ಸಂಸ್ಥೆಯನ್ನು ಬೇರೆ ಬೇರೆ ಕಾರ್ಪೊರೇಷನ್ ಎಂದು ಮಾಡಿ, ಅವುಗಳು ಇಂಡಿಪೆಂಡೆಂಟ್ ಆಗಿ ಅಲ್ಲಿನ ಎಂ.ಡಿ.ಗಳೇ ಅದನ್ನು ನಡೆಸಿಕೊಂಡು ಹೋಗುವಂಥದ್ದನ್ನು ಮಾಡಿ, ಕೆಲವು ಮನಾಪಲಿ ಏರಿಯಾಸ್, ಕೆಲವು ನಾನ್‌ಮನಾಪಲಿ ಏರಿಯಾಸ್‌ನ್ನು ಮಾಡಿದರು. ಮನ್ಯ ಮುಖ್ಯಮಂತ್ರಿಗಳ ಜಿಲ್ಲೆಯೇ ನಾನ್‌ಮನಾಪಲಿ ಏರಿಯಾ. ಚಿತ್ರದುರ್ಗವೂ ನಾನ್‌ಮನಾಪಲಿ ಏರಿಯಾ. ಇಲ್ಲಿ ಅಪಘಾತಗಳು ಸಾಕಷ್ಟು ಆಗಿರತಕ್ಕದ್ದು. ಮನಾಪಲಿ ಏರಿಯಾದಿಂದ ಬಂದಿರತಕ್ಕಂಥ ಅನೇಕ ಶಾಸಕರು ಇದ್ದಾರೆ. ಒಳ್ಳೆಯ ಸರ್ವೀಸ್ ಕೊಡುತ್ತಿರುವ ವ್ಯವಸ್ಥೆ ಇದೆ. ಇದರ ಬಗ್ಗೆ ಯಾರು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದರೋ ಗೊತ್ತಿಲ್ಲ. ಇವತ್ತು ಇದನ್ನು ಸ್ವಾಧೀನಪಡಿಸಿಕೊಳ್ಳುವ ವ್ಯವಸ್ಥೆ ಆಗುತ್ತಿದೆ. ಅದನ್ನು ಕೈಬಿಡಬೇಕು, ಅದು ಆಗಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಆ ಸಂಸ್ಥೆಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಇವತ್ತು ಗ್ರಾಮಾಂತರ ಮಾರ್ಗಗಳಲ್ಲಿ ಸಂಚರಿಸುವಂಥ ಬಸ್ಸುಗಳ ಮೇಲೆ ತೆರಿಗೆಯನ್ನು 6 ರಿಂದ 7 ಪರ್‌ಸೆಂಟ್‌ಗೆ ಜಾಸ್ತಿ ಮಾಡಿದ್ದಾರೆ. ನಗರ ಪ್ರದೇಶದಲ್ಲಿ ಸಂಚರಿಸುವ ಮಾರ್ಗಗಳಿಗೆ

3 ರಿಂದ 5 ಪರ್‌ಸೆಂಟ್‌ಗೆ ಜಾಸ್ತಿ ಮಾಡಿದ್ದಾರೆ. ನಾವು ಏಕೆ ಇದರ ಮೇಲೆ ತೆರಿಗೆಯನ್ನು ಹಾಕುತ್ತಿರಲಿಲ್ಲವೆಂದರೆ, ನಮ್ಮ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಬಸ್ ಪಾಸನ್ನು ಪಡೆದುಕೊಂಡು ಏಳು, ಹತ್ತು ವರ್ಷಗಳವರೆಗೆ ಉಚಿತವಾಗಿ ಅವರು ಓಡಾಡುವ ವ್ಯವಸ್ಥೆ ಮಾಡಿ, ಪೊಲೀಸರು ಓಡಾಡುವಂಥದಕ್ಕೆ, ಅಂಗವಿಕಲರು ಓಡಾಡುವುದಕ್ಕೆ, ಪ್ರೆಸ್, ಮೀಡಿಯಾ ವ್ಯಕ್ತಿಗಳು ಓಡಾಟ ಮಾಡಲು ಉಚಿತವಾಗಿ ಅವಕಾಶ ಮಾಡಿಕೊಡಬೇಕೆಂದು ನಾವೆಲ್ಲಾ ಮಾನ್ಯ ಸಿದ್ದರಾಮಯ್ಯನವರಿದ್ದಾಗ ಒತ್ತಾಯ ತಂದು, ಗ್ರಾಮಾಂತರ ಪ್ರದೇಶಕ್ಕೆ 3 ಪರ್‌ಸೆಂಟ್ ತೆರಿಗೆ ಬಿ.ಎಂ.ಟಿ.ಸಿ.ಗೆ 5 ಪರ್‌ಸೆಂಟ್ ಎಂದು ಮಾಡಿದ್ದೆವು. ಅದನ್ನು ಈ ಸಲ 6 ರಿಂದ 7 ಪರ್‌ಸೆಂಟ್‌ಗೆ, ಪಟ್ಟಣಗಳಲ್ಲಿ ಓಡಾಡುವಂಥ ವಾಹನಗಳಿಗೆ 3 ರಿಂದ 5 ಪರ್‌ಸೆಂಟ್‌ಗೆ ಹೆಚ್ಚು ಮಾಡಿದ್ದಾರೆ. ನಾಲ್ಕು ಸಾವಿರ ರೂಪಾಯಿ ಇದ್ದಂಥಾದ್ದನ್ನು ಮೂರು ಸಾವಿರ ರೂಪಾಯಿ ಅಂದರೆ ಖಾಸಗಿಯವರಿಗೆ ಕಡಿಮೆ ಮಾಡುವಂತಹ ವ್ಯವಸ್ಥೆ, ಅದೇ ನಮ್ಮ ಬಸ್ಸುಗಳಿಗೆ ಹಾಕುವಂತಹ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿಕೊಳ್ಳುವಂಥದ್ದು, ಇದರ ಜೊತೆಗೆ ಕಂಟ್ರಾಕ್ಟ್ ಆಕ್ಟ್‌ನ್ನು ರದ್ದುಪಡಿಸಿ, ಮತ್ತೆ ಇವತ್ತು ಕಾಂಟ್ರಾಕ್ಟ್ ಬಸಸ್ ಓಡುವಂತೆ ಮಾಡಿ, ಕೆ.ಎಸ್.ಆರ್.ಟಿ.ಸಿ. ಈ ಸಂಸ್ಥೆಗಳನ್ನು ಹಾಳು ಮಾಡುವಂಥಾದ್ದು, ಇದು ಇವತ್ತು ಬಹಳ ಅನ್ಯಾಯವಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಉಪಾಧ್ಯಕ್ಷರೇ, ಇದನ್ನು ವಾಪಸ್ಸು ತೆಗೆಯುವಂತಹ ಒಂದು ಕಾರ್ಯ, ಈ ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟ್‌ನ್ನು ತೆಗೆದು ಹಾಕಬೇಕು. ಮಾನ್ಯ ನಾಯಕರಾದ ಶ್ರೀ ಸಿಂಧ್ಯಾರವರು ಅದರ ಬಗ್ಗೆ ಮಾತನಾಡುವಾಗ ಸಾಕಷ್ಟು ವಿಷಯಗಳನ್ನು ತಿಳಿಸುತ್ತಾರೆಂದು ಹೇಳಿ, ಮಾನ್ಯ ದೇಶಪಾಂಡೆಯವರು, ಅವರು ನಮ್ಮ ಕೈಗಾರಿಕಾ ಮಂತ್ರಿಗಳು, ಅವರು ಬಹಳಷ್ಟು ಗ್ರೋಥ್ ಆಗಿದೆ ನಮ್ಮ ಕ್ಷೇತ್ರದಲ್ಲಿ ಎಂದು ಹೇಳಿಕೊಂಡು ಕಳೆದ ಮೂರು ವರ್ಷ 1990 ರಿಂದ 2001-02ಕ್ಕೆ ಇವತ್ತು ಕೈಗಾರಿಕಾ ಗ್ರೋಥ್ ಏನು ಇದೆ, ಆಗ ಏನು 7.01 ಪರ್ಸೆಂಟ್ ಇತ್ತು, ಇವತ್ತು ಕೈಗಾರಿಕಾ ಗ್ರೋಥ್ ಈ ರಾಜ್ಯದಲ್ಲಿ 7.01 ಪರ್ಸೆಂಟ್ ಮಾತ್ರ ಇದೆ. ಮಾನ್ಯ ದೇಶಪಾಂಡೆಯವರು ಏನು 20 ಸಾವಿರ ಕೋಟಿ ರೂಪಾಯಿ ಬಂಡಾವಳವನ್ನು ನಿರೀಕ್ಷೆ ಮಾಡಿ ಕೈಗಾರಿಕಾ ವಲಯದಲ್ಲಿ 20 ಸಾವಿರ ಕೋಟಿ ರೂಪಾಯಿಗಳಲ್ಲಿ ಸುಮಾರು ಒಂದೂವರೆ ಲಕ್ಷ ಜನಕ್ಕೆ ನೌಕರಿ ಸಿಗುತ್ತದೆಂದು ತಿಳಿಸಿದಂಥಾದ್ದು. ಒಂದು ದೊಡ್ಡ ಜಾಗತಿಕ ಮಟ್ಟದಲ್ಲಿ ಇಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಆ ಸಭೆಯಲ್ಲಿ ತೀರ್ಮಾನಗಳು ಆಯಿತು. ವೆಸ್ಟೆಂಡ್ ಹೋಟೆಲ್‌ನಲ್ಲಿ, ಆಯಿತು ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಈ ರಾಜ್ಯಕ್ಕೆ ಹರಿದು ಬರುತ್ತಿದೆ ಎಂದು ಹೇಳಿದರು. ಆ ಬಂಡವಾಳ ಎಷ್ಟು ಬಂದಿದೆ ಎನ್ನುವ ಮಾಹಿತಿ ನಮ್ಮಲ್ಲಿ ಇಲ್ಲ. ಆದರೆ ಇಲ್ಲಿರತಕ್ಕಂಥ ಸಾಫ್ಟ್‌ವೇರ್ ಮತ್ತು ಬೇರೆ ಕೈಗಾರಿಕೆಗಳಿಗೆ ಅವರು ತೋರಿಸಿರತಕ್ಕಂಥ ಅನೇಕ ರಿಯಾಯಿತಿಗಳಿಂದ ನಮಗೆ ಹಣದ ಕೊರತೆಯಾಗಿದೆ. ಇವತ್ತು ಅವರು ಹೇಳುವ ಪ್ರಕಾರ ಎಕ್ಸ್‌ಪೋರ್ಟ್ ಸುಮಾರು 30 ಸಾವಿರ ಕೋಟಿ ರೂಪಾಯಿಗಳಷ್ಟು ಪದಾರ್ಥಗಳನ್ನು ನಾವು ಎಕ್ಸ್‌ಪೋರ್ಟ್ ಮಾಡಿದ್ದೇವೆ. ಈ ರಾಜ್ಯದಲ್ಲಿ, ಸುಮಾರು 9 ರಿಂದ 10 ಪರ್ಸೆಂಟ್ ಎಕ್ಸ್‌ಪೋರ್ಟ್‌ನಲ್ಲಿ ನಮಗೆ ಕೈಗಾರಿಕ ಕ್ಷೇತ್ರದಿಂದ ಲಾಭ ಬಂದಿದೆ ಎಂದು ತಮ್ಮ ಒಂದು ಅಂಕಿಅಂಶಗಳಲ್ಲಿ ತಾವು ಹೇಳಿದ್ದೀರಿ, ಆದರೆ ಇಲ್ಲಿ ನಮಗೆ 1.05 ಲಕ್ಷ ಜನಕ್ಕೆ ನೌಕರಿ ಕೊಟ್ಟಂಥಾದ್ದು ಎಲ್ಲಿಯೂ ಕಾಣಲಿಲ್ಲ. ಇವತ್ತು ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ವೊಲ್ವೋ ಬಂತು ಯಾರಿಗೂ ಅಲ್ಲಿ ಉದ್ಯೋಗ ಸಿಗಲಿಲ್ಲ. ಅಥವಾ ಆ ವೊಲ್ವೊ

ಫ್ಯಾಕ್ಟರಿಯನ್ನು ಮುಂದುವರಿಸುವಂತಹ ಕಾರ್ಯ ಆಗಲಿಲ್ಲ. ಅದೇ ರೀತಿ ಅನೇಕ ಬೇರೆ ಬೇರೆ ಕೈಗಾರಿಕೆಗಳು ಬಂದವು, ಹೆಚ್ಚು ಸ್ಥಳೀಯ ಉದ್ಯೋಗ ಕೊಡುವಂತಹ ಕೆಲಸ ಆಗಲಿಲ್ಲ. ಎಲ್ಲಾ ಬೇರೆ ಬೇರೆ ಕಡೆಯಿಂದ ಬಂದಂತಹವರು ಉದ್ಯೋಗ ಪಡೆದಂಥಾದ್ದು ಆಯಿತು. ಆದರೆ ನಮ್ಮ ರಾಜ್ಯದ ಎಲ್ಲಾ ಲಾಭಗಳನ್ನು ಪಡೆದು ಇವತ್ತು ಸಾಫ್ಟ್‌ವೇರ್ ಇರಬಹುದು ಅಥವಾ ಅಭಿವೃದ್ಧಿ ಮಾಡುವಂತಹ ಅನೇಕ ಕೈಗಾರಿಕೆಗಳು ಇರಬಹುದು, ನಮ್ಮಲ್ಲಿ ವಿದ್ಯುಚ್ಛಕ್ತಿಯನ್ನು ಪಡೆದಂಥಾದ್ದು, ನಮ್ಮಲ್ಲಿ ಅನೇಕ ರಿಯಾಯಿತಿಗಳನ್ನು ಪಡೆದಂಥಾದ್ದು ಮತ್ತು ಭೂಮಿಯನ್ನು ಕ್ರಯ ಮಾಡಿ, ಅವರಿಗೆ ಸಬ್ಸಿಡಿ ರೇಟ್‌ನಲ್ಲಿ ಕೊಟ್ಟಾಂಥಾದ್ದು ಇರಬಹುದು. ನಾನಾ ಸವಲತ್ತುಗಳನ್ನು ಅವರಿಗೆ ಕೊಟ್ಟು, ನಾನಾ ರಿಯಾಯಿತಿಗಳನ್ನು ಕೊಟ್ಟು ಅಷ್ಟೇ ಹಣ ನಮಗೆ ವಾಪಸ್ಸು ಬಂದು ನಮ್ಮ ಖಜಾನೆ ಹಣ ತುಂಬುವಂತಹ ಕೆಲಸ ಆಗಲಿಲ್ಲ. ಏನಾಗುತ್ತಿದೆ ಇವತ್ತು ಅಂದರೆ ಬರೀ ಸಾಲದಲ್ಲಿ ನಮ್ಮ ಸರ್ಕಾರ ನಡೆಸುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಸುಮಾರು 38 ಸಾವಿರ ಕೋಟಿ ರೂಪಾಯಿಗಳು ನಾವು ಸಾಲ ಮಾಡಿದ್ದೇವೆಂದು ಇದುವರೆಗೂ ಈಗ ನನಗನ್ನಿಸುತ್ತದೆ. ಸುಮಾರು 40 ಸಾವಿರ ಕೋಟಿಗೂ ಮೀರಿ ಸಾಲ ಆಗುವಂಥಾದ್ದನ್ನು ನಾವು ಕಾಣುತ್ತಿರುವಂಥಾದ್ದು, ಈ ರಾಜ್ಯದಲ್ಲಿ, ಸುಮಾರು 17 ಭಾಗದಷ್ಟು ಹಣವನ್ನು ಡೆಟ್ ಸರ್ವೀಸ್ ಅಂತ ಹೇಳಿ ಸಾಲ ತೀರಿಸುವುದಕ್ಕೆ 17 ಪರ್ಸೆಂಟ್ ಇನ್ನು 62 ಪರ್ಸೆಂಟ್ ನಾನ್ ಪ್ಲಾನಿಂಗ್ ಮತ್ತು ಸಂಬಳ ಸಾರಿಗೆ ಸರ್ಕಾರಿ ನೌಕರರಿಗೆ ಕೊಡುವಂಥಾದ್ದು, 80-85 ಭಾಗ ಇಂಥಾದ್ದಕ್ಕೆ ಖರ್ಚಾದರೆ ಅಭಿವೃದ್ಧಿಗೆ ನಾವು ತೊಡಗಿಸುವಂಥಾದ್ದು ಕೇವಲ 15 ಪರ್ಸೆಂಟ್‌ನಷ್ಟು ಹಣವನ್ನು ತೊಡಗಿಸುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ಇವತ್ತು ನೀರಾವರಿ ಯೋಜನೆಗಳನ್ನು ಮಾಡಿ ಅದಕ್ಕೆ ಕೃಷ್ಣ ಜಲಭಾಗ್ಯ ನಿಗಮದಿಂದ ಸುಮಾರು 6-7 ಸಾವಿರ ಕೋಟಿ ರೂಪಾಯಿ ಸಾಲ ಮಾಡಿ ತೆಗೆದುಕೊಂಡು ತೀರಿಸುವಂತಹ ಕಾರ್ಯಕ್ರಮ ಮತ್ತು ಕಾವೇರಿ ಜಲ ಭಾಗ್ಯ ನಿಗಮ ಆ ಮೂಲಕ ಕಾವೇರಿ ಬೇಸಿನ್‌ನಲ್ಲಿ ಆಗುವಂತಹ ಪ್ರಗತಿಗೆ ಅದಕ್ಕೊಂದು 6 ಸಾವಿರ ಕೋಟಿ ರೂಪಾಯಿಗಳ ಸಾಲ ತೆಗೆದುಕೊಂಡು ಆದರ ಅಭಿವೃದ್ಧಿಯ ಕಾರ್ಯಕ್ರಮಗಳು ಅದೇ ರೀತಿ ನಮಗೆ ಡಾಂಬರೀಕರಣ ಮತ್ತು ರಸ್ತೆಗಳು ಅಭಿವೃದ್ಧಿಯಾಗಬೇಕೆಂದರೆ ವರ್ಲ್ಡ್‌ಬ್ಯಾಂಕ್‌ನಿಂದ 2003 ಕೋಟಿ ರೂಪಾಯಿಗಳ ಹಣ ಮಾನ್ಯ ಮುನಿಯಪ್ಪನವರು ಅಂತರ್‌ಜಲ ಅಭಿವೃದ್ಧಿ ಮಾಡಿ ಎಂದು ಹೇಳಿದರೆ 680 ಕೋಟಿ ರೂಪಾಯಿ ಸಾಲ ಮಾಡುತ್ತಿದ್ದೇವೆ. ಸಾಲ ಬರುತ್ತದೆ ಇರಿ ಎನ್ನುತ್ತಾರೆ ಏಕೆಂದರೆ ಮಾನ್ಯ ವೈ.ಕೆ. ರಾಮಯ್ಯನವರು ಅಲ್ಲಿ ಕುಳಿತುಕೊಂಡಿದ್ದಾರೆ. ಬಹಳ ಗ್ರೋಥ್ ಆಗಿದೆ, ಬಹಳ ಚೆನ್ನಾಗಿದೆ, ಎಂದು ಬಹಳ ಅನುಭವ ಇರತಕ್ಕಂಥ ಶಾಸಕರು ಅವರು ಬಹಳ ರೆವಲ್ಯೂಷನ್ ಆಗಿದೆ ಎಂದು ಹೇಳಿದರು ನಮ್ಮ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಕ್ರಾಂತಿಯಾಗಿದೆ ಎಂದು ಹೇಳಿದರು.

ಶ್ರೀ ವೈ.ಕೆ. ರಾಮಯ್ಯ :- ಒಂದು ನಿಮಿಷ. ಏಕೆಂದರೆ ಅವರು ನನ್ನ ಹೆಸರು ಹೇಳಿರುವುದರಿಂದ ನಾನು ಏನು ಹೇಳಿದೆ ಎನ್ನುವುದನ್ನು ಮತ್ತೊಂದು ಸಲ ಹೇಳುತ್ತೇನೆ. ನಿನ್ನೆಯ ದಿವಸ ನಾನು ಮಾತನಾಡುವಾಗ ಮಾನ್ಯ ಅಧ್ಯಕ್ಷರೇ ಅತ್ಯಂತ ಸ್ಪಷ್ಟವಾಗಿ with clear words I said ನಮ್ಮ ಕನ್‌ವನ್‌ಷನಲ್ ರಿಸೋರ್ಸ್ಸ್ ಸಾಂಪ್ರದಾಯಿಕ ಮೂಲಗಳು ಬತ್ತಿ ಹೋಗುವಂತಹ ಹಂತಕ್ಕೆ ತಲುಪಿವೆ. ಇದರ ಪರಿಣಾಮ ಏನೆಂದರೆ ಸಾಲ ಮಾಡಿ ಅಭಿವೃದ್ಧಿಯನ್ನು ಮಾಡುವಂತಹ

ಹಂತಕ್ಕೆ ನಾವು ತಲುಪಿದ್ದೇವೆ, ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಆದ್ದರಿಂದ ಅದನ್ನು ನನಗೆ ಏಕೆ ಹೇಳುತ್ತಿದ್ದರೋ ನನಗೆ ಗೊತ್ತಿಲ್ಲ. ನನು ನಿಮ್ಮ ಪ್ರಪೋಸಿಯನ್ ಅನ್ನು ಒಪ್ಪಿಕೊಂಡಿದ್ದೇನೆ. ಈ ಪರಿಸ್ಥಿತಿ ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಆಧುನಿಕ ರಾಜ್ಯಗಳಿಗೆ ರಾಷ್ಟ್ರಗಳಿಗೆ ನಮ್ಮ ಭಾರತ ದೇಶದಲ್ಲಿ ಸರ್ವೇ ಸಾಮಾನ್ಯವಾಗಿದೆ. ನಮ್ಮ ಮೂಲಭೂತ ಕನ್‌ವೆನ್‌ಷನಲ್ ರಿಸೋರ್ಸ್ಸ್ ಎಲ್ಲಾ ಬತ್ತಿ ಹೋಗಿವೆ. ಯಾರೂ ಕಂದಾಯ ಕಟ್ಟುವುದಿಲ್ಲ. ವಿದ್ಯುತ್ಶಕ್ತಿ ಬಿಲ್ ಕಟ್ಟುವುದಿಲ್ಲ. ನೀರಿನ ಟ್ಯಾಕ್ಸ್ ಕಟ್ಟುವುದಿಲ್ಲ. ಯಾವುದೂ ಬರುತ್ತಿಲ್ಲ. ನಾವು ಬರುವಂತಹ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ಪ್ರಚಾರ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದೇವೆ. ನಮ್ಮ ರಾಜಸ್ವವನ್ನು ಜಾಸ್ತಿ ಮಾಡುವಂತಹ ಯಾವ ಒಂದು ಕಾರ್ಯಕ್ರಮಕ್ಕೂ ನಾವು ಇವತ್ತು ಹಣ ತೊಡಗಿಸುತ್ತಿಲ್ಲ. ಇವತ್ತು ಇರುವ ಬಜೆಟ್ ತೆಗೆದುಕೊಳ್ಳಿ, ನೀವು ಇದ್ದ ಬಜೆಟ್ ತೆಗೆದುಕೊಳ್ಳಿ. 68 ಪರ್ಸೆಂಟ್ ಹಣ ನಾವು ಇವತ್ತು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ಗೆ ಖರ್ಚು ಮಾಡುತ್ತಿದ್ದೇವೆ. ಸಾಲ ತರದೇ ಇನ್ನೇನು ಮಾಡುತ್ತೀರಿ? ಹಣವನ್ನು ಎಲ್ಲಿಂದ ತೆಗೆದುಕೊಂಡು ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತೀರಿ? ನಿನ್ನೆ ನಾನೇ ನೀವು ಹೇಳಿದ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ನಾನು ಅದಕ್ಕೆ ವಿರೋಧವಾಗಿಯೂ ಇಲ್ಲ ಅಷ್ಟು ತಪ್ಪಾಗಿ ನಾನು ವಿಷಯ ತಿಳಿದುಕೊಂಡಿಲ್ಲ ಸಾಲ ತೆಗೆದುಕೊಳ್ಳುವಂತಹ ಇನ್‌ಎವಿಟಬಲ್ ಪೊಜಿಷನ್ ಅದು. ಅನಿವಾರ್ಯ ಅದು. ಇದೊಂದೇ ರಾಜ್ಯಕ್ಕೆ ಅಲ್ಲ. ಎಲ್ಲಾ ಆಧುನಿಕ ರಾಜ್ಯಗಳಿಗೂ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಸತ್ಯಸಂಗತಿಯನ್ನು ತಿಳಿಸಿದ್ದಾರೆ. ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ನಾವು ಯಾವರೀತಿ ರಾಜ್ಯದಲ್ಲಿ ಸಾಲಗಳ ಕಡೆ ಹೋಗುತ್ತಿದ್ದೇವೆ. ಕಾರ್ಪೊರೇಷನ್ ಎಂದರೆ ಸಾಲ ಮಾಡಿ, ಅವರು ಅಭಿವೃದ್ಧಿ ಮಾಡುವಂಥಾದ್ದು. ಸಾವಿರ ಕೋಟಿ ರೂಪಾಯಿ ಸಾಲ ಮಾಡಿ, ಕಾರ್ಪೊರೇಷನ್ ಅಭಿವೃದ್ಧಿ ಮಾಡುವಂಥ ಕಾರ್ಯ. ಮಾನ್ಯ ಪಶು ಸಂಗೋಪನಾ ಸಚಿವರಿಗೆ ಹೇಳಿದರೆ, ಕುರಿ ಅಭಿವೃದ್ಧಿ ಮಂಡಳಿ ಸಾಲ ತೆಗೆದುಕೊಳ್ಳುತ್ತೇವೆ ಅದಕ್ಕೆ ನಾವು ನಿಗಮ ಮಾಡಿಕೊಳ್ಳುತ್ತೇವೆ ಎಂದು ಹೇಳತಕ್ಕಂಥಾದ್ದು ಅಂದರೆ, ಬರೀ ಬಾರೋಯಿಂಗ್ಸ್‌ನಲ್ಲೇ ಇರುವಂಥಾದ್ದು. ನಾವು ಯಾರ ಹತ್ತಿರ ಮಾತನಾಡಿದರೂ ಸಹ, ನಾವು ಸಾಲಕ್ಕೆ ಹೋಗಬೇಕು, ಸಾಲ ತೆಗೆದುಕೊಂಡು ಬರಬೇಕು ಎಂದೇ ಹೇಳುತ್ತಾರೆ. ಸಂಪನ್ಮೂಲ ರೂಢಿಸುವಂಥ ಕಾರ್ಯವನ್ನು ಈ ಸರ್ಕಾರ ಬಂದಾಗಿನಿಂದಲೂ ಮಾಡಿಲ್ಲ. ಸಂಪನ್ಮೂಲ ರೂಢಿಸುವಂಥ ಕಾರ್ಯವನ್ನು ಸರ್ಕಾರ ಮಾಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಅದು ಹೇಗೆ ಎಂದು ಕೇಳಬಹುದು? ಇವತ್ತು ಆರ್ಥಿಕವಾಗಿ ಸಂಪನ್ಮೂಲದ ಕೊರತೆಯಾಗುತ್ತಾ ಇರತಕ್ಕಂಥಾದ್ದು ನಮ್ಮ ಸಂಪನ್ಮೂಲ ಎಂದರೆ ಮುಖ್ಯವಾಗಿ ಅಬಕಾರಿಯಲ್ಲಿ ಸುಮಾರು 1,500 ಕೋಟಿ ರೂಪಾಯಿ ಸೋರುತ್ತಾ ಇದೆ. ಇದನ್ನು ಕೆಲವರು ಎರಡು ಸಾವಿರ ಕೋಟಿ ರೂ. ಎಂದು ಹೇಳುತ್ತಾರೆ. ಹಿಂದಿನ ಮಾಜಿ ಮುಖ್ಯಮಂತ್ರಿಗಳಾದ ಮೊಯ್ಲಿಯವರು, ತಾವು ನೇಮಕ ಮಾಡಿರುವಂಥ ಕಮಿಟಿ ಏನಿದೆ ಆ ಕಮಿಟಿ ಮೂಲಕ ಅವರು ಹೇಳಿರತಕ್ಕಂಥಾದ್ದು ಇವತ್ತು ಅಬಕಾರಿ ಆದಾಯ ಸೋರುವಿಕೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳು. ಅದರ ಜೊತೆಯಲ್ಲಿ ಮಾರಾಟ ತೆರಿಗೆ ಮೂಲಕ ಸೋರುವಂಥಾದ್ದು ಸುಮಾರು 800 ಕೋಟಿ ರೂಪಾಯಿಗಳು. ಇಂತಹ ಕಾರ್ಯಗಳಿಂದ ಹೀಗೆ ಅನೇಕ ದುಂದು ವೆಚ್ಚ ಮಾಡುತ್ತಾ ಇರತಕ್ಕಂಥಾದ್ದು

ಸರ್ಕಾರ ಇವತ್ತು ಮಾನ್ಯ ವೈ.ಕೆ. ರಾಮಯ್ಯ ನವರಿಗೂ ಗೊತ್ತಿದೆ. ಇಂಥಾದ್ದನ್ನು ನಾವು ಪ್ಲಗ್ ಮಾಡಿ, ಖರ್ಚುಗಳನ್ನು ಕಡಿಮೆ ಮಾಡಿ ರಿಸೋರ್ಸ್‌ನ್ನು ಜಾಸ್ತಿ ಮೊಬಲೈಸ್ ಮಾಡಿಕೊಳ್ಳುವ ಕಡೆ ಹೋಗದೇ ಇದ್ದರೆ ಮುಂದೆ ನಾವು ಕೆಟ್ಟ ದಿನಗಳನ್ನು ನೋಡಬೇಕಾಗುತ್ತದೆ. ಇದುವರೆಗೆ ನಮ್ಮಲ್ಲಿ ಆರ್ಥಿಕ ಡಿಸಿಪ್ಲೀನ್ ಇಲ್ಲವೆಂದು ಮಾನ್ಯ ರಾಮದಾಸ್‌ರವರು ಹೇಳಿದರು. ಇದಕ್ಕೆ ಮಾನ್ಯ ಶೆಟ್ಟರ್‌ರವರ ಕೇಂದ್ರ ಸರ್ಕಾರವೇನೂ ಹೊರತಲ್ಲ. ಕೇಂದ್ರ ಸರ್ಕಾರದ ಬಜೆಟ್‌ನ್ನೂ ನಾವು ನೋಡಿದೆವು. 2 ಲಕ್ಷ 36 ಸಾವಿರ ಕೋಟಿ ರೂ. ಬಜೆಟ್ ಆದರೆ 2 ಲಕ್ಷ 85 ಸಾವಿರ ಕೋಟಿ ರೂ. ಸಾಲವನ್ನು ಕೇಂದ್ರ ಸರ್ಕಾರದವರು ತೀರಿಸಬೇಕು.

ಶ್ರೀ ವೈ.ಕೆ. ರಾಮಯ್ಯ :- ಆಧುನಿಕ ರಾಜ್ಯಗಳಿಗೆ, ಆಧುನಿಕ ರಾಷ್ಟ್ರಗಳಿಗೆ ಇವತ್ತು ಸಾಲ ತಂದೇ ಅಭಿವೃದ್ಧಿ ಮಾಡುವಂಥ ಪರಿಸ್ಥಿತಿಯನ್ನು ತಲುಪಿದ್ದೇವೆ. ಅದರ ಬಗ್ಗೆ ನಮ್ಮದು ಯಾರದೂ ವಿವಾದ ಇಲ್ಲ. ನಿಮ್ಮ ಜೊತೆ ನಾನೂ ಒಪ್ಪಿಕೊಳ್ಳುತ್ತೇನೆ. ಇದನ್ನು ಬಗೆಹರಿಸಲಿಕ್ಕೆ ಏನಾದರೂ ಪರಿಹಾರ ಹೇಳುವುದಿದ್ದರೆ ಹೇಳಿ: ನಿಮ್ಮ ಜೊತೆಯಲ್ಲಿ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :- ಈಗ ಎರಡೂ ಕಡೆಯಿಂದ ಮಾತನಾಡಿದರು. ಹೀಗೆಯೇ ಮಾತನಾಡಿ ಕೂಡುವುದೋ ಅಥವಾ ಅದಕ್ಕೇನಾದರೂ ಹೂಡು ಮಾಡುವುದೋ ಇದಕ್ಕೆ ಆಡಳಿತ ಪಕ್ಷದವರು ತಯಾರಾಗಿ. ನಾವೂ ತಯಾರಾಗುತ್ತೇವೆ. ಇದರ ಬಗ್ಗೆ ಎಲ್ಲಿ ಕಟ್ ಮಾಡಬೇಕು ಎಂಬ ವಿಚಾರವಾಗಿ ಕುಳಿತುಕೊಂಡು ಇದೇ ಬಜೆಟ್‌ನಲ್ಲಿ ಕಡಿಮೆ ಮಾಡೋಣ. ಹೀಗೇ ಭಾಷಣ ಮಾಡುತ್ತಾ ಹೋದರೆ ಏನು ಪ್ರಯೋಜನ?

ಶ್ರೀ ಬಿ.ಎನ್. ಪಾಟೀಲ್ :- ಬೇಡ, ಅವರು ಅಲ್ಲಿಯೇ ಇರಲಿ. ಏಕೆಂದರೆ, ಅವರು ವಿರೋಧ ಪಕ್ಷದವರು ಮಾತನಾಡಿದ ಹಾಗೆಯೇ ಮಾತನಾಡುತ್ತಾರೆ.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :- ಈ ವಿಚಾರಕ್ಕೆ ಮಾನ್ಯ ಪಾಟೀಲರು ಹೇಳಿದಂತಹ ಸಲಹೆಗೆ ಎಲ್ಲಾ ಪಕ್ಷದವರೂ ದೊಡ್ಡ ಸಂಕಲ್ಪ ಮಾಡಬೇಕಾಗುತ್ತದೆ. ಏನಾದರೂ ಹೊಸ ರಿಸೋರ್ಸ್‌ಸ್ ಮೊಬಲೈಸ್ ಮಾಡಬೇಕು ಎಂದರೆ, ಕೆಲವು ಶಿಸ್ತನ್ನು ಜಾರಿಗೆ ತರಲೇಬೇಕೆನ್ನುವುದಾದರೆ ಎಲ್ಲಾ ಪಕ್ಷಗಳೂ ಪಕ್ಷಾತೀತವಾದಂಥ ಚಿಂತನೆ ಮಾಡಿದಾಗ ಮಾತ್ರ, ಇದಕ್ಕೆ ಒಂದು ಪರಿಹಾರ ಹುಡುಕಬಹುದು.

ಶ್ರೀ ಎಸ್.ಎಸ್. ಪಾಟೀಲ್ :- ತಮ್ಮ ಕೈಗೆ ಆ ಖಾತೆ ಕೊಟ್ಟಿದ್ದರಿಂದ ಏನಾದರೂ ಸಂಪನ್ಮೂಲ ಹೆಚ್ಚು ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಸೋರಿಕೆ ಕಡಿಮೆ ಮಾಡುತ್ತಾರೆಂದು ಇದ್ದೆವು. ನಿಮ್ಮ ಒಂದು ಖಾತೆಯಲ್ಲಿಯೇ ಸಾವಿರ ಕೋಟಿ ರೂಪಾಯಿ ಹೆಚ್ಚು ಮಾಡಿ ತೋರಿಸಬಹುದು. ಆದರೆ, ಮಾಡಲಿಲ್ಲ. ಮೂರುವರೆ ವರ್ಷದಿಂದ ಅಧಿಕಾರ ನಿಮ್ಮ ಕೈಗೆ ಕೊಟ್ಟರು. ನಿಮ್ಮ ಕಡೆಯಿಂದ ಆಗಲಿಲ್ಲ. ಆದ್ದರಿಂದ, ನಾವು ವೈ.ಕೆ. ರಾಮಯ್ಯನವರಿಗೆ ಹೇಳುತ್ತಿರುವುದು, ನಾವೆಲ್ಲರೂ ಸೇರಿಕೊಂಡು, ಪಕ್ಷಾತೀತವಾಗಿ ಮಾಡದೇ ಇದ್ದರೆ ಈ ರಾಜ್ಯವನ್ನು ಒತ್ತೆ ಹಾಕುತ್ತೇವೆ. ಇನ್ನೆರಡು ವರ್ಷಗಳಲ್ಲಿ ಯಾರಿಗೂ ಪಗಾರ ಇರುವುದಿಲ್ಲ. ಅದಕ್ಕೆ, ನೀವು ಮುಂದಾಗಿ ಮೊದಲೇ ರಾಜಿನಾಮೆ ಕೊಟ್ಟುಬಿಡಿ; ಮಂತ್ರಿಮಂಡಲ ಕಡಿಮೆ ಮಾಡುವುದಕ್ಕೆ.

ಶ್ರೀ ವಿ. ಮುನಿಯಪ್ಪ :- ಅವರು ಎಲ್ಲಿಗೆ ತರುತ್ತಾರೆಂದರೆ, ಹಿಂದೆ ಹೋಗಿ ಮತ್ತೆ ರಾಜಕೀಯಕ್ಕೆ ಧಕ್ಕೆ ತರಬೇಕೆಂದು ಹೇಳುತ್ತಾರೆ.

ಬಿ.ಎನ್. ಬಚ್ಚೇಗೌಡ :- ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರು ನಿನ್ನೆ ಇನ್‌ಷಿಯೇಟ್ ಮಾಡಿದಂಥ ಸಂದರ್ಭದಲ್ಲಿ ತಿಳಿಸಿದಂಥಾದ್ದು, ಅನೇಕ ಕೃಷಿ ವಲಯದಲ್ಲಿ ಸುಮಾರು 487 ಕೋಟಿ ರೂಪಾಯಿ ತೊಡಗಿಸಿದ್ದೇವೆ. ನೀವು ಕಳೆದ ವರ್ಷದ ಅಂಕಿಅಂಶಗಳನ್ನು ನೋಡಿ. ಹಿಂದೆ ನೀವೆಷ್ಟು ತೊಡಗಿಸಿದ್ದಿರಿ. ಅದೇರೀತಿ ಗ್ರಾಮೀಣ ಅಭಿವೃದ್ಧಿಯಲ್ಲಿ 338 ಕೋಟಿ ರೂಪಾಯಿ ತೊಡಗಿಸಿದ್ದೇವೆ, ನೀರಾವರಿಗೆ ಮೂರು ಸಾವಿರ ಕೋಟಿ ರೂಪಾಯಿ; ಇಂಧನಕ್ಕೆ 1,099 ಕೋಟಿ ರೂಪಾಯಿಗಳು ಹಾಗೆಯೇ ಕೈಗಾರಿಕೆ, ಖನಿಜಗಳು ಕಡಿಮೆಯಾಗಿರತಕ್ಕಂಥಾದ್ದು. ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರದಲ್ಲಿ 15-16 ಪರ್ಸೆಂಟ್ ಗ್ರೋಥ್‌ನ್ನು ತಾವು ಹೇಳಿದ್ದೀರಿ. ಇದು ಪ್ರತಿ ವರ್ಷ ಇದ್ದೇ ಇದೆ. 2002-03ರಲ್ಲಿ 16 ಪರ್ಸೆಂಟ್ ಗ್ರೋಥ್ ರೇಟ್ ಇದೆಯೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಅದೇರೀತಿ 2003-04ರಲ್ಲಿ ತಾವು ತಿಳಿಸಿದಹಾಗೆ, 17 ಪರ್ಸೆಂಟ್ ಗ್ರೋಥ್ ಇದೆ ಅದರ ಜೊತೆಗೆ 17 ಪರ್ಸೆಂಟ್‌ನಷ್ಟು ಆದಾಯ ಇದೆ. ಅಂದರೆ ರಾಜಸ್ವ ಜಮೆಯನ್ನೂ 17 ಪರ್ಸೆಂಟ್ ಹೆಚ್ಚು ಮಾಡಿಕೊಂಡಿದ್ದೇವೆ ಮತ್ತು ಖರ್ಚು ಕೂಡ 17 ಪರ್ಸೆಂಟ್, ಅದನ್ನು ಸರಿದೂಗಿಸುವ ಕಾರ್ಯ ಆಗಿದೆಯೆಂದು ಹೇಳಿದಿರಿ. ಈ ಗ್ರೋಥ್‌ನ್ನು ತೋರಿಸಿರತಕ್ಕಂಥಾದ್ದು, ಒಂದು ಕಡೆ ತಮಗೆ ಗೊತ್ತಿದೆ. ಇವತ್ತೇನು ವಿತ್ತೀಯ ಕೊರತೆ ಎಂದು ತೋರಿಸಿರತಕ್ಕಂಥ ಈ ಪತ್ರದಲ್ಲಿ ಸುಮಾರು ಆರು ಸಾವಿರ ಕೋಟಿರೂ.ಗೂ ಮೇಲೆ ವಿತ್ತೀಯ ಕೊರತೆ ಇದೆ. ಅದೇ ರೀತಿ ರಾಜಸ್ವ ಜಮೆಯಲ್ಲಿ 2002-03ರಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿ, ಮುಖ್ಯ ಮಂತ್ರಿಗಳು ಹೇಳಿರುವುದು, ಇಲ್ಲಿ ನಮಗೆ ಕಡಿಮೆಯಾಯಿತು. ಅದೇ ರೀತಿ 2003-04ರಲ್ಲಿ ಇದೆ. ಬರೀ ಬ್ಯಾಲೆನ್ಸಿಂಗ್, ಅದನ್ನು ಎಲ್ಲಕ್ಕೂ ಸರಿದೂಗಿಸಿಕೊಂಡು, ಇದು ಸರಿಹೋಗುತ್ತದೆ ಎಂದು ಬೇರೆ ಬೇರೆ ರೂಪದಲ್ಲಿ ಕೇವಲ-155 ಕೊರತೆ ಇದೆಯೆಂದು ತೋರಿಸುವಂಥಾದ್ದು. ಇದನ್ನು ಮೇಕಪ್ ಮಾಡಿರುವಂಥ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳು ಮಾಡಿರುತ್ತಾರೆ. ಆ ದೃಷ್ಟಿಯಿಂದ ಹಣದುಬ್ಬರ ಜಾಸ್ತಿಯಾಗುತ್ತದೆ. ಇವತ್ತು ನಾವೇನು ಇನ್‌ಫ್ಲೇಷನ್ ಎಂದು ಹೇಳಿಕೊಂಡು ಬರುತ್ತಿದ್ದೇವೆ, ಆ ಹಣದುಬ್ಬರ ಜಾಸ್ತಿಯಾಗುವಂಥ ಕಾರ್ಯವನ್ನು ಪ್ರತಿ ವರ್ಷ ನಾವು ನೋಡುತ್ತಲೇ ಇದ್ದೇವೆ. ನಾವು ಅದರ ಕಡೆ ಗಮನ ಕೊಡಲಿಲ್ಲ. ಈ ದೃಷ್ಟಿಯಿಂದ ನಾವು ಇವತ್ತೇನು 25 ಸಾವಿರ ಕೋಟಿ ರೂಪಾಯಿಗಳ ಆದಾಯ ಹೋಗಿದೆಯೆಂದು ಹೇಳಿಕೊಂಡು ಹೋಗುತ್ತಿದ್ದೇವೆ ಮತ್ತು 40 ಸಾವಿರ ಕೋಟಿ ರೂಪಾಯಿಗಳ ಸಾಲ ತೀರಿಸಬೇಕೆಂದು ಸಾಲವನ್ನು ತೋರಿಸುತ್ತಿದ್ದೇವೆ. ತಾವು ಕೆಳಗಿಳಿಯುವ ಹೊತ್ತಿಗೆ ಸಾಲದ ಹೊರೆ 50 ಸಾವಿರ ಕೋಟಿ ರೂ.ಗೆ ಹೋಗುತ್ತದೆ. ಮಾನ್ಯ ಖರ್ಗೆಯವರಿಗೆ ಇದು ಗೊತ್ತಿದೆ, ಅವರು ಈ ಕಡೆ ಇದ್ದಾಗ ನಮ್ಮನ್ನು ಬೈಯುತ್ತಿದ್ದರು. ನೀವು ಹೆಚ್ಚು ಸಾಲ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದರು ಇದರಿಂದ ಮುಂದೆ ಬರುವಂಥವರು, ಯಾರೂ ಸರ್ಕಾರ ನಡೆಸಲಿಕ್ಕಾಗುವುದಿಲ್ಲ. ಆ ಪರಿಸ್ಥಿತಿಗೆ ನಮ್ಮ ರಾಜ್ಯಸರ್ಕಾರ ಶಿಸ್ತನ್ನು ತಂದಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಹಾಗೆ ಹೇಳಲಿಲ್ಲ. ನೀವು ಆಗ ಸುಮಾರು 12 ಸಾವಿರ ಕೋಟಿ ರೂಪಾಯಿ ಸಾಲ ಮಾಡಿರಬಹುದು. ಸಾಲ ಮಾಡಿ ಹೋಳಿಗೆ ತಿನ್ನಬೇಡಿ, ಸಾಲ ಮಾಡಿ ಕೆಲಸ ಮಾಡಿ ಎಂದು ಹೇಳಿದ್ದೆವು. ನಾವು ಸಾಲ ಮಾಡಿ ಕೆಲಸ ಮಾಡುತ್ತಿದ್ದೇವೆ. ನೀವು ಸಾಲ ಮಾಡಿದ ಹೋಳಿಗೆ ತಿಂದಿರಿ.

ಶ್ರೀ ಬಿ.ಎನ್. ಬಚ್ಚೇಗೌಡ :- ಖರ್ಗೇಜಿಯವರು ಆ ಕಡೆ ಹೋದರೆ ಹೋಳಿಗೆ ಹೇಳುತ್ತಾರೆ ಈ ಕಡೆ ಬಂದರೆ ಕೆಲಸ ಮಾಡಿ ಎಂದು ಹೇಳುತ್ತಾರೆ. ನಮ್ಮ ರಾಜ್ಯದ ಪ್ರಗತಿಯನ್ನು ಅನೇಕ ಸದಸ್ಯರು ನೋಡಿದ್ದೇವೆ. ನಾವು ಹಳಬರು, ನಮಗೆ ಗೊತ್ತಿದೆ. ಇದು ಖರ್ಗೆಯವರಿಗೂ ಗೊತ್ತು, ಎಲ್ಲರಿಗೂ ಗೊತ್ತು. ಆದರೆ, ಹೊಸಬರಿಗೆ ಮುಖ್ಯಮಂತ್ರಿಗಳು ತೋರಿಸಿರತಕ್ಕಂಥಾದ್ದು ಒಂದು ನೂರು ಕೋಟಿ ರೂಪಾಯಿ ಇಟ್ಟು, ಮುಖ್ಯಮಂತ್ರಿಗಳ ನಿಧಿ ಎಂದು ಮಾಡಿದ್ದಾರೆ. ಪ್ರಧಾನ ಮಂತ್ರಿಗಳು ರೋಜ್‌ಗಾರ ಯೋಜನೆ ಎಂದರೆ, ನಾನೇನು ಕಡಿಮೆ ಎಂದು ನಮ್ಮ ಮುಖ್ಯಮಂತ್ರಿಗಳು, "ಮುಖ್ಯಮಂತ್ರಿಗಳ ರಸ್ತೆ ನಿಧಿ" ಆದಾದಮೇಲೆ ದೇವಸ್ಥಾನಗಳು ಮಸೀದಿಗಳು ಇತ್ಯಾದಿಗಳು ರಿಪೇರಿ ಇದ್ದರೆ ಅದಕ್ಕೊಂದು ಹತ್ತು ಕೋಟಿ ರೂ. ಕಾರ್ಪಸ್. ಅವರ ಹತ್ತಿರ ಅರ್ಜಿ ತೆಗೆದುಕೊಂಡು ಹೋಗಬೇಕು. ಅಂದರೆ, ಯಾವಾಗಲೂ ಈ ಮುಖ್ಯಮಂತ್ರಿಗಳನ್ನು ದರ್ಶನ ಮಾಡುತ್ತಿರಬೇಕು. ನಾವು ಖಾಯಿಲೆ ಇತ್ಯಾದಿ ವಿಚಾರದಲ್ಲಿ ಅರ್ಜಿ ತೆಗೆದುಕೊಂಡು ಹೋಗುತ್ತೇವೆ. ಮುಖ್ಯಮಂತ್ರಿಗಳ ನಿಧಿ ಎಂದು ನಾನಾ ರೀತಿಯಲ್ಲಿ ಅವರ ಹೆಸರು ಇಟ್ಟುಕೊಳ್ಳುತ್ತಿದ್ದಾರೆ. ರಸ್ತೆ ನಿಧಿ ನೂರು ಕೋಟಿ ರೂಪಾಯಿ ಕಾರ್ಪಸ್, ಅದಕ್ಕೆ ನಾವು ಹೋಗಿ ಕೇಳಿಕೊಳ್ಳಬೇಕು. ಆದಾದ ಮೇಲೆ ಈ ದೇವಸ್ಥಾನಗಳ ರಿಪೇರಿ ಅದಕ್ಕೆ 10-5 ಸಾವಿರ ರೂಪಾಯಿಗಳ ಅರ್ಜಿ ಬರೆಸಿಕೊಂಡು ರಿಪೇರಿಗೆ ಕೊಡುವುದು. ಚುನಾವಣೆ ಪ್ರಕೃತ ಇದೆಲ್ಲಾ ರಾಜಕೀಯ ಸ್ಟಂಟ್, ಈ ಕಡೆಯವರಿಗೆ ಯಾರಿಗೂ ಅನುಕೂಲವಾಗುವುದಿಲ್ಲ. ನಾವು ಪತ್ರ ಕೊಟ್ಟರೆ, ಅದು ಪತ್ತೆಯೇ ಇರುವುದಿಲ್ಲ. ಆದರೆ, ಆ ಕಡೆ ಇರತಕ್ಕಂಥವರಿಗೆ, ಅದರ ಮೇಲೆ ಒಂದಷ್ಟು ಹಣ ಬರೆಸಿಕೊಂಡು ಇದನ್ನು ಮಾಡಿಕೊಳ್ಳುವಂಥಾದ್ದು. ಕೃಷಿಕರಿಗೆ ಬಹಳ ಅನುಕೂಲ ಮಾಡಿದ್ದೇವೆಂದು ಹನಿ ನೀರಾವರಿಗೆ ಕೆಲವರಿಗೆ 25 ಪರ್ಸೆಂಟ್ ಇದ್ದುದ್ದು 50 ಪರ್ಸೆಂಟ್ ತೋಟಗಾರಿಕೆಯಲ್ಲಿ ಬಿಜಾಪುರ ಎಂದು ತೋರಿಸಿ 50 ಪರ್ಸೆಂಟ್ ಇರತಕ್ಕಂಥ ಹನಿ ನೀರಾವರಿ ಯೋಜನೆಗೆ 100 ಪರ್ಸೆಂಟ್ ರಿಯಾಯಿತಿ ಕೊಡುತ್ತೇವೆಂದು ಹೇಳಿರುವಂಥಾದ್ದು. ಈ ಕಡೆ ಬೆಂಗಳೂರು ಜಿಲ್ಲೆ, ಬೆಂಗಳೂರು ನಗರ ಜಿಲ್ಲೆ ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ತೋಟಗಾರಿಕೆ ಇರುವಂಥಾದ್ದು. ನೀವು ಬಿಜಾಪುರಕ್ಕೆ ಕೊಡಿ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ, ಎಲ್ಲಿ ಹೆಚ್ಚು ತೋಟಗಾರಿಕೆ ಬೆಳೆಗಳ ಉತ್ಪಾದನೆ ಇದೆ, ಎಲ್ಲಿ ಹಾಪ್‌ಕಾಮ್ಸ್ ಕೆಲಸ ಮಾಡುತ್ತಾ ಇದೆ ಇಂತಹ ಭಾಗಗಳಲ್ಲಿ ನಾವು ಪ್ರೋತ್ಸಾಹದ ದೃಷ್ಟಿಯಿಂದ ಇಲ್ಲಿಯು 100 ಪರ್ಸೆಂಟ್ ಕೊಡಬೇಕಾಗಿತ್ತು. ಬೇಕಾದರೆ ಇಡೀ ರಾಜ್ಯಕ್ಕೆ ಕೊಡಲಿ ಆದರೆ ಇವತ್ತು 50 ಪರ್ಸೆಂಟ್ ಎಂದು ಮಾಡಿರುವಂಥಾದ್ದು. ಹೀಗೆ ಅಲ್ಲಲ್ಲಿ ಅಲ್ಪಸ್ವಲ್ಪ ಈ ರೀತಿ

5.40 ಪಿ.ಎಂ.

ಕೆಲಸಗಳು ಆಗಿವೆ, ಅದಕ್ಕೋಸ್ಕರವಾಗಿ ನಾನು ಮಾತನಾಡುವಾಗ ಪೀಠಿಕೆಯಲ್ಲಿ ತಿಳಿಸಿದೆ. ಈಗ ನಮ್ಮ ಮುಖ್ಯಮಂತ್ರಿಗಳು ಆಕ್ಸಫರ್ಡ್ ಕೃಷ್ಣ ಹೋಗಿ ಸೋಮನಹಳ್ಳಿ ಕೃಷ್ಣ ಆಗುವಂತೆ ಹಳ್ಳಿಕಡೆ ಹೊರಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ ಪತ್ರಿಕೆಗಳಲ್ಲಿ ಬರೆದಿರುವುದನ್ನು ನೋಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು ಸೋಮನಹಳ್ಳಿ ಕೃಷ್ಣರೇ ಅವರು ಬೇರೆ ಇನ್ನೂ ಎಲ್ಲಿಂದ ಬಂದರು?

ಶ್ರೀ ವೈ.ಕೆ. ರಾಮಯ್ಯ :- ಸೆಂಟ್ ಜೋಸೆಫ್‌ನಲ್ಲಿ ಓದಿದ ನೀವು ಸೆಂಟ್ ಜೋಸೆಫ್ ಬಚ್ಚೇಗೌಡರೆ ನೀವು? ನೀವು ಹೊಸಕೋಟೆ ಬಚ್ಚೇಗೌಡರೆ ನಮ್ಮ ಹಾಗೆ ನೀವು ಹಳ್ಳಿ ಕಾಲೇಜ್‌ನಲ್ಲಿ ಓದಿದವರಲ್ಲ ಎಂಬುದು ನನಗೆ ಗೊತ್ತಿದೆ. ಸುಮ್ಮನೆ ಏಕೆ ಇದೆಲ್ಲಾ

ಶ್ರೀ ಬಿ.ಎನ್. ಬಚ್ಚೇಗೌಡ :- ಈ ಹಿಂದೆ ಇದ್ದ ಬಜೆಟ್‌ನ ಹೋಲಿಕೆ ದೃಷ್ಟಿಯಿಂದ ಹೇಳಿದೆ. ಮೊದಲು ಬೆಂಗಳೂರು ಸಿಂಗಪೂರ್ ಆಯಿತು, ಆ ಮೇಲೆ ನಗರಗಳ ಅಭಿವೃದ್ಧಿಯಾಯಿತು, ಆ ಮೇಲೆ ಸಿಟಿಬಿಟಿ ಆಯಿತು, ಆ ಮೇಲೆ ಹೈಟೆಕ್ ಆಯಿತು, ಕೃಷಿ ಕ್ಷೇತ್ರಕ್ಕೆ ಆದ್ಯತೆಯನ್ನು ಕೊಟ್ಟಿರತಕ್ಕಂಥದ್ದು, ಮತ್ತೆ ಬೇರೆ ಕೈಗಾರಿಕ ಕ್ಷೇತ್ರ ಗ್ರಾಮೀಣ ಅಭಿವೃದ್ಧಿ, ಇಂಥದ್ದಕ್ಕೆ ಅಭಿವೃದ್ಧಿಯ ದೃಷ್ಟಿಯಿಂದ ಕೊಟ್ಟಿರತಕ್ಕಂಥದ್ದು... ಇದರಿಂದ ಒಳ್ಳೆಯದು ಆಗಿದೆ, ನಾವು ಒಟ್ಟಾರೆ ನಾವು ವಿರೋಧಿಸಬೇಕೆಂಬ ಪ್ರಶ್ನೆಯಲ್ಲ. ಈ ಬಾರಿ ಮುಖ್ಯ ಮಂತ್ರಿಗಳು ಒಂದು ವಿಭಿನ್ನವಾದ ಬಜೆಟ್‌ನ್ನು ಕೊಟ್ಟಿದ್ದಾರೆ. ನಾನೂ ಕೂಡ ಒಬ್ಬ ಪಶುಸಂಗೋಪನ ಸಚಿವನಾಗಿ ಕೆಲಸ ಮಾಡಿದ್ದೆ. ಒಂದು ಪಶು ವಿಶ್ವವಿದ್ಯಾನಿಲಯ ಆಗಬೇಕೆಂದು ನಾವೆಲ್ಲಾ ಪ್ರಯತ್ನ ಪಟ್ಟೆವು. ಅದನ್ನು ನಮ್ಮ ಮಾನ್ಯ ಮಹದೇವ್‌ರವರು ಸಾಕಷ್ಟು ಪ್ರಯತ್ನ ಮಾಡಿದ್ದರು. ನಮಗೆಲ್ಲಾ ಹೇಳಿದ್ದರು. ಸರಕಾರದ ಮೇಲೆ ನೀವು ಒತ್ತಡ ಹಾಕಿ ನಾವೂ ಪ್ರಯತ್ನ ಮಾಡುತ್ತಿದ್ದೇವೆ. ಆಗುವ ಹಂತದಲ್ಲಿದೆ, ಅದಕ್ಕೆ ಏನಾದರೂ ಒಂದು ಐದು ಕೋಟಿ ರೂ. ಹಣವನ್ನು ಕೊಡಲಿ, ನಮ್ಮಲ್ಲಿ ಮೂಲಭೂತ ಸೌಕರ್ಯಗಳಿವೆ, ಇದನ್ನೆಲ್ಲಾ ಹೇಳಿ ಇವೊತ್ತು ಅದನ್ನು ಘೋಷಣೆ ಮಾಡಿಸಿದ್ದಾರೆ, ಸಂತೋಷ. ನಾನು ಅದನ್ನು ಸ್ವಾಗತಿಸುತ್ತೇನೆ. ಅದೇ ರೀತಿಯಲ್ಲಿ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ, ಅದೂ ಕೂಡ ಇವೊತ್ತು ಆಯಿತು. ಅದೂ ಕೂಡ ರಾಜ್ಯದಲ್ಲಿ ಅವಶ್ಯಕತೆ ಇದ್ದಂಥಾದ್ದು ಅದಕ್ಕೂ ಒಂದು ಐದು ಕೋಟಿ ರೂ. ಹಣವನ್ನು ಕೊಟ್ಟು ಅಭಿವೃದ್ಧಿ ಮಾಡಿರುವ ಕಾರ್ಯದಲ್ಲಿ ಅದನ್ನು ಮಾಡಿರುವಂಥಾದ್ದು. ನಾನು ಮಾನ್ಯ ಮಹದೇವ್‌ರವರಿಗೆ ಹೇಳುವಂಥಾದ್ದು, ಅದು ಬೆಂಗಳೂರಲ್ಲಿ ಆಗಿದ್ದರೆ ಚೆನ್ನಾಗಿತ್ತು. ಬೀದರ್ ಆ ಕಾರ್ನರ್‌ನಲ್ಲಿದೆ. ಒಂದು ವಿಶ್ವವಿದ್ಯಾನಿಲಯದ ಹೆಡ್‌ಕ್ವಾಟರ್ ಬೆಂಗಳೂರಿನಲ್ಲಿದ್ದರೆ, ಇದನ್ನೆಲ್ಲಾ ಕೋ-ಆಡಿಷನ್ ಮಾಡಿಕೊಂಡು, ಬೇರೆ ಬೇರೆ ಪ್ರಗತಿಯ ದೃಷ್ಟಿಯಿಂದ ಇವೊತ್ತು ಹೆಚ್ಚು ಕೆಲಸ ಮಾಡುವಂಥಾದ್ದು ಚೆನ್ನಾಗಿರುತ್ತಿತ್ತು. ಅದಕ್ಕೆ ತಾವು ಏನು ಹೇಳುತ್ತೀರೊ ಗೊತ್ತಿಲ್ಲ. ನಾವು ಬೀದರ್‌ನಲ್ಲಿ ಮಾಡಬೇಡಿ ಅಂದರೆ ತಪ್ಪಾಗುತ್ತದೆ. ಮಾನ್ಯ ಖರ್ಗೆಯವರು ಪಕ್ಕದಲ್ಲಿಯೇ ಇದ್ದಾರೆ. ಗುಲಬರ್ಗ ಬೀದರ್ ಬೇಡವೇ ಎಂದು ಕೇಳಬಹುದು. ನಮಗೆ ಎಲ್ಲವೂ ಬೇಕು.. ಇಂಥವುಗಳನ್ನು ಇನ್ನೂ ಹೆಚ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅನೇಕ ಸಾರಿ ಯುನಿವರ್ಸಿಟಿಗಳು, ಎಲ್ಲಾ ಕಡೆಗಳಲ್ಲಿಯೂ ಬೇರೆ ಬೇರೆ ಪ್ರದೇಶದಲ್ಲಿ ಇರುತ್ತವೆ. ಉದಾಹರಣೆಗೆ ಆಗ್ರಿಕಲ್ಚರ್ ಯೂನಿವರ್ಸಿಟಿ ಹರಿಯಾಣದ್ದು ಹಿಸ್ಸಾರ್‌ನಲ್ಲಿದೆ, ಅದೇನೂ ಕ್ಯಾಪಿಟಲ್ ಪ್ಲೇಸ್ ಅಲ್ಲ. ಅದು ಚಂದೀಗಡ್‌ನಲ್ಲಿಲ್ಲ. ಅದೇ ರೀತಿಯಲ್ಲಿ ಉತ್ತರ ಪ್ರದೇಶದ ಪಂತ್ ಯುನಿವರ್ಸಿಟಿ, ಅದು ನೈನಿತಾಲ್‌ನಲ್ಲಿದೆ. ಹಾಗೆ ಬೇರೆ ಬೇರೆ ಕಡೆಗಳಲ್ಲಿದ್ದರೂ ಕೂಡ ಅದೊಂದು ಇಂಟಿಗ್ರೇಶನ್ ದೃಷ್ಟಿಯಿಂದ ಮತ್ತು ಈ ಕಡೆಯ ವಿದ್ಯಾರ್ಥಿಗಳು ಆ ಕಡೆಗೆ ಹೋಗುತ್ತಾರೆ, ಅಲ್ಲಿಯವರು ಇಲ್ಲಿಗೆ ಬರುತ್ತಾರೆ. ಅನೇಕ ಕಡೆ ಪ್ರೊಫೆಶನಲ್ ಯುನಿವರ್ಸಿಟಿಗಳು ಏನಿವೆ ಅವುಗಳು ಬೇರೆ ಬೇರೆ ಪ್ರದೇಶಗಳಲ್ಲಿವೆ. ಯಾವುದೂ ಕೂಡ ಕ್ಯಾಪಿಟಲ್ ಪ್ಲೇಸ್‌ನಲ್ಲಿಲ್ಲ. ಆ ಒಂದು ದೃಷ್ಟಿಯಿಂದ ಅ ಭಾಗದಲ್ಲಿ ಆಗಿದೆ. ನಿಮಗೂ ಕೂಡ ಸಂತೋಷವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ :- ದುರ್ದೈವದಿಂದ ಶುಗರ ಡೈರೆಕ್ಟರೇಟ್ ಈಗ ಬೆಳಗಾಂವಿಯೊಳಗೆ ಇದೆ, ಟೆಕ್ಸ್‌ಟೈಲ್ ಕಮೀಶನರ್ ಆಫೀಸ್ ಹುಬ್ಬಳ್ಳಿಯಲ್ಲಿ ಇದೆ. ಇದೂ ಆಗಬಾರದು ಎಂದು ಹೇಳುತ್ತೇವೆ. ನೀವು ಚಾಲೂ ಮಾಡಿದ ಹಾಗೆ ಮಾಡುವುದು, ಮತ್ತೆ ಅದನ್ನು ತಂದು ಬೆಂಗಳೂರಿನಲ್ಲಿಟ್ಟುಕೊಳ್ಳುವುದು. ಎಲ್ಲವೂ ಈ ರೀತಿಯಲ್ಲಾಗಿವೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಬೀದರ್‌ನಲ್ಲಿ ಈಗಾಗಲೇ ವೆಟರ್‌ನರಿ ಕಾಲೇಜು ಇದೆ, ಜಾಗ ಇದೆ, ಕಟ್ಟಡ ಇದೆ, ಎಲ್ಲ ಮೂಲಭೂತ ಸೌಕರ್ಯಗಳು ಇವೆಯೆಂದು ಅಲ್ಲಿ ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಅಲ್ಲಿಯೇ ಉಳಿಸಿ ಎಂದೇ ನಮ್ಮ ಉದ್ದೇಶ.. ಆದರೆ ನೀವು ಉಳಿಸುವುದಿಲ್ಲ... ಹೇಳುವುದನ್ನು ಹೇಳಿ ಮತ್ತೆ ಕಿತ್ತುಕೊಂಡು ಬಂದು ಬಿಡುವುದು. ಹಾಗಾದರೆ ಶುಗರ್ ಡೈರೆಕ್ಟರೇಟ್ ಏಕೆ ವಾಪಸ್ ಬಂತು? ಟೆಕ್ಸ್‌ಟೈಲ್ಸ್ ಕಮಿಶನರ್ ಆಫೀಸು ಏಕೆ ವಾಪಸ್ ಬಂತು? ನಿಮ್ಮ ಸರಕಾರ ಬಂದಕೂಡಲೇ ಅಲ್ಲಿಂದ ಹಿಂದಕ್ಕೆ ತೆಗೆದುಕೊಂಡು ಬಿಟ್ಟಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇದು ಹಾಗೆ ಆಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಬೀದರ್‌ನಲ್ಲಿ ವೆಟರ್‌ನರಿ ಯೂನಿವರ್ಸಿಟಿ ಆಯಿತು ಎಂದು ನಾನು ಸ್ವಾಗತ ಮಾಡಿದ್ದೇನೆ. ಒಂದು ಒಳ್ಳೆಯ ಕಾರ್ಯ ಇವೊತ್ತು ಆಗಿದೆ. ಆಂಧ್ರಪ್ರದೇಶ, ತಮಿಳುನಾಡು, ವೆಸ್ಟ್‌ಬೆಂಗಾಲ್, ಮುಂತಾದ ಕಡೆಗಳಲ್ಲಿ ಇದೆ, ಇದು ಬಹಳ ಅಪರೂಪವಾಗಿ ಆಗುವಂಥ ಯೂನಿವರ್ಸಿಟಿಗಳು. ಪಶು ವಿಶ್ವವಿದ್ಯಾನಿಲಯ ಆದರೆ ಅದರಲ್ಲಿ ಹೆಚ್ಚು ತಂತ್ರಜ್ಞಾನ ಬೆಳೆಯುತ್ತದೆ. ಅದರಿಂದ ಆ ಕ್ಷೇತ್ರದಲ್ಲಿ ಬೆಳವಣಿಗೆಯು ಒಳ್ಳೆಯದಾಗುತ್ತದೆ. ಆ ದೃಷ್ಟಿಯಿಂದ ಪ್ರಗತಿಯನ್ನು ಕಾಣುವಂಥಾದ್ದು, ಇವೊತ್ತು ಆಗಬೇಕು. ಜೊತೆಗೆ ಹೆಚ್ಚಿಗೆ ಔಷಧಿಗಳನ್ನು ಇವೊತ್ತು ಇರತಕ್ಕಂಥ ಮೂರು-ನಾಲ್ಕು ಸಾವಿರಗಳಷ್ಟು ಇನ್‌ಸ್ಟಿಟ್ಯೂಷನ್ಸ್‌ಗಳಿವೆ. ಹೆಚ್ಚು ಔಷಧಿಗಳ ಕೊರತೆಯು ಇದೆ. ಪದೇ ಪದೇ ಈ ಸದನದಲ್ಲಿ ನಾವು ಹೇಳುತ್ತಾ ಇರುತ್ತೇವೆ. ಔಷಧಿಗಾಗಿ ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತಿರುತ್ತೇವೆ. ನಮ್ಮ ಕಾಲದಲ್ಲಿ ಸುಮಾರು ಆರು ಕೋಟಿ ರೂ. ಗಳ ವರೆಗೆ ಹೋಗಿತ್ತು. ಬಜೆಟ್‌ನಲ್ಲಿ ಈ ಸಾರಿ 12-15 ಕೋಟಿರೂಗಳಿಗೆ ಹೋಗಿದ್ದೀರೋ ಎಂದು ನಮಗೆ ಗೊತ್ತಿಲ್ಲ. ಇರುವಂಥ ಪ್ರಾಣಿಗಳಿಗೆ ಹೆಚ್ಚು ಔಷಧಿಗಳನ್ನು ಕೊಡುವಂಥ ಕಾರ್ಯ ಆಗಬೇಕು. ಜೊತೆಗೆ ಇವೊತ್ತು ಪೌಲ್ಟ್ರಿ ಫೆಡರೇಶನ್ ನಮ್ಮ ವ್ಯಾಪ್ತಿಯಲ್ಲಿರತಕ್ಕಂಥಾದ್ದು. ಅದು ಈಗ ಏನೂ ಕೆಲಸ ಮಾಡುತ್ತಾ ಇಲ್ಲ. ಪೌಲ್ಟ್ರಿ ಒಟ್ಟಾರೆ ಬಹಳ ತೊಂದರೆಯಲ್ಲಿರತಕ್ಕ ಉದ್ಯಮವಾಗಿದೆ. ನಮ್ಮಲ್ಲಿ ಒಂದು ಕೋಟಿಯ ವರೆಗೆ ಮೊಟ್ಟೆ ಉತ್ಪಾದನೆ ಇದೆ. ರೈತರು ಇವೊತ್ತು ಪೌಲ್ಟ್ರಿ ಲೈನ್‌ನಲ್ಲಿ ಮೆನೇಜ್ ಮಾಡುವುದಕ್ಕೆ ಆಗುತ್ತಾ ಇಲ್ಲ. ಯಾರೋ ದೊಡ್ಡ ದೊಡ್ಡವರು ಅದನ್ನು ಇವೊತ್ತು ಮಾಡಬಹುದು. ಸುಗುಣ, ಗ್ರಾದೇಜ್, ಲೋಟಸ್, ಮುಂತಾಗಿ ಕೆಲವು ಕಂಪನಿಗಳು ಮಾಡಿಕೊಂಡು ಹೋಗಬಹುದು. ಆದರೆ ಸಾಮಾನ್ಯ ರೈತರಿಗೆ ಪೌಲ್ಟ್ರಿ ಇಟ್ಟುಕೊಂಡು ಬದುಕಲು ಆಗುತ್ತಾ ಇಲ್ಲ. ಸಬ್‌ಸಿಡೀಸ್ ನಿಂತಿದೆ. ಇವೊತ್ತು ಒಂದು ಮೊಟ್ಟೆ 80 ಪೈಸೆಗೆ ಬಂದಿದೆ. ಉತ್ಪಾದನೆ ವೆಚ್ಚ 1-20 ರೂಪಾಯಿಗಳಾದರೆ, 80-90 ಪೈಸೆಗಳಿಗೂ ಮೊಟ್ಟೆ ಮಾರಾಟವಾಗುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿ ಬೇಡಿಕೆಯು 50 ರಿಂದ 60

ಲಕ್ಷವಿದ್ದರೆ, ಉತ್ಪಾದನೆ ಒಂದು ಕೋಟಿಯವರೆಗೆ ಇದೆ. ಹಾಗಾದರೆ ಉಳಿದ 30-40 ಲಕ್ಷ ಮೊಟ್ಟೆಗಳನ್ನು ಏನು ಮಾಡಬೇಕು? ಇವೊತ್ತು ಪೌಲ್ಟ್ರಿ ಫೆಡರೇಶನ್ ಆಕ್ಟಿವಿಟೀಸ್ ನಿಂತು ಹೋಗಿದೆ. ಅವರಿಂದ ಏನೂ ಆಗುತ್ತಾ ಇಲ್ಲ. ಇದು ಇವೊತ್ತು ನಮ್ಮ ಸರಕಾರದ ಸ್ವಾಮ್ಯದಲ್ಲಿರತಕ್ಕಂಥಾದ್ದು. ಎಷ್ಟು ಈ ರೀತಿ ಸಹಕಾರ ಸಂಘಗಳನ್ನು ಮಾಡಿ, ಪೌಲ್ಟ್ರಿ ಅಭಿವೃದ್ಧಿಯನ್ನು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿಲ್ಲ. ಆ ಕುರಿತು ಏನೂ ಪ್ರಗತಿಯಾಗಿಲ್ಲ. ಅದೇ ರೀತಿಯಲ್ಲಿ ಆಧುನಿಕ ಕಸಾಯಿ ಖಾನೆಗಳನ್ನು ತೆಗೆಯಬೇಕು. ಬೆಂಗಳೂರಿನಿಂದ ಹೊರಗೆ ಹಾಕಬೇಕು, ಅದಕ್ಕೆ ಬರತಕ್ಕಂಥ ಹಣವನ್ನು ನಾವು ಕೇಂದ್ರ ಸರಕಾರದಿಂದ ಪಡೆಯ ಬೇಕು, ಆದರೆ ಏನೂ ಒಂದು ರೂಪಾಯಿಯನ್ನು ನಾವು ಅಲ್ಲಿಂದ ಪಡೆದಿಲ್ಲ. ಇವೊತ್ತಿಗೂ ಕಸಾಯಿಖಾನೆ ಇಲ್ಲಿಯೇ ಇದೆ, ಅತ್ಯಾಧುನಿಕ ಕಸಾಯಿಖಾನೆಗಳು ಎಲ್ಲಿಯೂ ಇಲ್ಲ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು, ಎಲ್ಲಿಯೂ ಆಗಲಿಲ್ಲ. ಏನು ಹಳೆಯ ವ್ಯವಸ್ಥೆ ಇದೆ, ಅದು ಮುಂದುವರಿದಿದೆ. ಏನು ಹಳೆಯ ಜನಸಂಖ್ಯೆ 50-60 ಲಕ್ಷಕ್ಕೆ ವ್ಯವಸ್ಥೆ ಇತ್ತು ಅದೇ ಇದೆ. ಆಧುನಿಕ ಸ್ಲಾಟರ್‌ಹೌಸಸ್‌ನ್ನು ತಾವು ನೋಡಿ ಬರಬೇಕು. ತಾವು ಬೇರೆ ಸಮಾಜದವರಿದ್ದೀರಿ ಅದನ್ನು ತೆಗೆದುಕೊಳ್ಳುತ್ತೀರೋ ಏನೋ ಗೊತ್ತಿಲ್ಲ. ಬಾಂಬೆ ಮುಂತಾಗಿ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಹೋಗಿ ನೋಡಬೇಕು. ಯಾವರೀತಿಯಲ್ಲಿ ಅವರು ಸ್ಟನ್ನಿಂಗ್ ಮಾಡುತ್ತಾರೆ, ಯಾವ ರೀತಿಯಲ್ಲಿ ಅದನ್ನು ವಧೆ ಮಾಡಿ ಉಪಯೋಗಿಸುತ್ತಾರೆ, ಅದು ಹೈಜಿನಿಕ್ ಆಗಿ ಯಾವರೀತಿಯಲ್ಲಿರಬೇಕು. ಈಗ ಇಲ್ಲಿ ಏನೂ ಇಲ್ಲ. ಎಲ್ಲೋ ಸೀಲ್ ಹಾಕುತ್ತಾರೆ, ಎಲ್ಲೋ ಹೋಗುತ್ತ ಇದೆ, ಈ ರೀತಿ ಇದೆ. ಆ ದೃಷ್ಟಿಯಿಂದ ಇವೊತ್ತು ಆಗ್ರಿಕಲ್ಚರ್ ಫೈಲ್ಯೂರು ಆಗಿದೆ, ಮಾನ್‌ಸೂನ್ ಮೇಲೆ ನಾವು ರೈತರು ಶೇಕಡ 70 ರಷ್ಟು ಡಿಫೆಂಡ್ ಆಗಬೇಕು. ಸೆರಿಕಲ್ಚರ್ ಫೈಲ್ಯೂರ್ ಆಗುತ್ತಾ ಇದೆ. ತಾವು ತೆಗೆದುಕೊಂಡಿರತಕ್ಕಂಥ ಹಾಲು ಉತ್ಪಾದನೆಯಲ್ಲಿ ಸ್ವಲ್ಪ ಜೀವ ಹಿಡಿದುಕೊಳ್ಳುವ ಪರಿಸ್ಥಿತಿಯು ನಮ್ಮಲ್ಲಿದೆ. ಅದಕ್ಕೂ ಖಾಸಗಿಯವರ ಪೈಪೋಟಿ ಇದೆ, ಅವರ ಬಗ್ಗೆ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಹತ್ತಾರು ಖಾಸಗಿ ಸಂಸ್ಥೆಗಳಿವೆ. ದೊಡ್ಲ, ಹೆರಿಟೇಜ್, ಗುಡ್‌ಮಾರ್ನಿಂಗ್, ಮುಂತಾಗಿ ನೂರೆಂಟು ಇವೆ. ನೀಲಗಿರೀಸ್ ಇವರದ್ದೆಲ್ಲಾ ಸರಿಸಮಾನವಾದ ಪೈಪೋಟಿ. ತಾವು ಸದನಗಳಲ್ಲಿ ಹೇಳಿಕೆಯನ್ನು ಮಾಡಿದ್ದೀರಿ. ಸುಮಾರು 25 ಲಕ್ಷ ಲೀಟರ್ ಹಾಲಿನ ಉತ್ಪಾದನೆ ಇದೆ, ಸಾಕಷ್ಟು ತುಪ್ಪ, ಬೆಣ್ಣೆ ಸ್ಟಾಕ್ ಇದೆ. ಮಿಲ್ಕ್ ಪೌಡರ್ ಸ್ಟಾಕ್ ಇದೆ, ಕೆಎಮ್‌ಎಫ್‌ನಲ್ಲಿ ಸಾಕಷ್ಟು ಇದೆ. ಇದರ ಮಾರಾಟಕ್ಕೆ ಬಹಳ ತೊಂದರೆಯಾಗಿದೆ. ರೈತರಿಗೆ ಹಾಲು ಉತ್ಪಾದನೆಯಲ್ಲಿ ಲೀಟರ್‌ಗೆ 8-50 ರೂ.ಗಳಾಗುತ್ತವೆ, ಅದನ್ನು ನಾವು ಅವರಿಗೆ ಕೊಡುತ್ತಾ ಇಲ್ಲ. ಉತ್ಪಾದನೆ ವೆಚ್ಚದ ವಿಚಾರ ನಿಮಗೆ ಗೊತ್ತಿದೆ. ಹಾಗಾಗಿ ರೈತರು ಹೆಚ್ಚು ಉತ್ಪಾದನೆ ಮಾಡಲು ಆಗುತ್ತಾ ಇಲ್ಲ. ಕ್ಷೀರೋದ್ಯಮ ಕೂಡ ಕುಂಠಿತವಾಗುತ್ತಿದೆ. ಇವರಿಗೆ ನಾವು ಬೆಂಬಲವಾಗಿ ನಿಲ್ಲಬೇಕಾಗುತ್ತದೆ. ಇವೊತ್ತು ಕೃಷಿಗೆ ಪ್ರಧಾನವಾಗಿ ಆದರ ಜೊತೆ ಜೊತೆಯಲ್ಲಿಯೇ ಇವೆಲ್ಲವೂ ಬರುವಂಥವುಗಳು. ಪೌಲ್ಟ್ರಿ, ಡೈರಿ, ಸಿರಿಕಲ್ಚರ್ ಉದ್ಯಮಗಳಿಗೆ ನಾವು ಜೊತೆ ಜೊತೆಯಾಗಿ ನಿಲ್ಲಬೇಕು. ಇದಕ್ಕೆ ಸಬ್ಸಿಡಿ ಕೊಡಬೇಕಾಗುತ್ತದೆ. ಪ್ರೋತ್ಸಾಹ ಧನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ, ಕೃಷಿಕ ಇವೊತ್ತು ಬರೀ ಮಳೆ ಆಶ್ರಯದಲ್ಲಿ ಉಳಿದುಕೊಳ್ಳುತ್ತೇನೆಂದರೆ, ಅವನ ಜೀವನ ಸಾಗುವುದಿಲ್ಲ, ಕಾರಣ,

ಇವೊತ್ತು ನಮ್ಮ ಭಾಗದಲ್ಲಿ 600-700 ಅಡಿಯಷ್ಟು ಹೋದರೂ ನೀರು ಸಿಗುತ್ತಿಲ್ಲ. ಆದರ ಜೊತೆಗೆ ಫಾಡರ್, availability of fodder is a big problem; ಇದಕ್ಕೆ ಬಹಳ ಪ್ರೋತ್ಸಾಹ ನೀಡಬೇಕು, ಕಾರಣ ಈವೊತ್ತು ಡೈರಿ ಉದ್ದಿಮೆಯಿಂದ ಬಹಳ ಲಾಭದಾಯಕವಾಗಿದೆ. ಆದ್ದರಿಂದ ಫಾಡರ್ ಅನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಸರ್ಕಾರ ಕೂಡಲೇ ತೆಗೆದುಕೊಳ್ಳಬೇಕು. ಯೂನಿವರ್ಸಿಟಿಯನ್ನು ಬಳಸಿಕೊಳ್ಳುವುದು ಮತ್ತು ಅದರ ಹಿಂದೆ ಮೂಲ ಉದ್ದೇಶಗಳು ಇವೊತ್ತು ಪಶುಸಂಗೋಪನಾ ಹೇಗೂ ಜಾನುವಾರುಗಳನ್ನು ಉಳಿಸಿ ರಕ್ಷಿಸಿ ಅವುಗಳನ್ನು ಕಾಪಾಡುವಂತಹ ಕಾರ್ಯವನ್ನು ಮಾಡಬೇಕಾಗಿದೆ. ಆ ರೀತಿಯ ಕಾರ್ಯಕ್ರಮಗಳನ್ನು ಕೂಡಲೇ ಸರ್ಕಾರ ರೂಪಿಸಬೇಕೆಂದು ತಿಳಿಸಿ ಇವೊತ್ತು ಏನು ಕೆ.ಪಿ.ಟಿ.ಸಿ.ಎಲ್. ಸಂಸ್ಥೆ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಅನ್ನು ರಚನೆ ಮಾಡಿ, ಹಿಂದೆ ಇದ್ದಂತಹ ಕೆ.ಇ.ಬಿ.ಯನ್ನು ಬದಲಾವಣೆ ಮಾಡಿ. ಖುವತ್ತು ಈ ಕಾರ್ಪೊರೇಷನ್ಸ್‌ಗಳ ಮೂಲಕ distribution system, power distribution ಮಾಡುವಂತಹ ಕಾರ್ಯ ಈ ರಾಜ್ಯದಲ್ಲಿ ನಡೆಯುತ್ತಿದೆ. ಇವತ್ತು ಪವರ್ ಉತ್ಪಾದನೆಯಲ್ಲಿ ಮುಖ್ಯವಾಗಿ ಕುಂಠಿತವಾಗಿದೆ. ಮಳೆ ಆಧಾರಿತ hydro project ನಮ್ಮದು ಏನಿದೆ ಮೂಲವಾಗಿ ಆ hydro project ನಲ್ಲಿ ಪ್ರೊಡಕ್ಷನ್ ಇಲ್ಲ. Thermal, Raichur ನಿಂದ ಬರುವಂತಹದು. National grid ನಿಂದ ಬರುವಂತಹ ಭಾಗ- ಇದನ್ನೆಲ್ಲಾ ಸೇರಿಸಿ ಇವತ್ತು ನೂರಕ್ಕೆ ಐವತ್ತರಷ್ಟು ನಾವು ವಿದ್ಯುತ್ತನ್ನು ಕೊಡುವಂತಹದು. ಇವತ್ತು HP consumersಗೆ ಕೊಟ್ಟುಕೊಂಡುಹೋಗುವಂತಹದು ಯಾವಾಗಲೂ ಅವರಿಂದ ನಮಗೆ revenue ಬರುತ್ತದೆ. ಆದರೆ ಅದರಿಂದ ಕೆಳಗೆ ಇರುವ LT consumers ಮತ್ತು ಕೆಳಗೆ ಇರುವ ವಿಶೇಷವಾಗಿ ರೈತರಿಗೆ ಇವತ್ತು ನಿರಂತರ ಕರೆಂಟ್ ಕೊಡುತ್ತೇವೆ ಎಂದು ಘೋಷಣೆ ಮಾಡಿಕೊಂಡು ಬಂದದ್ದು, ಆದರೆ ಕೊಡಲಿಕ್ಕೆ ಆಗಲಿಲ್ಲ. ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಗಳು ಸುಮಾರು 12 ಗಂಟೆಯಾದರೂ ವಿದ್ಯುತ್ ನಾವು ಕೊಡುತ್ತೇವೆ ಎಂದರು. ಇವತ್ತು ನಾವೆಲ್ಲಾ ಇಲ್ಲಿದ್ದೇವೆ ಸದಸ್ಯರು, ಯೋಚನೆ ಮಾಡೋಣ, ಇವತ್ತು ನಮಗೆ ಮೂರರಿಂದ ನಾಲ್ಕು ಗಂಟೆ ವಿದ್ಯುತ್ ಇಲ್ಲ. ಮಾನ್ಯ ಮುನಿಯಪ್ಪನವರು ಹೇಳಬೇಕು. ಅಟ್‌ಲೀಸ್ಟ್ 6 ಗಂಟೆ ನಮಗೆ ನಿರಂತರವಾಗಿ ಕೊಡಿ ಎಂದು ನಮಗಿರುವಂತಹ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ 6 ಗಂಟೇನೂ ಇಲ್ಲ, ನಮ್ಮ ಕೋಲಾರದ ಅನೇಕ ಜಿಲ್ಲೆಗಳಲ್ಲಿ 18 ಗಂಟೆ ಇದೆ ತಾವು ಹೇಳಿಕೆ ಕೊಟ್ಟಿದ್ದೀರಿ ಎಂದು ಮುನಿಯಪ್ಪನವರೇ ಇಲ್ಲಿ ಹೇಳಿದರು.

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :- ಇಲ್ಲ ಇಲ್ಲ ನಾನು ಯಾವತ್ತೂ 18 ಗಂಟೆ ಎಂದು ಹೇಳಿಲ್ಲ. ಇಂತಹ ಕಷ್ಟ ಕಾಲದಲ್ಲೂ ಸಹ ಬಹಳಷ್ಟು ಪ್ರಯತ್ನ ಪಟ್ಟು ನಮ್ಮಲ್ಲಿ hydro electric generations stations ನಲ್ಲಿ ಪವರ್ ಜನರೇಷನ್ ಬಹಳ ಕಡಿಮೆಯಾಗಿದ್ದರೂ ಕನಿಷ್ಟ 6 ರಿಂದ 8 ಗಂಟೆ ಕೊಡತಕ್ಕಂಥ ಪ್ರಯತ್ನ ಸರ್ಕಾರ ಮಾಡುತ್ತಾ ಇದೆ ಅಂತ ಹೇಳಿದ್ದೆವು. ಆ ಕೆಲಸ ಖಂಡಿತ ಸರ್ಕಾರ ಮಾಡುತ್ತಾ ಇದೆ. ಇವತ್ತು ರೈತರಿಗೆ ಗೊತ್ತಿದೆ. practical ಆಗಿ. ಅವರು ನಮ್ಮ ಬಗ್ಗೆ ಯಾವತ್ತೂ ಸರಿಯಾಗಿ ಏನು ಹೇಳಬೇಕೋ ಅದನ್ನು ಹೇಳುವುದಿಲ್ಲ ಬಿಡಿ. ಪಕ್ಕದಲ್ಲಿರುವವರು ಹೇಳಿದರು ಎಂದು ಹೇಳಿದಿರಲ್ಲಾ ಅದಕ್ಕೆ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನಾನು ಕೋಲಾರಕ್ಕೆ ಹೋಗಿದ್ದೆ. ರೈತರೆಲ್ಲಾ ಬಹಳ ಖುಷಿಯಾಗಿದ್ದಾರೆ, 18 ಗಂಟೆ ಕರೆಂಟ್ ಕೊಡುತ್ತಾ ಇದ್ದಾರೆ ಎಂದು ರೈತರು ಹೇಳಿದರು ಎಂದು ನಾನು ಹೇಳಿದೆ.

ಶ್ರೀ ಎ. ಮುನಿಯಪ್ಪ :- 18 ಗಂಟೆ ಯಾವ ಸರ್ಕಾರವೂ ಕೊಟ್ಟಿಲ್ಲ ನಿಮ್ಮ ಸರ್ಕಾರ ಇದ್ದಾಗಲೂ...

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ತಪ್ಪು ತಿಳಿದುಕೊಂಡು ಬಿಟ್ಟಿದ್ದಾರೆ. ನಾನು ಮುನಿಯಪ್ಪನವರು ಹೇಳಿದರು ಎಂದು ಹೇಳಲಿಲ್ಲ. ನಮ್ಮ ಪಕ್ಕದಲ್ಲಿ ಎಡಗಡೆ ಬಲಗಡೆ ಇರುವವರು ಅಂತಾನೂ ಹೇಳಲಿಲ್ಲ. ನಾನೇನು ಹೇಳಿದೆ ಅಂದರೆ ನಾನು ಕೋಲಾರಕ್ಕೆ ಹೋಗಿದ್ದೆ. ಹೀಗೆ ಏನೋ ನಮ್ಮ ಸ್ನೇಹಿತರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದೆ, ಯಾರದೋ ತಿಥಿಗೆ ಹೋಗಿದ್ದೆ ನಿಮಗೆ ಹೇಳಬೇಕು ಅಂದರೆ ಆಗ ನನಗೆಲ್ಲಾ ಭೇಟಿ ಮಾಡಿದರು. ಅವರು ಏನು ಹೇಳಿದರು ನನಗೆ ಅಂದರೆ ಸ್ವಾಮಿ ನಾವು ಬಹಳ ಖುಷಿಯಾಗಿದ್ದೇವೆ, 18 ಗಂಟೆ ನಮಗೆ current ಬರುತ್ತಾ ಇದೆ ಎಂದು, ಬಹಳ ಸಂತೋಷಾನಪ್ಪ, ನಾನೂ ಮುನಿಯಪ್ಪನವರಿಗೆ ಹೇಳುತ್ತೇನೆ. ಅಸೆಂಬ್ಲಿಯಲ್ಲಿ ಯಾವಾಗಾದರೂ ಅವರು ಸಿಕ್ಕಿದರೆ, ನಮಗೂ ಆ ಕೃಪೆ ತೋರಿಸಿ ಎಂದು ಕೇಳಿಕೊಳ್ಳುತ್ತೇನೆ ಎಂದು ಹೇಳಿದೆ. ನಾನು interfere ಆಗುವುದಕ್ಕೆ ಬಯಸುತ್ತಾ ಇರಲಿಲ್ಲ. ನಮ್ಮ ಪಕ್ಷದ ಒಬ್ಬ ಹಿರಿಯ ನಾಯಕರು ಮಾಜಿ ಮಂತ್ರಿಗಳು ಮಾತನಾಡುವಾಗ ಮಧ್ಯೆ ಮಾತನಾಡುತ್ತಿರಲಿಲ್ಲ. ನನಗೆ ಒಂದು ಅರ್ಥವಾಗದೇ ಇರುವಂತಹದ್ದು I condemn the government attitude in this regard. Budget discussion ಶುರುವಾಗಿ ಈಗಾಗಲೇ ನಾಲ್ಕು ದಿನ ಆಗಿದೆ. Performance budget copy ಇನ್ನೂ ನಮಗೆ ಬಂದಿಲ್ಲ. On what basis we have to discuss? I want to know. ನೀವು proposals ಅನ್ನು ತಂದು 2003ಗೆ ಎಂದು ಹೇಳಿ ತುತ್ತೂರಿ ಊದಿಬಿಟ್ಟು ಅದು ಮಾಡುತ್ತೇನೆ ಇದು ಮಾಡುತ್ತೇನೆ ಎಂದು ದೊಡ್ಡ ದೊಡ್ಡವರ ಹೆಸರನ್ನೆಲ್ಲ ಎತ್ತಿಕೊಂಡು ಅಂಬೇಡ್ಕರರಿಂದ ದೇವರಾಜ ಅರಸುವರೆಗೆ ಶಿವರಾಮ ಕಾರಂತರವರೆಗೂ ಹೆಸರುಗಳನ್ನು ಎತ್ತಿಕೊಂಡಿರಿ, ಆದರೆ where is the performance budget? ನನಗೆ ಗೊತ್ತಿದೆ ಮಾನ್ಯ ಉಪಾಧ್ಯಕ್ಷರೇ ನಾನು ಶ್ರೀಮಾನ್ ಬಿ ಜಿ ಬಣಕಾರರನ್ನು ಯಾವತ್ತಿಗೂ ಸಹಿತ ನೆನೆಸಿಕೊಳ್ಳುತ್ತೇನೆ. ಅವರ ರಾಜಕೀಯ ವಿರೋಧಿ ಬನ್ನಿಕೋಡ್‌ರಿಗೆ ಸಿಟ್ಟು ಬರಬಹುದು. ಆದರೆ ಮಾನ್ಯ ಬಣಕಾರ್ ಅವರು ಇಲ್ಲಿ ಕುಳಿತಾಗ performance budget ಇಲ್ಲದೆ ಯಾವತ್ತೂ ಸಹಿತ ರಾಮಕೃಷ್ಣ ಹೆಗಡೆಯಂತಹ ನಾಯಕರಿಗೆ ಅವರು ಮುಖದ ಮೇಲೆ ಹೇಳಿದರು: Without performance budget I will not allow for any discussion ಎಂದು Why are you allowing? ಯಾವ ಬೇಸಿಸ್ ಮೇಲೆ ನಾವು ಚರ್ಚೆ ಮಾಡಬೇಕು ಹೇಳಿ? ಬೊಗಳೆ ಭಾಷಣ ಮಾಡಿಕೊಳ್ಳಬೇಕು ಅಷ್ಟೇ. ಹೋಗಲಿ we are senior members, why are you insulting us? ನಮಗ್ಯಾಕೆ ಅವಮಾನ ಮಾಡುತ್ತಾ ಇದ್ದೀರಿ? ನಿಮ್ಮ finance department ಸತ್ತುಹೋಗಿದೆಯಾ? Budget ಬಗ್ಗೆ discussion ಆಗಿ 8 ದಿನ ಆಯಿತು. ನಾನು ಹಾಗೇ observe ಮಾಡುತ್ತಾ ಇದ್ದೇನೆ, ಯಾವ್ಯಾವ department Secretaries ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ, ಯಾವ್ಯಾವ Deputy Secretary ಗಳು ಕುಳಿತುಕೊಳ್ಳುತ್ತಾರೆ ಯಾರ್ಯಾರು Under

Secretaryಗಳು ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ ಎಂದು VAT ಪಾಸ್ ಮಾಡಿಸಿಕೊಳ್ಳಬೇಕಾದರೆ ದಿನಾ Commercial tax dept. ಒಂದು ಟೀಮೇ ಬಂದು ಇಲ್ಲಿ ಕುಳಿತುಕೊಂಡು ಬಿಡುತ್ತಿದ್ದರು. Why should we discuss here? ಉಪಾಧ್ಯಕ್ಷರೇ? You have to come to our protection. ಇದಕ್ಕೆ ನಾವು actually ಧರಣ ಮಾಡಬೇಕು. No, it is not the question of me, ನಾನು ಏನು ಮಾತನಾಡಿದರೂ ಪಾಪ ಪತ್ರಿಕೆಯವರು ಅಭಿಮಾನದಿಂದ ಪ್ರದರ್ಶನ ಮಾಡುತ್ತಾರೆ ಬರೆಯುತ್ತಾರೆ ನನಗೆ ಪ್ರಚಾರ ಕೊಡುತ್ತಾರೆ. ಅದು ಬೇರೆ ವಿಚಾರ. ಈ ಸದನದ ಹೊರಗಡೆ ಮಾತನಾಡಿದರೂ ಕೊಡುತ್ತಾರೆ. ಆದರೆ ನಾನು ಕೇಳತಕ್ಕಂಥಾದ್ದು, ಇನ್ನೊಂದು ಉಪಾಧ್ಯಕ್ಷರೇ, ನಾನು ದಯವಿಟ್ಟು ಈ subject committee system ತೆಗೆದುಕೊಂಡು ಬರಬೇಡಿ ಮಂತ್ರಿಗಳಿಗೆ ಜವಾಬ್ದಾರಿ ಇರುತ್ತದೆ, ಯಾರು ಕೆಲಸ ಮಾಡುತ್ತಾರೋ ಸಚಿವರು ಅವರು ಎದೆ ತಟ್ಟಿಕೊಂಡು ಹೇಳಬಹುದು: ನಾನು ಇಂತಹ ಕೆಲಸ ಮಾಡಿದ್ದೇನೆ ನಾನು ಇಂಗ್ಲೆಂಡಿಗೆ ಹೋಗಿದ್ದೆ, ನಾನು ಅಮೆರಿಕಾಕ್ಕೆ ಹೋಗಿದೆ ನಾನು volvo ತೆಗೆದುಕೊಂಡು ಬಂದೆ, ನಾನು ಅದನ್ನು ಮಾಡಿದೆ ಇದನ್ನು ಮಾಡಿದೆ ಎಂದು ಹೇಳಿಕೊಳ್ಳುವುದು ನಿಮಗೂ ಸಹಿತ ಇರುತ್ತದೆ, ಅದನ್ನು ಹಾಳು ಮಾಡಿದಿರಿ? ನಾನು ಬೇಡ ಎಂದು ಚಂದ್ರೇಗೌಡರಿಗೆ ನೂರು ಸಲ ಹೇಳಿದೆ. ಆ ಸಬ್ಜೆಕ್ಟ್ ಕಮಿಟಿ ಸಿಸ್ಟಂ ತಂದರು ಆ subject committee ಯ ಯಾವುದಾದರೂ ಒಂದು ವರದಿಯನ್ನು implement ಮಾಡಿದ್ದಾರಾ? ಮಾಡಲು Implement ಆಗಿದೆಯಾ? ಅಲ್ಲಿ ಬೇರೆ ಎರಡು ತಿಂಗಳು ನಾವು TA DA ಗಳನ್ನು ತೆಗೆದುಕೊಂಡು ಮೂರು ತಿಂಗಳು ಕುಳಿತುಕೊಳ್ಳಬೇಕು. ಅದರಲ್ಲೂ ಮಾಡುವುದಕ್ಕೆ ನಮಗೆ ಕೆಲಸವಿಲ್ಲ. ಅದು ಒಂದು ಕಡೆ ಹಾಳಾಗಿ ಹೋಯಿತಾ ಹೋಗಲಿ ಮಾನ್ಯ ಸದಸ್ಯರುಗಳಿಗೆ ಅಷ್ಟೊಂದು ಗೌರವ ಇಲ್ಲವೇ ಉಪಾಧ್ಯಕ್ಷರೇ, ನಾವು ನಾಲ್ಕು ಸಾರಿ ಈ ಸದನಕ್ಕೆ ಸದಸ್ಯರಾಗಿ ಗೆದ್ದುಬಂದಿದ್ದೇವೆ, ಹಾಗಾದರೆ ಇವರೆಲ್ಲಾ ಆಕಾಶದಿಂದ ಹುಟ್ಟಿ ಬಂದಿದ್ದಾರಾ? ಉಪಾಧ್ಯಕ್ಷರೇ ತಮಗೆ ಗೊತ್ತಿದೆ. Legislature is important, judiciary is important, Buearacracy is important. ನಾವು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದನ್ನು ನ್ಯಾಯಾಂಗದ ಮೇಲೆ ಚರ್ಚೆ ಮಾಡುವುದನ್ನು Chief Justice ಪ್ರತಿ ವರ್ಷ ತರಿಸಿಕೊಳ್ಳುತ್ತಾರೆ, ತರಿಸಿಕೊಂಡು ಏನೇನು ಮಾತನಾಡಿದ್ದಾರೆ, ತಾವೇನು ತಿದ್ದಿಕೊಳ್ಳಬೇಕು ಎಂದು ಅವರು ಯೋಚನೆ ಮಾಡುತ್ತಾರೆ. Whether this govt. has lost control over the officers. ದಯವಿಟ್ಟು ತಾವು ಹೇಳಿ, senior ministers ತಾವೆಲ್ಲಾ It comes under DPAR ವಿಧಾನಪರಿಷತ್ತಿನಲ್ಲಿ ಮಾಡಿಬಿಟ್ಟಿದ್ದಾರೆ. ಅಲ್ಲಿ ಸಭಾಪತಿಗಳು ಅಲೌ ಮಾಡಿದ್ದಾರೆ on these officers. They are meant for the work. ಈಗ ಯಾವುದೇ ಇಲಾಖೆ ಅಧಿಕಾರಿಗಳು ಇರಬಹುದೂ ನನಗೇನು? I am not worried ನನಗೆ ಗೊತ್ತಿದೆ ಈ ಅಧಿಕಾರಿಗಳು ಸೂರ್ಯಕಾಂತಿ ಹೂವು ಇದ್ದಹಾಗೆ. ಪೂರ್ವ ಪಶ್ಚಿಮ ಯಾರ ಕೈಯಲ್ಲಿ ಅಧಿಕಾರ ಇರುತ್ತದೆ ಅವರ ಸುತ್ತಮುತ್ತ ಇರುತ್ತಾರೆ, ಅವರಿಗೆ ಹೊಗಳುತ್ತಾ ಇರುತ್ತಾರೆ, ಯಾರು ಬಂದರೂ ಅದೇ ಮಾಡುವುದು ಇವರು ನೀವೇನಾದರೂ ಮಂತ್ರಿಗಳಾಗಿರುವವರು ನಮ್ಮನ್ನು ಬಹಳ ಹೊಗಳುತ್ತಾರೆ ಎಂದು ಹೇಳಿದರೆ ತಪ್ಪುತಿಳಿದುಕೊಂಡಿದ್ದೀರಿ ನಿಮ್ಮ ಅಧಿಕಾರ ಹೋದ ಮಾರನೇ ದಿನ ನೀವು ಮುಂದುಗಡೆ ಬಂದರೆ ಮುಖ ತೋರಿಸವಲ್ಲರು.

ಹಲೋ ಅಂದರೆ ಪಕ್ಕಕ್ಕೆ ಹೋಗಿಬಿಡುತ್ತಾರೆ. ಅದನ್ನು ಚೆನ್ನಾಗಿ ತಿಳಿದುಕೊಳ್ಳಿ ನೀವು ನಾನು 8 ಸಾರಿ ಮಂತ್ರಿಯಾಗಿದ್ದೇನೆ. ಆದಕ್ಕೇ ನಾನು ಮತ್ತೆ ಮಂತ್ರಿ ಆಗಲೇಬಾರದು ಎಂದು ತೀರ್ಮಾನ ಮಾಡಿದ್ದೇನೆ. ಮಾನ್ಯ ಉಪಾಧ್ಯಕ್ಷರೇ ತಾವು ದಯವಿಟ್ಟು ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಕೊಡಿ. Or it should go into record about the attitude of the Finance dept. ಕರ್ನಾಟಕದ 55 ವರ್ಷಗಳ ಇತಿಹಾಸದಲ್ಲಿ ಯಾವ Chief Minister ಸಹ ಬಜೆಟನ್ನು vote on account ಕೇಳದೆ full budget ಗೆ approval ಕೇಳುವುದಕ್ಕೆ ಬಂದಿರಲಿಲ್ಲ. I had to correct it. It is not my business. It is the business of the finance Secretary. Has he read the budget? ಮಂತ್ರಿಗಳು ಓದುವುದಕ್ಕೆ ಆಗುವುದಿಲ್ಲ ಬಜೆಟನ್ನು ಅದನ್ನು ಕದ್ದುಮುಚ್ಚಿ ತಂದಿರುತ್ತಾರೆ Chief Minister ಸುಮ್ಮನೆ ಐದು ನಿಮಿಷ ಮುಂಚೆ cabinet ನಲ್ಲಿ ಇಂತಿಂತಹದ್ದನ್ನು ಮಾಡಿದ್ದೇನೆ ಎಂದು ಮಂತ್ರಿಗಳಿಗೆ ಹೇಳುತ್ತಾರೆ, ರೋಷನ್ ಬೇಗ್ ತಮಗೂ ಗೊತ್ತಿದೆ. I do not know what has happended to senior Minister ಇನ್ನೂ ಒಂದೂವರೆ ವರ್ಷ ಇದೆ, ಆಗಲೇ ಈ ಸರ್ಕಾರ ಹೋಗಿಬಿಡುತ್ತದೆ ಎಂದು ನಿಮ್ಮ ಮೇಲೆ ಅವರಿಗೆ faith ಹೊರಟುಹೋಗಿದೆಯಾ? I do not understand. You please give direction. ಮಾನ್ಯ ಉಪಾಧ್ಯಕ್ಷರೇ, ತಕ್ಷಣ performance budget ತರಿಸಿ You please ask the Finance Department officers to be here. ಮಾತುಗಳನ್ನು ಮಾನ್ಯ ಬಚ್ಚೇಗೌಡರು ಕಾಂಟ್ರಾಕ್ಟ್ ಕ್ಯಾರೇಜಸ್ ಬಗ್ಗೆ ಮಾತನಾಡಿದರು ಆ್ಯಕ್ಟ್ ರಿಪೀಲ್ ಮಾಡತಕ್ಕ ಪಿತೂರಿ ಬಗ್ಗೆ ಹೇಳಿದರು. ಆಗ ಯಾರಾದರೂ ಇಲ್ಲಿದ್ದರಾ? ಆ ಪಿತೂರಿ ಮಾಡಿದ ಅಧಿಕಾರಿಗಳು ಇಲ್ಲಿದ್ದರಾ? Where have they gone? Are they not paid for that? ನನಗೆ ಗೊತ್ತಿದೆ, how they have misled this Government ಎನ್ನುವುದನ್ನು ನಾನು ನಾಳೆ ಮಾತನಾಡಬೇಕೆಂದು ಇದ್ದೇನೆ. ತಾವು ಸಮಯ ಕೊಟ್ಟರೆ ನಾನು ಮಾತನಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ ನಮಗೇನೂ ಮಾತನಾಡುವುದಕ್ಕೆ ಬೇರೆ ಕಸುಬಿಲ್ಲವೇ? Are we to strain ourselves? ತಾವು ದಯಮಾಡಿ ನಿರ್ದೇಶನ ಕೊಡಬೇಕು. ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಬೇರೆ ದಾರಿ ಇಲ್ಲ. I am really very sorry I am disgusted with the whole thing.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ ಈ ದಿವಸ ಯಾವ ಸೆಕ್ರೆಟರಿಗಳು ಇರಬೇಕಾಗಿತ್ತು. ಯಾರು ಇಲ್ಲ ಎಂಬ ಬಗ್ಗೆ ನಮಗೆ ಮಾಹಿತಿ ತರಿಸಿ ಹೇಳಬೇಕು. ಇಲ್ಲಿ ಇವತ್ತು ಯಾವ ಯಾವ ಸೆಕ್ರೆಟರಿಗಳು ಇರಬೇಕೆಂದು ಸರ್ಕಾರದಿಂದ ಆದೇಶವಾಗಿತ್ತು, ಯಾರು ಹಾಜರಿ ಇದ್ದಾರೆ, ಯಾರು ಗೈರುಹಾಜರಿದ್ದಾರೆ ಎಂಬ ಬಗ್ಗೆ ಕೂಡ ತಾವು ದಯವಿಟ್ಟು ತಕ್ಷಣ ಮಾಹಿತಿ ತರಿಸಿಕೊಂಡು ಸದನಕ್ಕೆ ತಾವು ಹೇಳಬೇಕಾಗುತ್ತದೆ. ಮತ್ತೆ ನಾವೇನು ಮಾಡಬೇಕೆಂದು ವಿಚಾರ ಮಾಡಿ ಶುರು ಮಾಡುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಆಯಾಯ ಖಾತೆಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಕರೆಸಬೇಕಾಗುತ್ತದೆ. ಅಧ್ಯಕ್ಷರಲ್ಲ ಅವರಿಗೆ ಹೇಳುವಂಥದ್ದು.

ಶ್ರೀ ಎಸ್.ಎಸ್. ಪಾಟೀಲ್ :- ಆ ಬಗ್ಗೆ ಮಾನ್ಯ ಅಧ್ಯಕ್ಷರು ಆದೇಶ ಮಾಡಬೇಕಾಗುತ್ತದೆ.. ನಾನು ಮಂತ್ರಿಗಳಿಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಉಪಾಧ್ಯಕ್ಷರೇ, ಯಾವ ಮಂತ್ರಿಗಳು ಇಲ್ಲದಿದ್ದರೂ ಕೂಡ ಇವತ್ತು ಆರ್ಥಿಕ ಇಲಾಖೆಗೆ ಸಂಬಂಧಪಟ್ಟ ಕಾರ್ಯದರ್ಶಿಗಳು ಇರಬೇಕು. ಕನಿಷ್ಟ ಪಕ್ಷ ಈ ಮನೆಗೆ ಸ್ವಲ್ಪವಾದರೂ ಗೌರವ ತರುವ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ತಾವು ನೋಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ನಾನು ನಿಜವಾಗಿ ಹೇಳುತ್ತೇನೆ, ಈ ಸರ್ಕಾರಕ್ಕೆ ಮಂತ್ರಿಗಳು ಇರಬಹುದು, ಸೆಕ್ರೆಟರಿಗಳು ಇರಬಹುದು, ಈ ಸದನದ ಬಗ್ಗೆ ಅವರಿಗೆ ಗೌರವ ಇಲ್ಲ. ಮಂತ್ರಿಗಳಿಗೂ ಸಹಿತ ಇಲ್ಲಿ ಗೌರವ ಇಲ್ಲ. ಈ ಸದನದ ಬಗ್ಗೆ ಮಂತ್ರಿಗಳು ಗೌರವ ಇಟ್ಟುಕೊಂಡಿಲ್ಲ. ಅದೇ ರೀತಿ ಅಧಿಕಾರಿಗಳೂ ಕೂಡ ಗೌರವ ಇಟ್ಟುಕೊಂಡಿಲ್ಲ. ಮೇಲ್ಮನೆಯಾದರೆ ಎಲ್ಲರೂ ಹೋಗುತ್ತಾರೆ. ಅಲ್ಲಿ ಪ್ರಿವಿಲೇಜ್ ಇನ್ನೊಂದು ಎಲ್ಲಾ ಶುರು ಮಾಡಿದ್ದಾರೆ, ಅಲ್ಲಿ ಎಲ್ಲರೂ ಹೋಗಿ ಕುಳಿತುಕೊಳ್ಳುತ್ತಾರೆ. ಇಲ್ಲಿ ಮಂತ್ರಿಗಳೂ ಇರುವುದಿಲ್ಲ. ಬೆಳಿಗ್ಗೆ ನಡೆದದ್ದು ತಮಗೂ ಗೊತ್ತಿದೆ. ಆಗ ತಾವು ಇರಲಿಲ್ಲ. ಇಲ್ಲಿ ಮಂತ್ರಿಗಳೂ ಇರುವುದಿಲ್ಲ. ಆಮೇಲೆ ಅಧಿಕಾರಿಗಳೂ ಇರುವುದಿಲ್ಲ ಅಂದರೆ ಈ ಸದನದ ಬಗ್ಗೆ ಅಷ್ಟು ಗೌರವ ಇದೆ ಈ ಸರ್ಕಾರಕ್ಕೆ. ಇದನ್ನು ತಾವು ತಿಳಿದುಕೊಳ್ಳಬೇಕು. ದಯವಿಟ್ಟು ತಾವು ಇದನ್ನು ಆದೇಶ ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಪ್ಪ :- ಮಾನ್ಯ ಉಪಾಧ್ಯಕ್ಷರೇ, ಇವತ್ತು ಕನಿಷ್ಟ ಪಕ್ಷ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯ ಅಧಿಕಾರಿಗಳಾದರೂ ಇರಬೇಕಲ್ಲವೇ? ಎಷ್ಟರಮಟ್ಟಿಗೆ ಅವರು ಸರ್ಕಾರಕ್ಕೆ ಗೌರವ ಕೊಡುತ್ತಿದ್ದಾರೆ ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಮಂತ್ರಿಗಳು ಆ ಸದನದಲ್ಲಿ ಎಲ್ಲಾ ಒಪ್ಪಿಗೆ ಕೊಟ್ಟು ಇಲ್ಲಿ ಬರುತ್ತಾರೆ. ಇಲ್ಲಿ ಮೆಜಾರಿಟಿ ಇದೆ ಎಂದು ಆ ರೀತಿ ಮಾಡುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವ ಹೊತ್ತಿಗೆ ಒಬ್ಬರು ಮಂತ್ರಿಗಳೂ ಇರಲಿಲ್ಲ. ಈಗ ಬಂದು ಕುಳಿತಿದ್ದಾರೆ. ಬೆಳಿಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವಾಗ ಯಾರೂ ಇರಲಿಲ್ಲ.

ಉಪಾಧ್ಯಕ್ಷರು :- ಈಗ ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಒಂದು ಮಹತ್ವದ ವಿಚಾರವನ್ನು ಎತ್ತಿದರು. ಈ ಸದನದಲ್ಲಿ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಮಂಡಿಸುವುದು ಬಹಳ ಅವಶ್ಯಕತೆ ಇದೆ. ಅದನ್ನು ಈವರೆಗೂ ಈ ಸಭೆಯ ಗಮನಕ್ಕೆ ತರಲಿಲ್ಲ ಎನ್ನುವಂಥ ವಿಚಾರ ಬಹಳ ಗಂಭೀರವಾದಂಥ ವಿಚಾರ. ಅದನ್ನು ನಾಳೆ ಮಂಡಿಸುವುದಕ್ಕೆ ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಇವತ್ತು ರಾತ್ರಿ ನೀವು ಕೊಟ್ಟರೆ, ನಾವು ಮಾತನಾಡುವಾಗ ನಮಗೆ ವಿಚಾರಗಳು ಗೊತ್ತಾಗಬೇಕಲ್ಲ I am not telling ಹೋದ ವರ್ಷದ ಬಜೆಟ್‌ನಲ್ಲಿ ಹೇಳಿರತಕ್ಕಂಥದ್ದನ್ನು ಇಂಪ್ಲಿಮೆಂಟ್ ಮಾಡಬೇಕೆಂತಲೂ ನಾನು ಹೇಳುವುದಿಲ್ಲ. But, look at the sincerity of the Finance Department as such. ಮುಖ್ಯಮಂತ್ರಿಗಳು ಅವರ ಮಂತ್ರಿಗಳಿಗೆ ಹೇಳಬೇಕು. ವಿದೇಶಕ್ಕೆ ಮಂತ್ರಿಗಳು ಹೋದಾಗ

ಆ ಪ್ರೋಟೋಕಾಲ್ ಡಿಪಾರ್ಟ್‌ಮೆಂಟ್‌ನವರು ಹೇಗೆ ಬಿಹೇವ್ ಮಾಡಬೇಕೆನ್ನುವುದರಿಂದ ಹಿಡಿದು ಪ್ರತಿಯೊಂದನ್ನೂ ಹೇಳಬೇಕಾಗುತ್ತದೆ. ಪರ್‌ಫಾರ್ಮೆನ್ಸ್ ಬಜೆಟನ್ನು ಇಡದೆ ನೀವು ನಾವು ಮಾತನಾಡುವುದೇನು? ಮೂರು ದಿನಗಳ ಕಾಲ ನಾವು ಚರ್ಚೆ ಮಾಡಿದ್ದೇವೆ. ತಾವೇನಾದರೂ ಸಮಯ ಕೊಟ್ಟರೆ ನಾನು ಇವತ್ತು ಮಾತನಾಡೋಣ ಎಂದು ನೋಡಿದರೆ ಪರ್‌ಫಾರ್ಮೆನ್ಸ್ ಬಜೆಟನ್ನು ಇನ್ನೂ ಲೇ ಮಾಡಿಲ್ಲ. ಇದು ಒಂದು ಆಯಿತು ಸ್ವಾಮಿ. ಈಗ ತಮ್ಮ ಕಛೇರಿಗೆ ಬರುತ್ತಿದ್ದೇನೆ. ಮಾನ್ಯ ಮಂತ್ರಿಗಳು ವೋಟ್ ಆನ್ ಅಕೌಂಟ್‌ಗೆ ತಮಗೆ ಪತ್ರವನ್ನು ಬರೆದಿದ್ದಾರಂತೆ. ಅದನ್ನು ಇಲ್ಲಿ ಮಂಡಿಸಬೇಕು. ಬಾಯಿ ರೂಪದಲ್ಲಿ ಮುಂಚೆ ಹೇಳಿದರು, ಇಲ್ಲಿ ನೀವು ಒಪ್ಪಿಗೆ ಕೊಡುವ ಹಾಗಿದ್ದರೆ ಭಾರಿ ಸಂತೋಷ ಎಂದು ಬಿಟ್ಟರು. ಆಮೇಲೆ ನಾನು ಹೇಳಿದೆ, ಇಲ್ಲ ಸಬ್ಜೆಕ್ಟ್ ಕಮಿಟಿಗಳಿವೆ ಎಂದು ಹೇಳಿ. ಹಾಗಾದರೆ ಎಂದು ಫೈನಾನ್ಸ್ ಸೆಕ್ರೆಟರಿ ಕಡೆ ನೋಡಿದರು. No, no. It is an vote on account, ಎಂದು ಹೇಳಿದರು. ಆಲ್‌ರೈಟ್. ಅದನ್ನೂ ನಾವು ಒಪ್ಪಿಕೊಂಡಿದ್ದೇವೆ. But, let it be. ಅದನ್ನು ದಯವಿಟ್ಟು ಮಂಡಿಸಿ. ಈ ಸದನ ಕ್ರಮ ಬದ್ಧವಾಗಿ, ಕಾನೂನುಬದ್ಧವಾಗಿಯಾದರೂ ನಡೆಯಬೇಕಲ್ಲವೇ? ಇದು ಎರಡನೆಯದು. ಮೂರನೆಯದು, ತಾವೇ ಆಡಳಿತ ಪಕ್ಷದವರು ಇದ್ದೀರಿ. ನಮ್ಮದು ಬಿಡಿ. ಜನ ತೀರ್ಮಾನ ಮಾಡಲಿ ತಾವು ಆಡಳಿತ ಪಕ್ಷದವರು ಮಾತನಾಡುವಾಗ ನಿಮ್ಮ ಅನುಭವಗಳನ್ನು ಹೇಳುತ್ತೀರಿ. ಹಾಗಾದರೆ ನೀವೆಲ್ಲಾ ದಡ್ಡರಾ? ನೀವೆಲ್ಲಾ ಅನುಭವಸ್ಥರಲ್ಲವೇ? ನೀವೆಲ್ಲಾ ಮಂತ್ರಿಗಳಾಗಿದ್ದವರಲ್ಲವೇ? ಆಗುವವರಲ್ಲವೇ? ನೀವೆಲ್ಲಾ ಬುದ್ಧಿವಂತರಿದ್ದೀರಿ. ಸಾಕಷ್ಟು ಅನುಭವಸ್ಥರು ಇದ್ದೀರಿ ವೈಯಕ್ತಿಕವಾದ ಜೀವನದಲ್ಲಿ ಮಾನ್ಯ ಡಿ.ಆರ್. ಪಾಟೀಲರು, ಮಾನ್ಯ ವೈ.ಕೆ. ರಾಮಯ್ಯನವರು ನೀವೆಲ್ಲಾ ಎಷ್ಟೊಂದು ಅನುಭವವನ್ನು ಪಡೆದಿರುವವರು. ನೀವು ಮಾತನಾಡುವಾಗಲಾದರೂ ಇವರು ಕೇಳುವುದಕ್ಕೆ ಬರಬಾರದೇ? ಇವರಿಗೇನು ಕಷ್ಟ? ನಾನು ಬಾಕಿ ಶಬ್ದಗಳನ್ನು ಉಪಯೋಗಿಸುವುದಿಲ್ಲ ಸ್ವಾಮಿ. ನಾನು ಏನು ಶಬ್ದಗಳನ್ನು ಉಪಯೋಗಿಸಿ ಟೀಕೆ ಮಾಡಿದರೂ ನನ್ನ ಸ್ಥಾನ ಕಡಿಮೆಯಾಗಿ ಹೋಗಿಬಿಡುತ್ತದೆ. I will be going down myself. So, I am not criticising them. I will praise them.

ಉಪಾಧ್ಯಕ್ಷರು :- ಪರ್‌ಫಾರ್ಮೆನ್ಸ್ ಬಜೆಟನ್ನು ನಾಳೆ ಎಲ್ಲಾ ಮಾನ್ಯ ಸದಸ್ಯರಿಗೂ ಒದಗಿಸುವುದಕ್ಕೆ ನಾನು ಈ ಸಂದರ್ಭದಲ್ಲಿ ಸೂಚನೆಯನ್ನು ಕೊಡುತ್ತಿದ್ದೇನೆ. ಅದರ ಜೊತೆಗೆ ಹಣಕಾಸಿನ ಇಲಾಖೆಯ ಕಾರ್ಯದರ್ಶಿಯವರ ಮತ್ತು ಉಪಕಾರ್ಯದರ್ಶಿಯವರ ಒಂದು ರೋಲ್ ಇಲ್ಲಿ ಬಹಳ ಮುಖ್ಯವಾಗಿ ಇರುತ್ತದೆ. ಈ ಸಂದರ್ಭದಲ್ಲಿ ಅವರು ಇಲ್ಲದೇ ಇರುವುದು ನಿಜಕ್ಕೂ ವಿಷಾದವಾದ ಸಂಗತಿ. ಈ ಸಂದರ್ಭದಲ್ಲಿ ಸಂಬಂಧಿಸಿದಂಥ ಅಧಿಕಾರಿಗಳು ಇಲ್ಲದ್ದನ್ನು ನಾನು ಬಹಳ ಗುರುತರವಾದಂಥ ಒಂದು ವಿಚಾರವೆಂದು ಭಾವಿಸಿ, ಆ ಅಧಿಕಾರಿಗಳು ಯಾವುದೇ ಸಬೂಬನ್ನು ಹೇಳದೆ ನಾಳೆಯಿಂದ ಸ್ಟ್ರಿಕ್ಟ್ ಆಗಿ ಇಲ್ಲಿ ಇರಬೇಕು. ಮತ್ತು ಇವತ್ತು ಇಲ್ಲದೇ ಇರುವುದಕ್ಕೆ ವಿವರಣೆಯನ್ನೂ ಕೂಡ ಸರ್ಕಾರಕ್ಕೆ ಕೊಡಬೇಕು. ಇಷ್ಟು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನೀವೇನೆ ವೋಟ್ ಆನ್ ಅಕೌಂಟನ್ನು ಮಂಡಿಸಿಬಿಡಿ.

ಉಪಾಧ್ಯಕ್ಷರು :- ಅದನ್ನೂ ಕೂಡ ಮಾಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :- ಮಾನ್ಯ ಉಪಾಧ್ಯಕ್ಷರೇ, ನಾನು ಕೆಪಿಟಿಸಿಎಲ್ ಬಗ್ಗೆ ಮಾತನಾಡುತ್ತಿದ್ದೆ. ಏನು ರೈತರಿಗೆ 24 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ಹೋಯಿತು. ಅದಾದಮೇಲೆ 12 ಗಂಟೆ ಆಯಿತು. ನಾವು ಪೂರ್ತಿ ಪ್ರಕೃತಿಯನ್ನು ಅವಲಂಬಿಸಿದ್ದೇವೆ, ಮಳೆ ಇಲ್ಲ ಜಲಾಶಯಗಳಲ್ಲಿ ನೀರಿಲ್ಲ. ಇವೆಲ್ಲಾ ನಮಗೂ ಗೊತ್ತಿದೆ. ಪೂರ್ತಿ ನಮ್ಮ ಥರ್ಮಲ್ ವಿದ್ಯುಚ್ಛಕ್ತಿ ಬರುವುದರಲ್ಲಿ ನಾವು ಉಪಯೋಗಿಸಿಕೊಳ್ಳಬೇಕು. ಆ ದೃಷ್ಟಿಯಿಂದ 12 ಗಂಟೆಗಳ ಕಾಲ ವಿದ್ಯುತ್ ಕೊಡುವಾಗಲೂ ಅದನ್ನೆ ಹೇಳಿದ್ದು ಮಾನ್ಯ ಉಪಾಧ್ಯಕ್ಷರೇ, ಅದು ತಮಗೂ ಗೊತ್ತಿದೆ. ಆರು ಗಂಟೆಗಳ ಕಾಲವೂ ವಿದ್ಯುತ್ ಕೊಡುವಂಥ ಪರಿಸ್ಥಿತಿ ನಮ್ಮ ಕಡೆ ಇಲ್ಲ. ಇವತ್ತು 18 ಗಂಟೆ ಎಂದು ಸಿಂಗಲ್ ಫೇಸ್ ಎಂದು ಬೇರೆ ಬೇರೆ ರೀತಿಯಲ್ಲಿ ಹೇಳಿ, ಈಗ ಆರು ಗಂಟೆಗಳ ಕಾಲ ಕೊಡುತ್ತಿದ್ದ ಕರೆಂಟನ್ನು ನಾಲ್ಕು ಗಂಟೆ ಮಾಡಿದರು. ಇವತ್ತು ಇದು ಆಗುತ್ತಿರುವಂಥದ್ದು. ಇದರ ಜೊತೆಯಲ್ಲಿ ಇವತ್ತು ಮೀಟರನ್ನು ಹಾಕುವ ಬಗ್ಗೆ ಹೇಳಿದ್ದಾರೆ. ಎಲ್ಲದಕ್ಕೂ ನಾವು ಮೀಟರನ್ನು ಹಾಕುತ್ತೇವೆ, ಮೀಟರ್‌ನ ಮೂಲಕವು ನಾವು ವಿದ್ಯುಚ್ಛಕ್ತಿಯನ್ನು ಎಷ್ಟು ಬಳಸುತ್ತಾರೆ ಎಂದು ಗುರುತಿಸಬಹುದು. ಇವತ್ತಿಗೂ ವಿದ್ಯುಚ್ಛಕ್ತಿಯಲ್ಲಿ ತಮಗೆ ಗೊತ್ತಿರುವ ಹಾಗೆ ಎಷ್ಟು ಭಾಗ ಇವತ್ತು ರೈತರು ವಿದ್ಯುತ್‌ನ್ನು ಉಪತೋಗಿಸುತ್ತಾರೆಂಬುದು ಗೊತ್ತಿಲ್ಲ. ಆದರೆ ಇಲಾಖೆಯವರು ಹೇಳುವುದು 40 ಭಾಗ, 50 ಭಾಗ ಎಂದು ಹೇಳುತ್ತಾರೆ. ಇವತ್ತಿನವರೆಗೂ ನಮ್ಮಲ್ಲಿ ಆ ಚಿತ್ರ ಇಲ್ಲ. ಎಷ್ಟು ಭಾಗದ ವಿದ್ಯುತ್‌ನ್ನು ನಾವು ಉಪಯೋಗಿಸುತ್ತಿದ್ದೇವೆ. ಇವತ್ತು ಟ್ರಾನ್ಸ್‌ಮಿಷನ್ ಲಾಸಸ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮೊದಲೇ ಆರ್ಥಿಕ ಪತ್ರದಲ್ಲಿ ತಿಳಿಸಿದಂಥದ್ದು 38 ಭಾಗದಷ್ಟು ವಿದ್ಯುತ್ ಸೋರಿಕೆ ಇದೆ ಎಂದು ಹೇಳಿದ್ದಾರೆ. ಇವತ್ತು ಹೇಳಿರುವಂಥದ್ದು 37 ರಿಂದ 30 ಭಾಗಕ್ಕೆ ಬಂದಿದೆ ಎಂದು ಹೇಳಿ ಹೇಳಿದ್ದಾರೆ. ನಾನು ತಿಳಿದುಕೊಂಡೆ, 30 ಭಾಗವೆಂದರೂ ಸುಮಾರು ಮೂರು ಸಾವಿರದಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ ಇದರಲ್ಲಿ 2340 ಕೋಟಿ ರೂಪಾಯಿಗಳಷ್ಟು ಇವತ್ತು ಸಬ್ಸಿಡಿ ರೂಪದಲ್ಲಿ ಅವರಿಗೆ ಸಹಾಯಧನವನ್ನು ನಮ್ಮ ಸರ್ಕಾರ ಕೊಡುತ್ತದೆ ಎಂದು ಘೋಷಣೆಯನ್ನು ಮಾಡಿದ್ದಾರೆ. ಇದರ ಜೊತೆಯಲ್ಲಿ ಒಂದು ಪ್ಯಾರಾದಲ್ಲಿ ಹೇಳಿದ್ದಾರೆ. "ಮುಂದಿನ ಆರ್ಥಿಕ ವರ್ಷದಿಂದ ಸರ್ಕಾರವು ವಿದ್ಯುತ್ ವಲಯಕ್ಕೆ ಆಯವ್ಯಯದಲ್ಲಿ ಸಹಾಯಧನವನ್ನು ಒದಗಿಸುವಾಗ "ಒದಗಿಸುವವರು ಖರೀದಿದಾರರು" ಎಂದು ಹೇಳಿ ಇಲ್ಲೆ ಎರಡು ವರ್ಗವನ್ನು ಮಾಡಿದ್ದಾರೆ ಈ ಮಾದರಿಯನ್ನು ಅಳವಡಿಸಿಕೊಳ್ಳಬೇಕು. ಇದರಂತೆ ಸರ್ಕಾರವು ಕೃಷಿ ವಲಯಕ್ಕೆ ಮುಂದಿನ ವರ್ಷದಲ್ಲಿ ಒದಗಿಸುವ ವಿದ್ಯುತ್‌ನ ಪ್ರಮಾಣವನ್ನು ನಿಗದಿಪಡಿಸುತ್ತದೆ ಎಂದು ಅದರ ಬಗ್ಗೆ ನಿಗದಿಪಡಿಸುತ್ತದೆ ಎಂದು ಹೇಳಿ ಬಿಟ್ಟುಬಿಟ್ಟರು 'ಕೃಷಿ ವಿದ್ಯುತ್ ದರಗಳು ಮತ್ತು ಅದರ ಸಹಾಯಧನವನ್ನು ಒಟ್ಟುಗೂಡಿಸಿದ ನಂತರ ಉಳಿಸುವ ರಾಜಸ್ವದ ಅಂತರವನ್ನು ಮಾತ್ರ ಸರ್ಕಾರ ಭರಿಸುತ್ತದೆ. ಇದು ಬಹಳ ಟೆಕ್ನಿಕಲ್ ಇಸ್ಸ್ಯು. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ ಇದರಲ್ಲಿ ಬಹಳ ವಿಶೇಷ ಇದೆ. ಇದರಲ್ಲಿ ಅವರೇನು ಕೊಡುವ ಇನ್‌ಫಾರ್ಮೇಷನ್ ಇದೆ. ಇದು ಮುಂದೆ ರೈತರಿಗೆ ಇನ್ನೂ ಕಷ್ಟವಾಗತಕ್ಕ ಪರಿಸ್ಥಿತಿ ಇವತ್ತು ವಿದ್ಯುತ್ ಸರಬರಾಜಿನಲ್ಲಿ ಆಗುತ್ತದೆ. ದಯಮಾಡಿ ಇದನ್ನು ತಾವು ಓದಬೇಕು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಈಗ ಎಲ್ಲಾ ಕ್ಷೇತ್ರಕ್ಕೂ ಮೀಟರಿಂಗ್‌ನ್ನು ಮಾಡಬೇಕೆಂದು ಮಾಡಿದ್ದಾರೆ. ಆ ಮೀಟರಿಂಗ್‌ನಲ್ಲಿ ಐಪಿ ಸೆಟ್ಸ್‌ಗೂ ಕೊಡಬೇಕೆಂದು ಅದರಲ್ಲಿ ನಮೂದಿಸಿದೆ ಎಂದು ತಾವು ಹೇಳಿದರಲ್ಲಾ ಅದರಂತೆ ಈಗ ಐಪಿ ಸೆಟ್ಸ್‌ಗೂ ಮೀಟರಿಂಗ್‌ನ್ನು ಹಾಕಿ ಎಲ್ಲಿ ಲಾಸ್ ಆಗುತ್ತದೆ ಎನ್ನತಕ್ಕಂಥದ್ದನ್ನು ಕಂಡುಹಿಡಿಯುವುದು ಒಂದು. ಮೀಟರಿಂಗ್‌ನ್ನು ಹಾಕಿದಾಗ ನಾವೇನು ಹೆಚ್‌ಪಿಗೆ 300 ರೂ. ಎಂದು ಅಥವಾ ಕೆಆರ್‌ಇಸಿ ಯವರು ಏನು ದರ ನಿಗದಿ ಮಾಡುತ್ತಾರೆ ಆ ಹಣವನ್ನು ಅದಕ್ಕೆ ನಿಗದಿ ಮಾಡಿ ಉಳಿಕೆ ಹೆಚ್ಚುವರಿಯಾಗತಕ್ಕದ್ದನ್ನು ಸಬ್ಸಿಡಿ ರೂಪದಲ್ಲಿ ರೈತರಿಗೆ ಕೊಡುತ್ತಾರೆ ಎನ್ನತಕ್ಕ ಮಾತನ್ನು ಆಡಿರತಕ್ಕದ್ದು. ಮತ್ತೆ ಮೀಟರಿಂಗ್ ಎಲ್ಲದಕ್ಕೂ ಅವಶ್ಯಕತೆ ಇದೆಯೇ ಎನ್ನತಕ್ಕದ್ದು.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಉಪಾಧ್ಯಕ್ಷರೇ ನಾನು ಇತ್ತೀಚೆಗೆ ಎಲ್ಲೋ ನೋಡಿದ ಹಾಗೆ ಸುಮಾರು 6.5 ಲಕ್ಷ ಮೀಟರ್‌ಗಳಿಗೆ ಇವತ್ತು ಆರ್ಡರ್ಸ್ ಪ್ಲೇಸ್ ಮಾಡಿದ್ದಾರೆ.

6.10 ಪಿ.ಎಂ.

ಅದು ಸುಮಾರು 70 ರಿಂದ 100 ಕೋಟಿ ರೂಪಾಯಿಗಳು ಆಗುವಂತಹದ್ದು. ಇವತ್ತು ಕೆಪಿಟಿಸಿಎಲ್ ಮೂಲಕ ಅದನ್ನು ಖರೀದಿ ಮಾಡಿದ್ದಾರೆ. ಸುಮಾರು 350, 400, 450 ರೂಪಾಯಿ ಬೆಲೆ ಆಗುವಂತಹ ಮೀಟರ್‌ಗಳನ್ನು ಇವತ್ತು ಬೋರ್ಡ್ ಗಮನಕ್ಕೂ ತಂದಿಲ್ಲ. ಬೋರ್ಡ್ ಮುಖಾಂತರವೂ ಆಗಿಲ್ಲ ಅದು ನೇರವಾಗಿ ಹಾಗೆಯೇ ಅದು ಪರ್ಚೇಸ್ ಕಮಿಟಿಯವರೇ ಆರ್ಡರನ್ನು ಪ್ಲೇಸ್ ಮಾಡಿರುವಂತಹದು. ಇವತ್ತೇನು ನಾಲ್ಕು ಸಂಸ್ಥೆಗಳು ಇವೆ - ಬೆಸ್ಕಾಂ, ಎಸ್ಕಾಂ, ಜೆಸ್ಕಾಂ ಹಾಗೂ ಮೆಸ್ಕಾಂ ಎಂದು ಮಂಗಳೂರಿನಲ್ಲಿ ಇದೆ. ಈ ನಾಲ್ಕು ಸಂಸ್ಥೆಗಳ ಮುಖಾಂತರ ಮೀಟರ್ ಖರೀದಿ ಇಲ್ಲ. ಕೆಪಿಟಿಸಿಎಲ್ ಸಂಸ್ಥೆ ಏನು ಇದೆ? ಟ್ರಾನ್ಸ್‌ಮಿಷನ್ ಎಂದು ಒಪ್ಪಿಕೊಂಡಿರತಕ್ಕ ಸಂಸ್ಥೆ ಅದೇರೀತಿ ಡಿಸ್ಟ್ರಿಬ್ಯೂಷನ್ ಸಂಸ್ಥೆ ಎಂದು ಹೇಳಿ ಈ ರೀತಿ ನಾಲ್ಕು ಸಂಸ್ಥೆಗಳು ಏನು ಇವೆ ಅವುಗಳಲ್ಲಿ ಹಸ್ತಕ್ಷೇಪ ಮಾಡಿ ಇವರೇ ಕ್ರಯ ಮಾಡಿ 100 ಕೋಟಿ ರೂಪಾಯಿಗಳಷ್ಟು ಬೆಲೆಯ ಮೀಟರ್‌ಗಳನ್ನು ಇವತ್ತು ರೈತರಿಗೆ ಕೊಡುವಂತ ವ್ಯವಹಾರ ನಡೆದಿದೆ. ರೈತರ ಮನೆಗಳಿಗೆ ಸಿಂಗಲ್ ಫೇಸ್ ಮೀಟರ್ಸ್ ಕೊಡುವಂತಹದು. ಅದರ ಬೆಲೆ ಇವತ್ತು 450 ರೂಪಾಯಿ ಆಗಬಹುದು. ಅದರ ತಾಂತ್ರಿಕ ವ್ಯವಸ್ಥೆ ಹೇಗಿದೆ ಎನ್ನುವುದು ಗೊತ್ತಿಲ್ಲ. ಆದರೆ ಆರ್ಡರ್ ಪ್ಲೇಸ್ ಮಾಡಿರುತ್ತಾರೆ ಇವತ್ತು ಔಷಧಿಗಳ ಬಗ್ಗೆ ಹೇಳಿದ ಹಾಗೆ ಬ್ಲಾಕ್‌ಲಿಸ್ಟ್‌ನಲ್ಲಿ ಇರುವುದು ಆಗಬಹುದು ಅಥವಾ ಅದನ್ನು ಎಲ್ಲಿ ಟೆಸ್ಟ್ ಮಾಡಿದ್ದಾರೆಂಬುದು ಗೊತ್ತಿಲ್ಲ ಟೆಕ್ನಾಲಜಿ ಕಮಿಟಿ ರಿಪೋರ್ಟ್ ಅದು ಯಾವುದೂ ಆಧಾರ ಇಲ್ಲದೇ ಕೆಪಿಟಿಸಿಎಲ್ ನೇರವಾಗಿ ಇವತ್ತು ಈ ಒಂದು 100 ಕೋಟಿ ರೂಪಾಯಿ ಆಗತಕ್ಕ ಮೌಲ್ಯ 6.5 ಲಕ್ಷ ಮೀಟರ್‌ಗಳಿಗೆ ಆದೇಶ ಕೊಟ್ಟಿದೆ ಎಂದು ಹೇಳತಕ್ಕ ಇದೊಂದು ಅಪವಾದ ಇದೆ.

ಉಪಾಧ್ಯಕ್ಷರು :- ಸಾಕು ಮುಗಿಸಿ ಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ :- ಇಷ್ಟು ವಿಷಯ ಹೇಳಿ ಇವತ್ತೇನು ಶ್ರೀಮತಿ ಮೋಟಮ್ಮನವರು ಸ್ತ್ರೀ ಶಕ್ತಿ ಎಂದು ಹೇಳಿಕೊಂಡು ಇವತ್ತು ಆನ್‌ಲೈನ್ ಲಾಟರಿಯಲ್ಲಿ ಬರುವಂತಹ ಹಣದಲ್ಲಿ ಮಕ್ಕಳಿಗೆ ಬಿಸಿ ಊಟ ಕೊಡುವಂತಹ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಮತ್ತು ಲಾಟರಿ ಅಥವಾ ಯಾವುದೇ ಜೂಜಿನ ವ್ಯವಸ್ಥೆಯಲ್ಲಿ ಶ್ರೀಮತಿ ಮೋಟಮ್ಮನವರ

ಇಲಾಖೆಯ ಸ್ತ್ರೀ ಶಕ್ತಿ ಇರುವಂತಹವರು ಅವರು ಅವರನ್ನು ಸರಿ ಮಾಡಬೇಕು. ಏನೂ ತೊಡಗಿಸಿಕೊಳ್ಳದೇ ಇರತಕ್ಕಂಥದ್ದು ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ಸಚಿವರಾದ ಶ್ರೀಮತಿ ಮೋಟಮ್ಮನವರು ಹೇಳಿದರು. ಹೌದು ಈಗ ಸ್ತ್ರೀ ಶಕ್ತಿ ಬಹಳ ಚೆನ್ನಾಗಿ ಇದೆ ಅದನ್ನೆಲ್ಲಾ ನಾವು ನಿಯಂತ್ರಣ ಮಾಡುತ್ತೇವೆ ಎಂದು ಹೇಳಿದರು. ಸ್ವಾಮಿ ಸ್ತ್ರೀಯರು ಇರುವುದು ಸರಿ. ಹೆಂಡತಿ ಇಲ್ಲದೇ ಇರುವವರನ್ನು ಯಾರು ನಿಯಂತ್ರಣ ಮಾಡುವವರು? ಈ ಆನ್‌ಲೈನ್ ಲಾಟರಿ ಬಗ್ಗೆ ಎಂಬುದನ್ನು ಹೇಳಬೇಕು. ಅವರು ಹೇಳಿದ ಪ್ರಕಾರ ಹೆಂಡತಿ ಇರುವವರು ಸರಿ. ಆದರೆ ಹೆಂಡತಿ ಇಲ್ಲದೇ ಇರುವಂತಹವರಿಗೆ ಯಾರು ನಿಯಂತ್ರಣ ಮಾಡಬೇಕು? ತಮ್ಮ ಶಕ್ತಿ ಬಹಳ ಇದೆ. ಎಂದು ಯಾರು ನಿಯಂತ್ರಣ ಮಾಡಬೇಕು?

ಶ್ರೀಮತಿ ಮೋಟಮ್ಮ :- ತಾಯಿ ನಿಯಂತ್ರಣ ಮಾಡಬೇಕು. ಜೊತೆಗೆ ಗಂಡಸರು ಸ್ವಲ್ಪ ಮನಸ್ಸಿನ ನಿಗ್ರಹ ಶಕ್ರಿಯನ್ನು ಹೊಂದಬೇಕು. ಈ ಜೂಜು ಪದ್ಧತಿ ಎಷ್ಟು ವರ್ಷದಿಂದ ಬಂದಿದೆ? ಅದನ್ನು ಯೋಚನೆ ಮಾಡಿ. ಆದರೆ ಅದು ಅತಿಯಾಗದ ಹಾಗೆ ನಮ್ಮ ಮನಸ್ಸಿನ ನಿಗ್ರಹ ಶಕ್ತಿ ಇದ್ದರೆ ಅದನ್ನು ಕಂಟ್ರೋಲ್ ಮಾಡಲಿಕ್ಕೆ ಸಾಧ್ಯ ಇದೆ. ಎಷ್ಟು ಜನ ಗಂಡಸರು ಹೆಂಡತಿಯ ತಾಳಿಯನ್ನು ಅಡವು ಇಟ್ಟು ಇಸ್ಪೀಟ್ ಆಡಿಲ್ಲ? ಕುದುರೆ ಜೂಜು ಆಡಿಲ್ಲ. ಹಾಗೆ ಅಂದುಬಿಟ್ಟು ಎಲ್ಲಾ ಕುಟುಂಬಗಳೂ ಹಾಳಾಗಿವೆಯೊ? ಆದರೆ ಮನಸ್ಸಿನ ನಿಗ್ರಹ ಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ನೋಡಿ ಪಾಂಡವರ ಕಾಲದ ಸುದ್ದಿ ಹೇಳುತ್ತೀರಲ್ಲಾ. ಹೆಂಡತಿಯನ್ನು ಒತ್ತೆ ಇಟ್ಟು ಜೂಜು ಆಡಿದ್ದಾರೆ.

ಶ್ರೀಮತಿ ಮೋಟಮ್ಮ :- ಅವರು ಇಟ್ಟರು ಎಂದರೆ ಉಳಿದವರೆಲ್ಲಾ ಇಟ್ಟರಾ? ಪಾಟೀಲ್ ಅವರೇ ಪಾಂಡವರು ಹೆಂಡತಿಯನ್ನು ಒತ್ತೆ ಇಟ್ಟು ಜೂಜು ಆಡಿದರು. ಆಯಿತು, ಉಳಿದ ಎಲ್ಲಾ ಕುಟುಂಬದ ಗಂಡಸರು ಅದನ್ನೇ ಮಾಡಿದರೆ? ಉಳಿದ ಎಲ್ಲಾ ಕುಟುಂಬದವರೂ ಆ ರೀತಿ ಅವರ ಕಾಲದಲ್ಲಿ ಮಾಡಿದರಾ? ಉಳಿದ ಕುಟುಂಬದ ಗಂಡಸರು ಆ ಕೆಲಸ ಮಾಡಲಿಲ್ಲ. ಅವರಿಗೆ ನಿಗ್ರಹ ಶಕ್ತಿ ಇತ್ತು.

ಶ್ರೀ ಎಂ. ಚಂದ್ರಪ್ಪ :- ಮತ್ತೆ ಪಾಂಡವರದ್ದು ರಪೀಟ್ ಆಗಬೇಕು ಎನ್ನುವ ಮನಸ್ಸು ಇಲಾಖೆಯದ್ದು ಇದೆಯಾ?

ಶ್ರೀ ಬಿ.ಎಚ್. ಬನ್ನಿಕೋಡ್ :- ಮಾನ್ಯ ಬಚ್ಚೇಗೌಡರೇ, ಶ್ರೀಮತಿ ಮೋಟಮ್ಮನವರು ಹೇಳಿದರು.

(ಗೊಂದಲ)

ಶ್ರೀಮತಿ ಮೋಟಮ್ಮ :- ಗಂಡಸರಿಗೆ ಕಂಟ್ರೋಲಿಂಗ್ ಶಕ್ತಿ ಇರಬೇಕು ಎಂದು ಹೇಳುತ್ತಿರುವುದು.

ಶ್ರೀ ಬಿ.ಎಚ್. ಬನ್ನಿಕೋಡ್ :- ಎಲ್ಲದಕ್ಕೂ ನಿಯಂತ್ರಣ ಇರಬೇಕು. ಈಗ ಮಾತನಾಡುವುದರಿಂದಲೇ ನಿಯಂತ್ರಣ ಪ್ರಾರಂಭ ಆಗಲೀ ಎನ್ನುವ ಮಾತನ್ನು ಅವರು ಹೇಳಿದರು.

ಉಪಾಧ್ಯಕ್ಷರು :- ಮಾನ್ಯ ಬಚ್ಚೇಗೌಡರೇ ಮುಗಿಸಿ ಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ :- ನಮ್ಮ ಪಾರ್ಟಿಯದು ಸಮಯ ಕೊಟ್ಟಿದ್ದಾರೆ, ಅದನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು :- ಈಗ 6.30ಕ್ಕೆ ಸಭೆಯನ್ನು ಕ್ಲೋಸ್ ಮಾಡಬೇಕಾಗಿದೆ. ಅಷ್ಟರಲ್ಲಿ ಇನ್ನೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :- ಆಗಲಿ, ಮಾನ್ಯ ಉಪಾಧ್ಯಕ್ಷರೆ, ಈ ಆಯವ್ಯಯದಲ್ಲಿ ನೋಡಿದರೆ, ಯಾವುದು ಒಂದು ಆರ್ಥಿಕ ಗುರಿ ನಿರೀಕ್ಷೆ ಇಲ್ಲದೆ ಆರ್ಥಿಕ ಗುರಿಯನ್ನು ತಲುಪಲಾಗಿಲ್ಲ. ಮತ್ತು ಇದು ಬರೇ ಘೋಷಣೆ ಇರತಕ್ಕಂಥ ಆರ್ಥಿಕ ಮುಂಗಡಪತ್ರ. ಸಂಪನ್ಮೂಲಗಳ ಕಡೆಗೆ ಈ ಸರ್ಕಾರ ಗಮನ ಕೊಟ್ಟಿಲ್ಲ. ಸಂಪೂರ್ಣ ಸಂಪನ್ಮೂಲಗಳನ್ನು ತೆಗೆದುಕೊಳ್ಳದೇ ಕ್ಷೀಣಿಸಿದೆ. ಜೊತೆಗೆ ಬರೇ ಸಾಲದಲ್ಲಿ ನಡೆಸುವಂತಹ ಸರ್ಕಾರ ಮತ್ತು ಬುರುಡೆ ಬಜೆಟ್ ಎಂದು ಈ ಸಂದರ್ಭದಲ್ಲಿ ತಿಳಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್.ಜಿ. ನಂಜಯ್ಯನಮಠ (ಗುಳೇದ ಗುಡ್ಡ) :- ಮಾನ್ಯ ಉಪಾಧ್ಯಕ್ಷರೆ, ಈ ವರ್ಷದ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಅವರು ಅನುಮೋದನೆ ಮಾಡುತ್ತಿದ್ದಾರಾ?

ಉಪಾಧ್ಯಕ್ಷರು :- ಅವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜಯ್ಯನಮಠ್ ಅವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಬಗ್ಗೆ ಅರ್ಧದಲ್ಲೇ ಭಾಷಣವನ್ನು ಮೊಟಕು ಮಾಡಿದರು. ಅದನ್ನ ಮುಂದುವರಿಸುತ್ತಿದ್ದಾರೋ ಅಥವಾ ಬಜೆಟ್ ಬಗ್ಗೆ ಮಾತನಾಡುತ್ತಿದ್ದಾರೋ ಎಂಬ ಬಗ್ಗೆ ಈ ಕಡೆ ಕೆಲವರಿಗೆ ಕನ್‌ಫ್ಯೂಸ್ ಆಯಿತು. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ.

ಶ್ರೀ ಎಸ್.ಜಿ. ನಂಜಯ್ಯನಮಠ್ :- ನಾನು ಬಜೆಟ್ ಬಗ್ಗೆ ಮಾತನಾಡುತ್ತಿದ್ದೇನೆ. ಅದರ ಬಗ್ಗೆ ಸಂಶಯ ಬೇಡ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ರಾಜ್ಯಪಾಲರ ಭಾಷಣ ಅನುಮೋದನೆ ಆಗಲೇ ಇಲ್ಲ. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಂತಹದು. ಇವರು ಮುಗಿಸಲೇ ಇಲ್ಲ.

ಉಪಾಧ್ಯಕ್ಷರು :- ಈಗಂತೂ ಬಜೆಟ್ ಮೇಲೆ ಮಾತನಾಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಸಿಇಟಿ ಬಗ್ಗೆ ಚರ್ಚೆಗೆ ಬರಲಿಲ್ಲ, ಬರಗಾಲದ್ದು ಬರಲಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ :- ಮಾನ್ಯ ಉಪಾಧ್ಯಕ್ಷರೆ, ಅನುಮೋದನೆ ಆದ ನಂತರ ಚರ್ಚೆ ಆಗಿ ಆ ನಂತರ ಉತ್ತರ ಆಗಿದೆ. ಆದರೆ ಅವರು ಹೇಳುವುದು ಏನೆಂದರೆ ಪೂರ್ಣ ಆಗಿಲ್ಲ ಎಂದು. ಅವರ ಅನುಮೋದನೆಗೆ ಪೂರ್ಣ ಚರ್ಚೆ ಆಗಿಲ್ಲ ಎಂದು ಅವರು ಹೇಳುವುದು.

ಶ್ರೀ ಎಸ್.ಜಿ. ನಂಜಯ್ಯನಮಠ್ :- ಆಗಿದೆ.

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗ್ಡೆ :- ನಾನು ಅನುಮೋದಿಸುತ್ತೇನೆಂದು ಹೇಳಿದರು. ಆದರೆ ಆ ಶಬ್ದ ಬರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೆ, ನನ್ನದು ಒಂದೇ ಒಂದು ವಿನಂತಿ ಇದೆ. ಈ ಅರ್ಧಗಂಟೆ ಕಾಲಾವಧಿ ಚರ್ಚೆ ಸಹ ಇವತ್ತು ಇದೆ. ನನಗೆ ಅನಿಸುವುದು, ಈ ಸದನವನ್ನು ತಾವು ಎಷ್ಟು ಹೊತ್ತಿಗೆ ಮುಗಿಸುತ್ತೀರಿ ಎನ್ನುವುದು ತಮ್ಮ ಒಂದು ವಿವೇಚನೆಗೆ ಬಿಟ್ಟಿರುವಂತಹದು. ಆದರೆ ನಮಗೇನು ಇದೆ ಅಂದರೆ ಅರ್ಧ ಗಂಟೆ ಚರ್ಚೆ ಸಹ ಆಗಬೇಕು.

ಉಪಾಧ್ಯಕ್ಷರು :- ನಾಳೆ ತೆಗೆದುಕೊಳ್ಳೋಣ.

ಶ್ರೀ ವಿಶ್ವೇಶ್ವರ ಹೆಗಡೆ :- ನಾಳೆ ಆಗುವುದಿಲ್ಲ ಸಾರ್.

ಉಪಾಧ್ಯಕ್ಷರು :- ಇವತ್ತು 6.30ಕ್ಕೆ ಬೇರೆ ಒಂದು ಕಾರ್ಯಕ್ರಮ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಬಹಳ ಪ್ರಮುಖವಾಗಿ ಮಾದಿಗ ಸಮಾಜದವರು ಒಂದು ಹೋರಾಟವನ್ನು ನಡೆಸಿದ್ದಾರೆ. ಅವರು ಇವತ್ತು ಮಾನ್ಯ ಮುಖ್ಯಮಂತ್ರಿಗಳ ಮನೆ ಎದುರಿಗೆ ಸಹ ಒಂದು ದೊಡ್ಡ ಪ್ರತಿಭಟನೆಯನ್ನು ಮಾಡಿದ್ದಾರೆ. ಆ ಸಮಾಜದಲ್ಲಿ ಅವರಿಗೆ ಕೊಡಬೇಕಾದಂತಹ ಅಗತ್ಯವಾದ ಒಂದು ಸ್ಥಾನಮಾನವನ್ನು ಅವರಿಗೆ ಕೊಡಬೇಕು ಎನ್ನುವಂತಹ ಅಪೇಕ್ಷೆ ಅವರಿಗೆ ಇದೆ. ಆ ವಿಷಯ ಕುರಿತಂತೆ ಒಂದು ಪ್ರಶ್ನೆ ಇದೆ. ನಮ್ಮ ಅರ್ಧ ಗಂಟೆ ಕಾಲಾವಧಿಯ ಚರ್ಚೆಯಲ್ಲಿ ಆ ವಿಷಯ ಇದೆ. ಹಾಗಾಗಿ ನನಗೆ ಏನು ಅನ್ನಿಸುತ್ತದೆ ಎಂದರೆ ಮಾನ್ಯ ನಂಜಯ್ಯನಮಠ್ ಅವರ ಯೋಗವೇ ಹಾಗೆ ಎಂದು ಕಾಣುತ್ತದೆ. ಹಾಗಾಗಿ ಇವತ್ತು ತಾವು ನಮಗೆ ಅವಕಾಶ ಮಾಡಿಕೊಡಬೇಕು. ತಾವು ದಯಮಾಡಿ ಈ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈಗ ಆಡಳಿತ ಪಕ್ಷದವರೇ ಮಾತನಾಡುವುದು ನಮಗೆ ಗೊತ್ತಿದೆ, ಅವರೇನು ಮಾತನಾಡುತ್ತಾರೆ ಎಂದು ಬಜೆಟ್‌ನಲ್ಲಿ ಇರುವಂತಹ ಒಳ್ಳೆಯ ಅಂಶ ಯಾವುದು ಇದೆ, ಅದನ್ನು ಅವರು ಹೇಳುತ್ತಾರೆ.

ಉಪಾಧ್ಯಕ್ಷರು :- ನೀವೇನು ಮಾತನಾಡುತ್ತೀರಿ ಎನ್ನುವುದೂ ಅವರಿಗೆ ಗೊತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಪ್ರಜಾಪ್ರಭುತ್ವದಲ್ಲಿ ನಮ್ಮ ಪಾತ್ರ ಮುಖ್ಯ.

ಉಪಾಧ್ಯಕ್ಷರು :- ಈಗ ಅವರೇನು ಮಾತನಾಡುತ್ತಾರೆ ಎನ್ನುವುದು ನಿಮಗೆ ಗೊತ್ತಿದೆ. ನೀವು ಏನು ಮಾತನಾಡುತ್ತೀರಿ ಎನ್ನುವುದು ಅವರಿಗೆ ಗೊತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರು ಅವರು ಮಾಡಿದ್ದನ್ನು ಹೇಳಿಕೊಳ್ಳುವುದು ಸಹಜ. ರಾಜ್ಯದ ಹಿತದೃಷ್ಟಿಯಿಂದ ಇನ್ನೇನು ಮಾಡಬೇಕು ಎನ್ನುವುದನ್ನು ನಾವು ಹೇಳುವುದು ನಮ್ಮ ಜವಾಬ್ದಾರಿ ಇದೆ. ಆ ಹಿನ್ನೆಲೆಯಲ್ಲಿ ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆ. ಅವರು ಮಾಡಬೇಕಾದ್ದನ್ನು, ಅವರು ಮಾಡಿದ್ದನ್ನು ಅವರು ಹೇಳಿಕೊಳ್ಳುವುದು ಸಹಜ ಇದೆ. ಅದಕ್ಕಿಂತಲೂ ಮುಖ್ಯವಾಗಿ ಈ ಅರ್ಧಗಂಟೆ ಕಾಲಾವಧಿಯ ಚರ್ಚೆಯನ್ನು ಈಗ ತೆಗೆದುಕೊಳ್ಳಬೇಕು ಎಂದು ನಾನು ಆಗ್ರಹ ಮಾಡುತ್ತೇನೆ. ಇದು ಬಹಳ ಪ್ರಮುಖವಾದಂತಹ ಚರ್ಚೆ ಇದೆ.

ಉಪಾಧ್ಯಕ್ಷರು :- ಒಂದು ಕೆಲಸ ಮಾಡೋಣ. ಅವರು ಹತ್ತು ನಿಮಿಷ ಮಾತನಾಡಲಿ. ಆಮೇಲೆ ಬೇಕಾದರೆ ತೆಗೆದುಕೊಳ್ಳೋಣ.

ಶ್ರೀ ಕರಿಯಣ್ಣ :- ಮಾನ್ಯ ಉಪಾಧ್ಯಕ್ಷರೆ, ಈಗ ಅವರು ಅರ್ಧ ಗಂಟೆ ಚರ್ಚೆಗೆ ಕೇಳುತ್ತಿರುವುದು ಮುಖ್ಯವಾಗಿದೆ. ತಾವು ಒಂದು ವಾರದಿಂದಲೂ ಹಾಗೆಯೇ ಮುಂದೆ ಹಾಕುತ್ತ ಬರುತ್ತಿದ್ದೀರಿ ದಯಮಾಡಿ ನೀವು ಚರ್ಚೆಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :- ಚರ್ಚೆಗೆ ಅವಕಾಶ ಕೊಟ್ಟೆನಲ್ಲಾ ಅವರು 15 ನಿಮಿಷ ಮಾತನಾಡಿದ ಮೇಲೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ :- ಆ ವಿಷಯವನ್ನು ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಈ ಅವಸರದಲ್ಲಿ ಚರ್ಚೆ ಮಾಡುವುದು ಬೇಡ. ನಾಳೆ ಬೇಕಾದರೆ ಇಟ್ಟುಕೊಳ್ಳೋಣ. ನಾಳೆ ಅವಕಾಶ ಕೊಡಿ ಏಕೆಂದರೆ ಅದರ ಬಗ್ಗೆ ಡೀಟೇಲ್ ಆಗಿ ಚರ್ಚೆ ಮಾಡಬೇಕಾಗುತ್ತದೆ. ನಾಳೆಗೆ ಇಟ್ಟುಕೊಳ್ಳಿ.

ಉಪಧ್ಯಾಕ್ಷರು :- ಆಗಬಹುದು.

ಶ್ರೀ ಎಸ್.ಜಿ. ನಂಜಯ್ಯನಮಠ್ :- ಮಾನ್ಯ ಉಪಾಧ್ಯಕ್ಷರೆ, ಮಾದಿಗರ ಮೀಸಲಾತಿ ವಿಷಯವಾಗಿ ತಾವು ಚರ್ಚೆಗೆ ತೆಗೆದುಕೊಳ್ಳುವುದಾದರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಬೇಕಾದರೆ ನಾಳೆ ನನಗೆ ಟೈಮ್ ಕೊಡಿ. ಈಗ ಚರ್ಚೆ ಪ್ರಾರಂಭ ಆಗಲಿ ಎಂದು ನನ್ನ ವಿನಂತಿ.

ಉಪಾಧ್ಯಕ್ಷರು :- ಈಗ ಅವರು ರೆಡಿ ಇದ್ದಾರೆ. ಚರ್ಚೆಗೆ ತೆಗೆದುಕೊಳ್ಳುವುದಿದ್ದರೆ ಅರ್ಧ ಗಂಟೆ ಮಾತನಾಡಿ. 7.00 ಗಂಟೆಯವರೆಗೆ ಮಾತನಾಡಬಹುದು.

ಶ್ರೀ ಜಗದೀಶ್ ಶೆಟ್ಟರ್ :- ಡಿಟೇಲ್ ಆಗಿ ಚರ್ಚೆ ಮಾಡಬೇಕಾಗುತ್ತದೆ, ಟೈಮ್ ಬೇಕಾಗುತ್ತದೆ.

ಉಪಾಧ್ಯಕ್ಷರು :- ಅಥೆ 7.00 ಗಂಟೆಯವರೆಗೆ ಚರ್ಚೆ ಮಾಡಬಹುದು. ನೀವು ಹೇಳಿದ್ದು ಅರ್ಧ ಗಂಟೆ ನಾನು ಕೊಡುತ್ತಿರುವುದು ಒಂದು ಗಂಟೆ.

ಶ್ರೀ ಜಗದೀಶ್ ಶೆಟ್ಟರ್ :- ನಾಳೆಗೆ ಇಟ್ಟುಕೊಳ್ಳಿ. ಮಾನ್ಯ ನಂಜಯ್ಯನಮಠ್ ಅವರದ್ದು ಯಾವಾಗಲೂ ಇನ್ ಕಂಪ್ಲೀಟ್ ಆಗುತ್ತದೆ ಅವರು ಮುಗಿಸಲಿ.

ಉಪಾಧ್ಯಕ್ಷರು :- ಮಾನ್ಯ ನಂಜಯ್ಯನ ಮಠ್ ಅವರೇ ನೀವು 15 ನಿಮಿಷಗಳ ಕಾಲ ಮಾತನಾಡಿ.

ಶ್ರೀ ಎಸ್.ಜಿ. ನಂಜಯ್ಯನ ಮಠ್ :- ತಾವು ಈಗ ಒಪ್ಪಿಗೆ ಕೊಟ್ಟರೆ ಮಾತನಾಡುತ್ತೇನೆ. ಚರ್ಚೆ ಪ್ರಮುಖವಾಗಿ ಆಗಬೇಕಾಗಿದೆ.

ಉಪಾಧ್ಯಕ್ಷರು :- ನಿಮಗೆ ಒಪ್ಪಿಗೆ ಕೊಟ್ಟಿದ್ದೇವೆ. 15 ನಿಮಿಷದಲ್ಲಿ ಮಾತನಾಡಿ.

ಶ್ರೀ ಕರಿಯಣ್ಣ :- ದಯಿವಿಟ್ಟು ನಾಳೆ ಬೆಳಿಗ್ಗೆ ಸಭೆ ಪ್ರಾರಂಭವಾದಾಗ ಮೊದಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಮ್ಮ ವಿನಂತಿ

ಉಪಾಧ್ಯಕ್ಷರು :- ಆಗಬಹುದು.

ಶ್ರೀ ಎಸ್.ಜಿ. ನಂಜಯ್ಯನಮಠ (ಗುಳೇದಗುಡ್ಡ) :- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಮುಂಗಡ ಪತ್ರವನ್ನು ಬೆಂಬಲಿಸುತ್ತಾ ರಾಜ್ಯದ ಅಭಿವೃದ್ಧಿಗೋಸ್ಕರ ಹಲವಾರು ಜನಪರ ನಿರ್ಣಯಗಳನ್ನು, ಸವಲತ್ತುಗಳನ್ನು ಕೊಟ್ಟಿರುವ ಇದೊಂದು ಅಪೂರ್ವವಾದ ಮುಂಗಡಪತ್ರವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಲಿಚ್ಛಿಸುತ್ತೇನೆ.

ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪಿಸಿರುವುದಕ್ಕೆ ಹೇಳುವುದಾದರೆ, ಇದರಲ್ಲಿ ಅವರು ಯಾವ ವಿಷಯವನ್ನು ಹೇಳಿಲ್ಲವೋ ಆ ವಿಷಯವನ್ನು ನಾವು ಹೇಳುತ್ತೇವೆ ಅಷ್ಟೆ. ಇದರಲ್ಲಿ ಹೇಳಬೇಕಾಗಿರುವ ವಿಷಯಗಳನ್ನು ಬಿಟ್ಟು ತಮ್ಮದೇ ಆದ ಮಾತುಗಳನ್ನು ನೀವು ಹೇಳುತ್ತೀರಿ, ಅಲ್ಲಿ ಬಿಟ್ಟಿರುವ ವಿಷಯಗಳನ್ನಷ್ಟೇ ನಾನು ಹೇಳುವುದು ಈ ರಾಜ್ಯ ಸತತವಾಗಿ ಎರಡು ವರ್ಷಗಳ ಕಾಲ ಬರಗಾಲದ ದವಡೆಗೆ ಸಿಲುಕಿದೆ. ಬರಗಾಲದ ಸಂದರ್ಭದಲ್ಲಿ ಸರ್ಕಾರವನ್ನು ಮುನ್ನಡೆಸಿಕೊಂಡು ಹೋಗುವುದು ಮತ್ತು ಅಂತಹ ಸಂದಿಗ್ಧದ ಪರಿಸ್ಥಿತಿಯಲ್ಲೂ ಜನಪರವಾಗಿರುವ ಹಲವಾರು ಕಾರ್ಯಕ್ರಮಗಳಿಗೆ ಹಣ ವಿನಿಯೋಗಿಸುವುದು ಕೂಡ ಅಷ್ಟೊಂದು ಸಾಮಾನ್ಯವಾದ ಮಾತೇನಲ್ಲ. ರಾಜ್ಯದಲ್ಲಿ ಸುಭಿಕ್ಷವಾಗಿ ಮಳೆಯಾದರೆ ಶೇಕಡ 98ರಷ್ಟು ಸಮಸ್ಯೆಗಳು ತಂತಾನೇ ಬಗೆಹರಿಯುತ್ತದೆ. ಮಳೆಯಾಗಿದಿದ್ದರೆ ಶೇಕಡ 98ರಷ್ಟು ಸಮಸ್ಯೆಗಳು ಉದ್ಭವಿಸುತ್ತವೆ. ಆದಕಾರಣ, ಇಂತಹ ಸಂದರ್ಭದಲ್ಲೂ ಸ್ವಾಗತಿಸುವ, ಮೆಚ್ಚುವ ಮುಂಗಡ ಪತ್ರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ನೀಡಿದ್ದಾರೆ. ತನ್ಮೂಲಕ ರೈತರಿಗೆ ಹಲವಾರು ರಿಯಾಯಿತಿಗಳನ್ನು ಯೋಜನೆಗಳನ್ನು ಇವೊತ್ತು ಮಂಡಿಸಿದ್ದಾರೆ. ವಾಟರ್‌ಗನ್ ಮತ್ತು ಸ್ಪ್ರಿಂಕ್ಲರ್ ಖರೀದಿಗೆ ಶೇಕಡ 50ರಷ್ಟು ರಿಯಾಯಿತಿ ಘೋಷಿಸಿದ್ದಾರೆ. ಇದು ರೈತಾಪಿ ವರ್ಗಕ್ಕೆ ತಮ್ಮ ಆಧುನಿಕ ಬೇಸಾಯವನ್ನು ಸುಗಮವಾಗಿ ಕೈಗೊಳ್ಳಲು ಅಗತ್ಯವಾದ ಸಲಕರಣೆಗಳನ್ನು ಹೊಂದಲು ಶೇಕಡ 50ರಷ್ಟು ರಿಯಾಯಿತಿ ನೀಡಿರುವುದು ಅವರಿಗೆ ಬಹಳಷ್ಟು ಅನುಕೂಲ ಹಾಗೂ ಸಹಕಾರಿಯಾಗುತ್ತದೆ. ಅದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೂ ಕೂಡ ಶೇಕಡ ನೂರರಷ್ಟು ರಿಯಾಯಿತಿ ಘೋಷಣೆಗಳನ್ನು ಮಾಡಿದ್ದಾರೆ. ಇಂತಹ ಘೋಷಣೆ ಹಾಗೂ ಕೊಡುಗೆಗಳಿಂದಲೇ ಸಾಮಾಜಿಕ ನ್ಯಾಯ ಬರಲು ಸಾಧ್ಯ. ಯಾರಿಗೆ ಖರೀದಿ ಮಾಡುವ ಶಕ್ತಿ ಇರುವುದಿಲ್ಲವೋ ಅಂತಹ ಜನಾಂಗವನ್ನು ಸರ್ಕಾರ ಗುರ್ತಿಸಿ, ಅವರಿಗೆ ಈ ರೀತಿಯಾದ ಅನುಕೂಲತೆ ಕಲ್ಪಿಸಿಕೊಟ್ಟರೆ ಅವರೂ ಕೂಡ ಆರ್ಥಿಕವಾಗಿ ಸಬಲತೆ ಹೊಂದಬಹುದೆಂಬ ಸದುದ್ದೇಶದಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಒಂದು ಜನಾಂಗಕ್ಕೆ ಶೇಕಡ ನೂರರಷ್ಟು ರಿಯಾಯಿತಿಯ ಘೋಷಣೆ ಮಾಡಿ ಅವರೂ ಕೂಡ ಇಂತಹ ಹಲವಾರು ಕೃಷಿ ಸಲಕರಣೆಗಳನ್ನು ಹೊಂದುವುದಕ್ಕೆ ಸಹಕಾರಿಯಾಗಿದೆ. ಅದೇ ರೀತಿ ಟ್ರ್ಯಾಕ್ಟರ್ ಸಲಕರಣೆಗಳನ್ನು ಕೊಳ್ಳಲು ಸಹಾಯಧನವನ್ನು ಶೇಕಡ 25 ರಿಂದ 50ಕ್ಕೆ ಏರಿಸಲಾಗಿದೆ. ತೋಟಗಾರಿಕೆ ವಿಷಯದಲ್ಲಿ ಹಿಂದುಳಿದ ಜಿಲ್ಲೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಬಿಜಾಪುರ ಜಿಲ್ಲೆಯಲ್ಲಿ ಇವೊತ್ತು ಎಷ್ಟು ಹೆಕ್ಟೇರು ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಬೆಳೆಯಲಾಗುತ್ತಿದೆಯೋ ಅಷ್ಟೇ ಪ್ರಮಾಣದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲೂ ಬೆಳೆಯಲಾಗುತ್ತಿದ್ದು, ತೋಟಗಾರಿಕೆ ಬೆಳೆಗೆ ಬಾಗಲಕೋಟೆ ಪ್ರಸಿದ್ಧಿಯಾಗಿದೆ. ಅಲ್ಲಿ ಸಾವಿರಾರು ಎಕರೆಗಳಷ್ಟು ಪ್ರದೇಶದಲ್ಲಿ ದ್ರಾಕ್ಷಿ, ದಾಳಿಂಬೆ ಮತ್ತು ಚಿಕ್ಕು ಬೆಳೆಯುತ್ತಿದ್ದು, ಹಾಪ್‌ಕಾಮ್ಸ್‌ಗೆ ಪ್ರತಿನಿತ್ಯವೂ ಬಾಗಲಕೋಟೆ ಜಿಲ್ಲೆಯಿಂದ ಸಾಕಷ್ಟು ಪ್ರಮಾಣದಲ್ಲಿ ಈ ಕೃಷಿ ಉತ್ಪನ್ನಗಳು ಬರುತ್ತಿದೆ. ಜಮಖಂಡಿ ತಾಲ್ಲೂಕಿನಲ್ಲಿ ಸಾವಳಗಿ ಪಂಚಾಯಿತಿ ಇದ್ದು, ಅಲ್ಲಿ ಒಂದೇ ಕಡೆ ಸುಮಾರು 600 ಎಕರೆಗಳಷ್ಟು ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಅದೇ ರೂತಿ ಬಾಗಲಕೋಟೆ ಜಿಲ್ಲೆಯಲ್ಲೂ 1200-1300 ಎಕರೆಗಳಷ್ಟು ಪ್ರದೇಶದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಅಲ್ಲದೆ, 400 ಎಕರೆಗಳಲ್ಲಿ ದಾಳಿಂಬೆ ಬೆಳೆಯಲಾಗುತ್ತಿರುವುದರಿಂದ ಬಿಜಾಪುರ ಜಿಲ್ಲೆಗೆ ತೋಟಗಾರಿಕೆಯಲ್ಲಿ ನೀಡಿರುವ ಸವಲತ್ತನ್ನೇ ಬಾಗಲಕೋಟೆ ಜಿಲ್ಲೆಗೂ ವಿಸ್ತರಿಸಬೇಕೆಂಬ ಮನವಿಯನ್ನು ಈ ತುಂಬಿದ ಸಭೆಯಲ್ಲಿ ತಮ್ಮ ಮುಖಾಂತರ ರೈತರ ಪರವಾಗಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ತೋಟಗಾರಿಕೆ ಕ್ಷೇತ್ರದಲ್ಲಿ ಬಿಜಾಪುರ ಜಿಲ್ಲೆಗೆ ವಿಶೇಷ ರಿಯಾಯಿತಿ ನೀಡಿರುವ ಹಿನ್ನೆಲೆಯಲ್ಲಿ ಹಮ್ಮಿಕ್ಕೊಂಡಿರುವ ಯೋಜನೆಯನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ. ಅದೇ ರೀತಿ ಬಾಗಲಕೋಟೆ ಜಿಲ್ಲೆ ಉತ್ಕೃಷ್ಟ ಗುಣಮಟ್ಟದ ತೋಟಗಾರಿಕೆ ಬೆಳೆಗೆ ಪ್ರಸಿದ್ಧಿಯಾಗಿದೆ. ಇದರ ಜೊತೆಗೆ ಕೊಪ್ಪಳ ರಾಯಚೂರು, ಚಿತ್ರದುರ್ಗ, ಕೋಲಾರ ಭಾಗಗಳಿಗೂ ಈ ಸವಲತ್ತನ್ನು ವಿಸ್ತರಿಸಬೇಕೆಂದು ನನ್ನ ಒತ್ತಾಯವಿದೆ.

ಶ್ರೀ ಜೆ.ಟಿ. ಪಾಟೀಲ್ :- ಬಿಜಾಪುರವನ್ನು ತೋಟಗಾರಿಕಾ ಜಿಲ್ಲೆಯೆಂದು ಕಳೆದ ವರ್ಷ ಸರ್ಕಾರ ಘೋಷಿಸಿದೆ. ಅದೇ ಸವಲತ್ತನ್ನು ಬಾಗಲಕೋಟೆ ಜಿಲ್ಲೆಗೂ ವಿಸ್ತರಿಸಬೇಕೆಂದು ಮಾನ್ಯ ಸದಸ್ಯರಾದ ನಂಜಯ್ಯನಮಠ್‌ರವರು ಏನು ಕೇಳಿದ್ದಾರೆ, ಸದರಿ ಸವಲತ್ತನ್ನು ಬೇರೆ ಜಿಲ್ಲೆಗಳಿಗೂ ವಿಸ್ತರಿಸಬೇಕೆಂದು ಕೇಳಿದರೆ ತಪ್ಪೇನೂ ಇಲ್ಲ. ತೋಟಗಾರಿಕೆ ಜಿಲ್ಲೆಯೆಂದು ಬಾಗಲಕೋಟೆಯನ್ನು ಘೋಷಿಸಿರುವುದರಿಂದ ಸವಲತ್ತು ನೀಡುವಲ್ಲಿ ಈ ಜಿಲ್ಲೆಗೂ ಪ್ರಾಶಸ್ತ್ಯ ಕೊಡಲು ಜೊತೆಗೆ ಬೇರೆ ಜಿಲ್ಲೆಗಳಿಗೂ ಪಾಶಸ್ತ್ಯ ನೀಡಬಹುದು. ತಕರಾರು ಏನಿಲ್ಲ.

ಶ್ರೀ ಎಸ್.ಜಿ. ನಂಜಯ್ಯನಮಠ್ :- ಸಂಗಣ್ಣನವರೆ, ಬಾಗಲಕೋಟೆಗೆ ಸವಲತ್ತು ಕೇಳುವ ಉದ್ದೇಶವಿಷ್ಟೆ. ಬಾಗಲಕೋಟೆಯನ್ನು ತೋಟಗಾರಿಕಾ ಜಿಲ್ಲೆಯೆಂದು ಸರ್ಕಾರ ಘೋಷಿಸಿರುವ ಕಾರಣದಿಂದಾಗಿ ಬಹುಶಃ ಅಧಿಕಾರಿಗಳ ಮಟ್ಟದಲ್ಲಿ ಆ ಸಂದರ್ಭದಲ್ಲಿ ಗಮನಕ್ಕೆ ಬಾರದಿರಬಹುದು ಎಂಬ ಒಂದು ಸಂಶಯದಿಂದ ನಾನು ಆಗಲಿ ಎಂದು ಹೇಳಿದ್ದು, ತಮ್ಮ ಜಿಲ್ಲೆಗೂ ಈ ಸವಲತ್ತನ್ನು ವಿಸ್ತರಿಸಿದರೆ ನಾವು ಸ್ವಾಗತಿಸುತ್ತೇವೆ. ಅದೇ ರೀತಿ ಸಿಂಧನೂರಿನ ಹಂಪನಗೌಡರಿಗೆ ಕೊಟ್ಟರೂ ಅದರಲ್ಲಿ ನಮ್ಮ ತಕರಾರಿಲ್ಲ. ಇನ್ನು ರೈತರು ಬೆಳೆದ ಬೆಳೆಯಬೆಲೆ ಹೋಗುರುತ್ತಿರುವ ಈ ಸಂದರ್ಭದಲ್ಲಿ ಈ ಹಣವನ್ನು ಸಾಕಷ್ಟು ಖರ್ಚು ಮಾಡಿ ಬೆಳೆದಿರುವ ಬೆಳೆ ಕುರಿತು ಹೇಳುವುದಾದರೆ, ಉದಾಹರಣೆಗೆ ಬೆಳೆ ಬೆಳೆಯುವುದಕ್ಕೆ ಹತ್ತು ರೂಪಾಯಿ ಖರ್ಚಾಗಿದ್ದರೆ ಆತನಿಗೆ 7-8 ರೂಪಾಯಿ ಸಿಗತಕ್ಕಂಥ ಪರಿಸ್ಥಿತಿ ಬಂದೊದಗಿರುವುದರಿಂದ ಎಷ್ಟೋ ಜನ ರೈತರು ತಾವು ಬೆಳೆದಿರುವ ಬೆಳೆಗಳನ್ನು ರಸ್ತೆಗೆ ಚೆಲ್ಲತಕ್ಕಂಥ ಪರಿಸ್ಥಿತಿಯನ್ನು ಇವೊತ್ತು ನೋಡಿದ್ದೇವೆ. ಇಂತಹ ಸಂದರ್ಭದಲ್ಲಿ ರೈತಾಪಿ ವರ್ಗಕ್ಕೆ ಅನುಕೂಲವಾಗಲೆಂಬ ದೃಷ್ಟಿಯಿಂದ ಆವರ್ತ ನಿಧಿಯಿಂದ ಒಂದು ನೂರು ಕೋಟಿ ರೂಪಾಯಿಗಳನ್ನು ಮುಂಗಡಪತ್ರದಲ್ಲಿ ತೊಡಗಿಸಲಾಗಿದೆ. ಆದರೆ, ವಿರೋಧ ಪಕ್ಷದ ಸ್ನೇಹಿತರು ಮಾತನಾಡುತ್ತಾ ಸರ್ಕಾರ ಬೆಂಗಳೂರನ್ನು ಸಿಂಗಾಪುರವನ್ನಾಗಿ ಮಾಡಲು ಹೊರಟಿದೆ, ರೈತರನ್ನು ನೋಡುತ್ತಿಲ್ಲ. ಸರ್ಕಾರ ಬೆಂಗಳೂರು ಕಡೆಯೇ ಹೆಚ್ಚು ಲಕ್ಷ್ಯವಿಟ್ಟಿದೆ ಎಂದು ಹೇಳಿದ್ದಾರೆ. ನಾನು ಆಗಲೇ ಪ್ರಸ್ತಾಪಿಸಿರುವಂತೆ ಇವೆಲ್ಲವೂ ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ಕೊಡ ಮಾಡಿರುವ ಯೋಜನೆ ಹೌದೇ ಅಥವಾ ಅಲ್ಲವೇ ಎಂಬುದು ವಿಚಾರ ಮಾಡತಕ್ಕಂಥ ಸಂದರ್ಭ ಇದಾಗಿದೆ. ಇನ್ನು ದೊಡ್ಡ ವಿಚಾರವೆಂದರೆ, ಗ್ರಾಮೀಣಾಭಿವೃದ್ಧಿ. ಇದನ್ನು ಬಹಳ ಸಂತೋಷದಿಂದ ಹೇಳಬೇಕಾಗಿದೆ. ಮಂಡಲ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದಾಗ ಎಂತಹ ಪರಿಸ್ಥಿತಿ ಇತ್ತೆಂಬುದನ್ನು ನೆನೆಪಿಸಿಕೊಳ್ಳಬೇಕು. ಮಂಡಲ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಒಮ್ಮೊಮ್ಮೆ ಹೇಳುತ್ತಿದ್ದರು: ಅಮಾವಾಸ್ಯೆ ದಿವಸ ಕಾಯಿ ಒಡೆಯಲು ಕಾಯಿಗೆ ರೊಕ್ಕವಿಲ್ಲ, ಊದು ಕಡ್ಡಿಗೂ ರೊಕ್ಕವಿಲ್ಲವೆಂಬ ಮಾತು ಕೇಳಿಬರುತ್ತಿತ್ತು. ಇದನ್ನು

ಮನಗಂಡು ಒಂದು ವಿಚಾರವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಗ್ರಾಮಪಂಚಾಯಿತಿಯ ವಿಚಾರ, ಗ್ರಾಮಾಭಿವೃದ್ಧಿಯ ವಿಚಾರ ಬಂದಾಗ ಅಂದಿನ ದಿವಂಗತ ಪ್ರಧಾನಿಯಾದ ಶ್ರೀಮಾನ್ ರಾಜೀವ್‌ಗಾಂಧಿಯವರು ಇದ್ದಂಥ ಸಂದರ್ಭದಲ್ಲಿ ಪಂಚಾಯಿತಿಗಳಿಗೆ ನೇರವಾಗಿ ಹಣವನ್ನು ಮುಟ್ಟಿಸುವ ವ್ಯವಸ್ಥೆ ಮಾಡಿದ್ದರು. ಈ ಸಂದರ್ಭದಲ್ಲಿ ತಾವು ಜ್ಞಾಪಿಸಿಕೊಳ್ಳಬಹುದು. ಪಂಚಾಯಿತಿಗೇನು ಹಣವನ್ನು ಕೊಡುವ ವ್ಯವಸ್ಥೆ ಇದೆ, ಅದು ಜವಹಾರ್ ರೋಜ್‌ಗಾರ್ ಯೋಜನೆಯ ಮೂಲಕ ಖರ್ಚು ಮಾಡತಕ್ಕದ್ದು ಇರಬಹುದು. ಅಥವಾ ಇನ್ನ್ಯಾವುದೇ ವಿಚಾರದಲ್ಲಿ ಹಣವನ್ನು ಖರ್ಚುಮಾಡುವ ವಿಚಾರವಿರಬಹುದು. ಆ ಹಣಕಾಸಿನ ಅನುಕೂಲತೆಯನ್ನು ನೇರವಾಗಿ ಪಂಚಾಯಿತಿಗಳಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿದ್ದರು. ನಮ್ಮ ಸರ್ಕಾರ ಬಂದ ಮೇಲೆ ಒಂದು ಲಕ್ಷ ರೂ. ಇದ್ದ ಅನುದಾನವನ್ನು ಮೂರೂವರೆ ಲಕ್ಷ ರೂಪಾಯಿಗಳಿಗೆ ಏರಿಸಿದ್ದು ಆ ಗ್ರಾಮಪಂಚಾಯಿಗೆ ಕೊಡುವಂಥ ಆರ್ಥಿಕ ಸದೃಢತೆಯ ದ್ಯೋತಕವಾಗಿದೆ. ಅವರು ಹಾಕಿಕೊಳ್ಳುವ ಕಾರ್ಯಕ್ರಮಗಳಿಗೆ ಅನುದಾನದ ಅನುಕೂಲತೆ ಇದಾಗಿದೆ. ಇವತ್ತು ಈ ಮುಂಗಡ ಪತ್ರದಲ್ಲಿ ಗ್ರಾಮ ಪಂಚಾಯಿತಿಯ ಆರ್ಥಿಕ ಸಬಲತೆಗಾಗಿ ಐದು ಲಕ್ಷ ರೂ.ಗಳ ಅನುದಾನ ಕೊಡಮಾಡಿರುವುದನ್ನು ನೋಡಿದರೆ ಗ್ರಾಮಪಂಚಾಯಿತಿಯ ಬಗ್ಗೆ, ಗ್ರಾಮೀಣ ಪ್ರದೇಶದ ಬಗ್ಗೆ, ನಮ್ಮ ಸರ್ಕಾರ ಹೊಂದಿರತಕ್ಕಂಥ ಕಾಳಜಿ ಎಷ್ಟು ಎನ್ನುವಂಥದ್ದು ಮುಂಗಡ ಪತ್ರದಲ್ಲಿ ಕಂಡುಬರುತ್ತದೆ. ಇದರ ಜೊತೆಗೆ ಸ್ವಚ್ಛ ಗ್ರಾಮ ಯೋಜನೆ. ತಮ್ಮ ಅಧಿಕಾರದ ಸಮಯದಲ್ಲಿ ಇದನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಲಿಲ್ಲವೆ? 1300 ಗ್ರಾಮಗಳಲ್ಲಿ ಸ್ವಚ್ಛ ಗ್ರಾಮ ಕಾರ್ಯಕ್ರಮ ನಡೆದಿದ್ದು ಶೇಕಡ 70 ರಿಂದ 80 ಪರ್‌ಸೆಂಟ್ ಕೆಲಸ ಪೂರ್ಣವಾಗಿದೆ. ರಸ್ತೆಗಳು ಶೌಚಾಲಯ ಡೋಬೀಘಾಟ್ ಮಾಡತಕ್ಕ ವಿಚಾರದಲ್ಲಿ ಈ ಯೋಜನೆಗಳನ್ನು ಅಳವಡಿಸಿಕೊಳ್ಳತಕ್ಕ ವಿಚಾರ ಹಿಂದೆ ಬರಲಿಲ್ಲವೇ? ಇವತ್ತು 1300 ಗ್ರಾಮಪಂಚಾಯಿತಿಗಳಲ್ಲಿ ಸ್ವಚ್ಛ ಗ್ರಾಮ ಕಾರ್ಯಕ್ರಮ ನಡೆದು ಸುಮಾರು 18 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಪ್ರತಿ ಗ್ರಾಮಪಂಚಾಯಿತಿಗೆ ಅವರ ಎರಡು ಲಕ್ಷ ರೂಪಾಯಿಗಳ ಸೇರ್ಪಡೆಯೊಂದಿಗೆ ಕೊಡುವಂತೆ ಇವತ್ತು ಮಾಡಿರತಕ್ಕ ಯೋಜನೆ. ಇವತ್ತು ಬಹಳಷ್ಟು ಗ್ರಾಮ ಪಂಚಾಯಿತಿಗಳಲ್ಲಿ ತಾವು ಓಡಾಡಿದರೆ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ನೋಡುತ್ತೀರಿ, ಡಾಂಬರ್ ಮಾಡಿರುವ ರಸ್ತೆಗಳನ್ನು ನೋಡುತ್ತೀರಿ, ಈ ರೀತಿ ಯಶಸ್ವಿಯಾಗಿರತಕ್ಕಂಥ ಉತ್ತಮವಾಗಿರತಕ್ಕಂಥ ಗ್ರಾಮೀಣ ಪ್ರದೇಶದಲ್ಲಿ ಕೊಡುಗೆ ಮಾಡಿರುವ ಯೋಜನೆ ಸ್ವಚ್ಛ ಗ್ರಾಮ ಯೋಜನೆ. ಆ ಸ್ವಚ್ಛ ಗ್ರಾಮ ಯೋಜನೆಯನ್ನು ಈ ವರ್ಷವೂ ಕೂಡ ಮುಂದುವರೆಸಿ ಮತ್ತೆ 1000 ಗ್ರಾಮ ಪಂಚಾಯಿತಿಗಳನ್ನು ಇದರಲ್ಲಿ ಅಳವಡಿಸತಕ್ಕಂಥ ಆಲೋಚನೆಯನ್ನು ಒಳಗೊಂಡ ಮುಂಗಡಪತ್ರವನ್ನು ತಮ್ಮೆದುರಿಗೆ ನಮ್ಮ ಸರ್ಕಾರ ಕೊಟ್ಟಿದೆ. ಇದರ ಜೊತೆಗೆ ನೈತಿಕವಾದ ಶಕ್ತಿ ಬರಲಿ ಎಂಬ ದೃಷ್ಟಿಯಿಂದ ಪಂಚಾಯಿತಿಯ ಅಧ್ಯಕ್ಷರಿಗಿದ್ದ ಸಂಬಳವನ್ನು 350 ರೂಪಾಯಿಗಳಿಂದ 500 ರೂಪಾಯಿಗಳಿಗೆ ಏರಿಸಿರತಕ್ಕದ್ದು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕೂಡ ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಬಳಕೆ ನೀರಿನ ವ್ಯವಸ್ಥೆಯಾಗಲಿ ಸಮರ್ಪಕವಾಗಿ ಇಲ್ಲದೆ ನಾವೆಲ್ಲರೂ ಸಂಕಷ್ಟದಲ್ಲಿ ಇದ್ದೇವೆ. ಸ್ವಚ್ಛ ಗ್ರಾಮ ಯೋಜನೆಯಲ್ಲಿ 4 ರಿಂದ 5 ಲಕ್ಷ ರೂ. ಹಣವನ್ನು

ಶೌಚಾಲಯಕ್ಕಾಗಿ ವಿನಿಯೋಗ ಮಾಡಿದ್ದಾರೆ, ಶೌಚಾಲಯ ಕಟ್ಟಿದಮೇಲೆ ನೀರಿನ ವ್ಯವಸ್ಥೆಯನ್ನು ಮಾಡದಿರುವುದರಿಂದ ಈ ಹಣ ವ್ಯರ್ಥವಾಗುತ್ತದೇನೋ ಎಂಬ ಸಂಶಯ ನನಗೆ ಬರುತ್ತಿದೆ. ಆದ್ದರಿಂದ ಶೌಚಾಲಯಕ್ಕೇನು 4 ರಿಂದ 5 ಲಕ್ಷ ರೂ. ಹಣವನ್ನು ಖರ್ಚು ಮಾಡುತ್ತಿದ್ದೀರಿ ಅದರಲ್ಲಿ ಅರ್ಧದಷ್ಟು ಹಣವನ್ನು ಕಡಿತ ಮಾಡಿ ಇನ್ನು ಅರ್ಧದಷ್ಟನ್ನು ರಸ್ತೆಗಳಿಗೆ ಉಪಯೋಗ ಮಾಡಿದರೆ ಅನುಕೂಲವಾಗುತ್ತದೆನೋ ಎಂಬುದು ನನ್ನ ಪ್ರಾಕ್ಟಿಕಲ್ ಅನುಭವ. ಏಕೆಂದರೆ ನಮ್ಮ ಗ್ರಾಮದಲ್ಲಿ ಶೌಚಾಲಯಗಳನ್ನು ಕಟ್ಟಿದ್ದೇವೆ, ಅವುಗಳು ಉಪಯೋಗವಾಗುತ್ತಿಲ್ಲ. ಆಶ್ರಯ ಮನೆಗಳಲ್ಲಿ ಶೌಚಾಲಯ ಕಟ್ಟತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದು ಉಪಯೋಗವಾಗುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಆಶ್ರಯ ಮನೆಯಲ್ಲಿರುವವರಿಗೆ ಕುಡಿಯುವ ನೀರಿಗೇ ದುಸ್ಥಿತಿಯಿರುವಾಗ ಶೌಚಾಲಯವನ್ನು ಸ್ವಚ್ಛ ಮಾಡಲು ನೀರು ತರುವುದು ಬಹಳ ಕಷ್ಟ. ಅದೆಲ್ಲಾ ಕಟ್ಟಿಗೆ, ಕುಡ್ಲು, ಬುಟ್ಟಿ ಇಡಲು ಮಾತ್ರ ಉಪಯೋಗವಾಗುತ್ತದೆ. ಇಲ್ಲಿ ಎಲ್ಲಾ ವ್ಯವಸ್ಥೆಗಳಿರುವವರ ಮಧ್ಯೆ ವಿಷಯ ಚರ್ಚೆಯಾಗಿ ಯೋಜನೆ ರೂಪು ಗೊಳ್ಳುವುದಾಗಿರುತ್ತದೆ.ಇಂದಿರಾನಗರ, ರಾಜಾಜಿನಗರ, ಜೀವನ್ ಭೀಮಾನಗರದಲ್ಲಿ ಮನೆ ಇರತಕ್ಕವರೆಲ್ಲರಿಗೂ 24 ಗಂಟೆಗಳ ಕಾಲ ಸಾಕಷ್ಟು ಪ್ರಮಾಣದಲ್ಲಿ ನೀರಿನ ವ್ಯವಸ್ಥೆ ಇದೆ. ಅವರಿಗೆ ಫ್ಲಶಿಂಗ್ ವ್ಯವಸ್ಥೆ ಇದೆ; ಕರ್ನಾಟಕದಲ್ಲಿ ಎಲ್ಲಾ ಕಡೆಯೂ ಇರುತ್ತದೆ. ಎಂಬ ಭ್ರಮೆ ಇರುತ್ತದೆ ಹಳ್ಳಿಗಳಲ್ಲಿರುವಂಥ ಶೌಚಾಲಯಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಲು ಅಸಾಧ್ಯವಾಗಿರುವ ಕಾರಣದಿಂದ, ಮಹಿಳೆಯರ ಸಲುವಾಗಿ ಪ್ರಮುಖವಾಗಿ ಮಾಡಬೇಕಾಗಿರುವಂಥದ್ದು, ಪಾರಂಪಾರಿಕವಾಗಿ ಏನು ಮೊದಲಿನಿಂದ ಬಂದಿರತಕ್ಕಂಥ ದೊಡ್ಡ ಕಾಂಪೌಂಡ್ ಕಟ್ಟಿಸತಕ್ಕ ವ್ಯವಸ್ಥೆ ಇದೆ ಅದೇ ನಮ್ಮಲ್ಲಿ ಇವತ್ತು ಯಶಸ್ವಿಯಾಗಿ ಇರತಕ್ಕದ್ದು. ನಾಳೆ ನೀರಿನ ವ್ಯವಸ್ಥೆಯಾದ ಮೇಲೆ, ಸಾಕಷ್ಟು ಪ್ರಮಾಣದಲ್ಲಿ ನೀರು ಬಂದಮೇಲೆ ಅದನ್ನು ಮಾಡಬಹುದು. ಆದರೆ ಈಗ ತಾತ್ಕೂರ್ತಿಕವಾಗಿ ಶೌಚಾಲಯದ ಸಲುವಾಗಿ ಖರ್ಚು ಮಾಡುವ ಅರ್ಧದಷ್ಟು ರಸ್ತೆಗಳಿಗೆ ವಿನಿಯೋಗ ಮಾಡಿದರೆ ಅನುಕೂಲವಾಗಬಹುದು ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಪ್ರಾಥಮಿಕ ಶಾಲೆಯ ವಿಚಾರದಲ್ಲಿ ಹೇಳುವುದಾದರೆ, ಯಾರು ಅನಾನುಕೂಲತೆಯಿಂದ, ಆರ್ಥಿಕ ದುಸ್ಥಿತಿಯಿಂದ ಶಾಲೆಗೆ ಬರಲು ಬಿಟ್ಟಿರುತ್ತಾರೋ, ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ದುಡಿಯತಕ್ಕವರು ಯಾರು ಎಂಬ ಚಿಂತೆಯೇನು ಕೆಲವು ಕುಟುಂಬಗಳಿಗೆ ಇವತ್ತು ಇದೆ ಅದನ್ನು ನಿವಾರಣೆ ಮಾಡಲು ಏಳು ಜಿಲ್ಲೆಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ. ಯಾವುದೇ ಯೋಜನೆ ಪ್ರಾರಂಭಿಕ ಹಂತದಲ್ಲಿ ಸ್ವಲ್ಪ ಅನಾನುಕೂಲತೆಯಾಗುವುದು ಸ್ವಾಭಾವಿಕ ಅಡಚಣೆಯಾಗತಕ್ಕದ್ದು ಸ್ವಾಭಾವಿಕ. ಹೊಸ ಊರಿಗೆ ಹೋದಾಗ, ಹೊಸ ಮನೆಗೆ ಹೋದಾಗ ಯಾವ ರೀತಿಯಲ್ಲಿ ಅನಾನುಕೂಲತೆಗಳಾಗುತ್ತದೋ ಹಾಗೇ ಆಗುತ್ತದೆ. ಆದರೆ ಏಳು ಜಿಲ್ಲೆಗಳಲ್ಲಿ ಮಾಡಿರತಕ್ಕಂಥ ಮಧ್ಯಾಹ್ನದ ಊಟದ ವ್ಯವಸ್ಥೆಯಿಂದ ಏನಾಗಿದೆಯೆಂದರೆ, ಧ್ವನಿ ಇದ್ದವರು ಶಾಲೆಗಳೆಲ್ಲಾ ಹೋಗಿ ಅಡುಗೆಮನೆಯಾಗಿದೆ, ಇದನ್ನೇಕೆ ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ನಿಜವಾಗಿಯೂ ಅದರ ಪ್ರಯೋಜನವನ್ನು ಪಡೆದುಕೊಳ್ಳತಕ್ಕವರು, ನಮ್ಮಂಥವರು ಬಂದಾಗ ಮಾತನಾಡಲು ಧ್ವನಿ ಇಲ್ಲದಿರತಕ್ಕವರು ಆ ರೀತಿ ಮಾತನಾಡಲು ಸಾಧ್ಯವಿಲ್ಲ. ವರು ಕೂಲಿ ಕೆಲಸಕ್ಕೆ ಹೋಗಿರುತ್ತಾರೆ. ಕೂಲಿನಾಲಿ

ಮಾಡಿದಂಥವರನ್ನು ಕೇಳಿದಾಗ, ನೀವು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಿದಾಗಿನಿಂದ ನನ್ನ ಮಕ್ಕಳನ್ನು ನಾನು ಶಾಲೆಗೆ ಕಳುಹಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಏಕೆಂದರೆ,ಒಂದು ಕುಟುಂಬದಲ್ಲಿ ಸುಮಾರು ಐದಾರು ಜನ ಮಕ್ಕಳು ಇರುತ್ತಾರೆ. ಅದರಲ್ಲಿ ಹತ್ತು ಹನ್ನೆರಡು ವರ್ಷಗಳಾದ ಮಕ್ಕಳನ್ನು, ಅವರ ಹಿಂದೆ ಇರುವ ಮಕ್ಕಳ ಊಟದ ವ್ಯವಸ್ಥೆಯಾಗಲಿ ಎಂದು ಕೂಲಿಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಹಳ್ಳಿಗಾಡಿನಲ್ಲಿದೆ. ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಪ್ರಾರಂಭ ಮಾಡಿದಾಗಿನಿಂದ ಒಂದು ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆಯಲ್ಲಿ ಶೇಕಡ 10ರಷ್ಟು ಸಂಖ್ಯೆ ಜಾಸ್ತಿಯಾಗಿದೆ. ಇದು ಸಾಮಾಜಿಕವಾಗಿರತಕ್ಕಂಥ ನ್ಯಾಯ. ಯಾವ ಮಕ್ಕಳು ತಮ್ಮ ಉಪಜೀವನಕ್ಕಾಗಿ, ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ, ಶಿಕ್ಷಣದಿಂದ ವಂಚಿತರಾಗಿದ್ದಂಥ ವ್ಯವಸ್ಥೆಯೇನಿತ್ತೋ ಆ ವ್ಯವಸ್ಥೆಯನ್ನು ಬದಲಾವಣೆ ಮಾಡುವುದೇ ಸಾಮಾಜಿಕ ನ್ಯಾಯ. ಈ ಕಾರಣದಿಂದ ಮಕ್ಕಳು ಶಾಲೆಗೆ ಬರುತ್ತಿಲ್ಲ. ಹಾಗಾದರೆ ಊಟದ ವ್ಯವಸ್ಥೆ ಮಾಡಿದರೆ ಇವರೂ ಅಕ್ಷರಜ್ಞಾನಿಗಳಾಗುತ್ತಾರಲ್ಲಾ ಎಂಬ ಮುಂದಾಲೋಚನೆಯನ್ನು ಸರ್ಕಾರ ಇಟ್ಟುಕೊಂಡು ಏಳು ಜಿಲ್ಲೆಗಳಲ್ಲೇನು ಆ ವ್ಯವಸ್ಥೆಯನ್ನು ಮಾಡಿತ್ತು, ಅದು ಯಶಸ್ವಿಯಾಗಿರುವುದನ್ನು ಕಂಡೇ ಇಡೀ ರಾಜ್ಯದಲ್ಲಿ ಒಂದರಿಂದ ಐದನೇ ತರಗತಿಯವರೆಗೆ ನಮ್ಮ ಸರ್ಕಾರ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಅಕ್ಷರ ದಾಸೋಹ ಎಂಬ ಯೋಜನೆ ಅಡಿಯಲ್ಲಿ ತಂದಿರತಕ್ಕದ್ದು ಶಿಕ್ಷಣದ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕು ಎಂಬ ವಿಚಾರದಲ್ಲಿ ಮುಂದೆ ಹೆಜ್ಜೆಯನ್ನಿಟ್ಟಿದೆ. ಇದೇ ವಿಚಾರದಲ್ಲಿ, ಇವತ್ತು ಊಟ ಕೊಡುವುದು ಮುಖ್ಯವಲ್ಲ, ಅದರ ಜೊತೆಗೆ ಅಗತ್ಯವಿರುವ ಶಿಕ್ಷಕರು, ಶಾಲಾಕೊಠಡಿ ಇವುಗಳನ್ನೂ ಕೊಡತಕ್ಕದ್ದು ಬಹಳ ಮುಖ್ಯವಾಗಿರತಕ್ಕದ್ದು. ಇವತ್ತು ನೀರಾವರಿಯ ಮೂಲಕ, ರಸ್ತೆಗಳ ಮೂಲಕ, ಗ್ರಾಮೀಣ ಅಭಿವೃದ್ಧಿಯ ಮೂಲಕ ಒಂದು ರಾಜ್ಯದ ಅಭಿವೃದ್ಧಿ ಎದ್ದು ಕಾಣುತ್ತದೆ. ನಮ್ಮ ಸರ್ಕಾರದ ಸಾಧನೆಯ ಒಂದು ಸಣ್ಣ ಪಕ್ಷಿನೋಟವನ್ನು ತಮ್ಮ ಗಮನಕ್ಕೆ, ರಾಜ್ಯದ ಜನತೆಯ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ. ನಮ್ಮ ಸರ್ಕಾರ ಬರುವುದಕ್ಕಿಂತ ಮೊದಲು ಕೃಷ್ಣಭಾಗ್ಯ ಜಲನಿಗಮದಲ್ಲಿ 5315 ಕೋಟಿ ರೂ. ಹಣವನ್ನು ಒಟ್ಟಾರೆಯಾಗಿ ಖರ್ಚು ಮಾಡಲಾಗಿತ್ತು. ಆದರೆ ನಮ್ಮ ಸರ್ಕಾರದ ಮೂರು ವರ್ಷದ ಅಧಿಕಾರ ಅವಧಿಯಲ್ಲಿ 4027 ಕೋಟಿ ರೂ. ಹಣವನ್ನು ಕೃಷ್ಣಭಾಗ್ಯ ಜಲ ನಿಗಮದ ಮೂಲಕ ಕೃಷ್ಣ ಬೇಸಿನ್‌ನ ನೀರಾವರಿಗಾಗಿ ಖರ್ಚು ಮಾಡಿರುವಂಥದ್ದು ಏನಿದೆ ಇದು ಸಾಧನೆಯಲ್ಲವೇ? ಸುಮಾರು ನಲವತ್ತು ವರ್ಷಗಳಲ್ಲಿ ಖರ್ಚು ಮಾಡಿರುವಂಥ ಹಣ 5315 ಕೋಟಿ ರೂ.ಗಳು ಆದರೆ ಕೇವಲ ಮೂರು ವರ್ಷಗಳಲ್ಲಿ ನಾವು 4027 ಕೋಟಿ ರೂಪಾಯಿ ಹಣವನ್ನು ಇದರಲ್ಲಿ ಖರ್ಚು ಮಾಡಿರತಕ್ಕದ್ದು ಒಂದು ಸಾಧನೆಯಲ್ಲವೇ? ಕರ್ನಾಟಕ ನೀರಾವರಿ ನಿಗಮದ ಮೂಲಕ ಈ ಮೊದಲು 1028 ಕೋಟಿ ರೂ.ಗಳನ್ನು ಒಟ್ಟಾರೆಯಾಗಿ ಖರ್ಚು ಮಾಡಿದ್ದರೆ ಮೂರು ವರ್ಷದ ನಮ್ಮ ಅಧಿಕಾರ ಅವಧಿಯಲ್ಲಿ 998 ಕೋಟಿ ರೂ. ಹಣವನ್ನು ನೀರಾವರಿ ನಿಗಮದ ಮೂಲಕ ರಾಜ್ಯದ ನೀರಾವರಿ ಯೋಜನೆಗೆ ಖರ್ಚು ಮಾಡಿರುವುದು ಏನಿದೆ ಇದು ಅಭಿವೃದ್ಧಿಯ ಕೆಲಸವಲ್ಲವೇ?

6.40 ಪಿ.ಎಂ

ಕಳೆದ ಮೂರುವರ್ಷಗಳಲ್ಲಿ ನಾವು ಇಲ್ಲಿಯವರೆಗೆ ಒಟ್ಟು 6 ಲಕ್ಷದ 64 ಸಾವಿರ ಹೆಕ್ಟೇರ್‌ಗೆ ನೀರನ್ನು ಕೊಟ್ಟಿರತಕ್ಕಂಥದ್ದು. ಇದು ಅಭಿವೃದ್ಧಿಯಲ್ಲವೆ? ಇದು ಸಾಧನೆಯಲ್ಲವೆ? ಮಾನ್ಯ ಉಪಾಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಲು ಬಯಸುತ್ತೇನೆ. ಇಂಡಿ ಬ್ರ್ಯಾಂಚ್ ಕೆನಾಲ್‌ನಲ್ಲಿ ಕಳೆದ ನಾಲ್ವತ್ತು:ಐವತ್ತು ವರ್ಷಗಳಲ್ಲಿ ಕೇವಲ 65 ಕಿ.ಮೀ.ವರೆಗೆ ಮಾತ್ರ ಕಾಲುವೆ ನಿರ್ಮಾಣವಾಗಿತ್ತು. ಆದರೆ ನಮ್ಮ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ 66ನೇ ಕಿ.ಮೀ. ನಿಂದ 172ನೇ ಕಿ.ಮೀ. ವರೆಗೆ ಕಾಲುವೆ ನಿರ್ಮಾಣವಾಗಿದೆ. ಇದು ಸಾಧನೆಯಲ್ಲವೇ? ಮುಲ್ಲಾಮಾರಿ ಯೋಜನೆ, ಮಸ್ಕಿನಾಲಾ ಯೋಜನೆ, ಹಿರೇಹಳ್ಳ ಯೋಜನೆ, ದಂದೂರಿನಾಲಾ ಯೋಜನೆ, ಹರಿನಾಲಾ ಯೋಜನೆ ಘಟಪ್ರಭಾ ಯೋಜನೆಗಳೇನು ಇವೆ ಇವೆಲ್ಲಾ 1973-74ರ ಬರಗಾಲದ ಸಂದರ್ಭದಲ್ಲಿ ಪ್ರಾರಂಭವಾಗಿದ್ದ ಆ ಯೋಜನೆಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಶೇಕಡ 50 ರಷ್ಟು ಪೂರ್ತಿ ಮಾಡಿ ಜನತೆಯ ಕೈಗೆ ಕೊಟ್ಟಿದ್ದಾರೆ. ಇದು ಮೂರು ವರ್ಷದಲ್ಲಿ ಮಾಡಿರುವಂಥ ಕೆಲಸ. ಇನ್ನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ, ಘಟಪ್ರಭ ಯೋಜನೆ ಏನಿತ್ತು ಅದರಲ್ಲಿ ಕೇವಲ 60 ಕಿ.ಮೀ. ವರೆಗೆ ಮಾತ್ರ ಕಾಲುವೇ ಮಾಡಲಾಗಿತ್ತ. ಅಂದರೆ 40 ವರ್ಷಗಳ ಕಾಲದಲ್ಲಿ ಕೇವಲ 60 ಕಿ.ಮೀ. ನಾಲಾ ಕೆಲಸ ಮಾತ್ರವಾಗಿತ್ತು. ಆದರೆ ಕಳೆದ ಮೂರು ವರ್ಷದ ಅವಧಿಯಲ್ಲಿ 61ನೇ ಕಿ.ಮೀ. ನಿಂದ 120ಸೇ ಕಿ.ಮೀ ವರೆಗೆ ನಾಲಾ ಕೆಲಸವನ್ನು ಮಾಡಲಾಗಿದೆ. ಇದು ಸುಧಾರಣೆಯಲ್ಲವೆ? ಇದು ಯೋಜನೆಯಲ್ಲವೆ? ಇನ್ನು ರಸ್ತೆ ಬಗ್ಗೆ ತಾನೇ ಯೋಜನೆ ಮಾಡಿ, ಒಂದೊಂದು ಮತಕ್ಷೇತ್ರದಲ್ಲೂ ಕೂಡ ನಬಾರ್ಡ್ ಮೂಲಕ ಸಾಕಷ್ಟು ಪ್ರಮಾಣದಲ್ಲಿ ರಸ್ತೆ ಡಾಂಬರೀಕರಣವಾಗಿದೆ. ಇನ್ನು ಕೊನೆಯದಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಯತ್ತ ನಮ್ಮ ಸರ್ಕಾರ ಯಾವ ದಿಟ್ಟ ನಿಲುವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತನೆ. ಡಾ|| ನಂಜುಂಡಪ್ಪನವರ ಸಮಿತಿ ರಚನೆಯಾಗಿದ್ದು ಯಾವ ಸಂದರ್ಭದಲ್ಲಿ? ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಬಾಂಬೆ-ಕರ್ನಾಟಕಕ್ಕೆ ಅನ್ಯಾಯವಾಗಿದೆ, ಹೈದ್ರಾಬಾದ್-ಕರ್ನಾಟಕಕ್ಕೆ ಅನ್ಯಾಯವಾಗಿದೆ ಎನ್ನತಕ್ಕಂಥದ್ದನ್ನು ಒಪ್ಪಿಕೊಂಡದ್ದೇ ನಮ್ಮ ಸರ್ಕಾರ. ಸನ್ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಮೊಟ್ಟಮೊದಲನೆಯದಾಗಿ ಈ ಭಾಗಕ್ಕೆ ಅನ್ಯಾಯವಾಗಿದೆ ಎನ್ನುವಂಥದ್ದನ್ನು ಲಿಖಿತವಾಗಿ ಒಪ್ಪಿಕೊಂಡಂಥದ್ದು ಮೊಟ್ಟಮೊದಲನೆಯದಾಗಿ ನಮ್ಮ ಸರ್ಕಾರ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಈ ಮುಂಚೆ ಯಾವ ಸರ್ಕಾರವು ಕೂಡ ಆಗಿರಬಹುದು, ಆಗಿದ್ದೀತು, ಆಗಿರಬಹುದು, ಆಗಿದ್ದೀತು ಎನ್ನತಕ್ಕಂಥ ಚರ್ಚೆಯಲ್ಲಿಯೇ ಮುಳುಗಿದ್ದರೇ ಹೊರತು, ಹೌದು, ಇಲ್ಲಿ ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು ಎನ್ನತಕ್ಕಂಥದ್ದನ್ನು ಮೊಟ್ಟಮೊದಲನೆಯದಾಗಿ ನಮ್ಮ ಸರ್ಕಾರ ಒಪ್ಪಿಕೊಂಡಿರತಕ್ಕಂಥದ್ದು ಪ್ರಮುಖವಾದ ವಿಚಾರ. ಅದನ್ನು ಒಪ್ಪಿಕೊಂಡು ನಂಜುಂಡಪ್ಪನವರ ಸಮಿತಿಯುನ್ನು ಮಾಡಿರತಕ್ಕಂಥದ್ದು ಪ್ರಥಮವಾಗಿರತಕ್ಕಂಥದ್ದು. ಇವಿಷ್ಟಕ್ಕೆ ಸುಮ್ಮನಾಗಲಿಲ್ಲ, ಅದರ ಜೊತೆಗೆ ಸುಮಾರು ಎರಡು ವರ್ಷದ ಹಿಂದೆ ನೈರುತ್ಯ ವಲಯದ ನಿರ್ದೇಶನಾಲಯವನ್ನು ಮಾಡಿದರು. ಆದರೆ ಅನುಕೂಲತೆ ಹೇಗಾಗಿದೆ ಎಂಬ ಬಗ್ಗೆ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಆ ಭಾಗದಲ್ಲಿ ಬರುವ ಏಳು ಜಿಲ್ಲೆಗಳಿಗೆ ಸಾಕಷ್ಟು ಹೈಸ್ಕೂಲ್‌ಗಳನ್ನು ಕೊಟ್ಟರು. ಸುಮಾರು 25 ವರ್ಷಗಳಿಂದ ಅಲ್ಲಿ

ಎಲ್ಲಿ ಹೈಸ್ಕೂಲ್‌ಗಳನ್ನು ಕೊಟ್ಟಿದ್ದರು ಅಲ್ಲಿ ಈವರೆವಿಗೆ ಕಟ್ಟಡ ಇಲ್ಲ ಆದರೆ ನೈರುತ್ಯ ವಲಯ ಆದಮೇಲೆ ಅಲ್ಲಿ ಹೈಸ್ಕೂಲ್‌ಗಳನ್ನು ಕೊಟ್ಟಮೇಲೆ ಎರಡೇ ವರ್ಷದಲ್ಲಿ ಒಂದೊಂದು ಹೈಸ್ಕೂಲ್‌ಗೆ ಎರಡರಿಂದ ಮೂರು ಕೊಠಡಿಗಳನ್ನು ಕಟ್ಟಿಸಿಕೊಟ್ಟಿರತಕ್ಕಂಥದ್ದು ನಾವು ಇವೊತ್ತು ನೋಡುತ್ತಿದ್ದೇವೆ. ಇದು ಸುಧಾರಣೆಯಲ್ಲವೆ? ಇದು ಉತ್ತರ ಕರ್ನಾಟಕಕ್ಕೆ ಕೊಟ್ಟಿರತಕ್ಕಂಥ ಕೊಡುಗೆಯಲ್ಲವೆ? ಬಿಜಾಪುರಕ್ಕೆ ಮಹಿಳಾ ಕಾಲೇಜ್‌ನ್ನು ಕೊಟ್ಟಿರತಕ್ಕಂಥದ್ದು, ಬೀದರ್‌ಗೆ ಪಶು ವಿಶ್ವವಿದ್ಯಾಲಯವನ್ನು ಕೊಟ್ಟಿರತಕ್ಕಂಥದ್ದು, ಇವೊತ್ತು ಹುಬ್ಬಳ್ಳಿಯಲ್ಲಿ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯನ್ನು ಕೊಟ್ಟಿರತಕ್ಕಂಥದ್ದು, ನಗರ ನೀರು ಸರಬರಾಜು ಯೋಜನೆಯ ಒಂದು ಘಟಕವನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭ ಮಾಡಲು ಮುಂಗಡಪತ್ರದಲ್ಲಿ ಅವಕಾಶ ಮಾಡಿಕೊಟ್ಟಿರತಕ್ಕಂಥದ್ದು, ಹೈಕೋರ್ಟ್ ಪೀಠಕ್ಕೆ ಹತ್ತು ಕೋಟಿ ರೂ. ಕೊಡತಕ್ಕಂಥ ಯೋಜನೆಗೆ ಒತ್ತು ಕೊಟ್ಟಿರತಕ್ಕಂಥದ್ದು, ಇವೆಲ್ಲವನ್ನು ನೋಡಿದರೆ ಈ ನಮ್ಮ ಸರ್ಕಾರ ಹಿಂದೆ ಪ್ರದೇಶಾಭಿವೃದ್ಧಿಯಲ್ಲಿ ತಾರತಮ್ಯವೇನಿತ್ತು ಅದನ್ನು ಹೋಗಲಾಡಿಸಬೇಕು ಎನ್ನತಕ್ಕಂಥ ಸ್ಪಷ್ಟವಾದ ನಿಲುವನ್ನು ಹೊಂದಿದೆ ಎಂದು ಗೊತ್ತಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಉತ್ತರ ಕಾರ್ನಾಟಕ, ದಕ್ಷಿಣ ಕರ್ನಾಟಕ ಎಂದು ತಾರತಮ್ಯ ಮಾಡದೇ ತಲೆತಲಾಂತರಗಳಿಂದ ಬಂದಿರತಕ್ಕಂಥ ಈ ತಾರತಮ್ಯವನ್ನು ಹೋಗಲಾಡಿಸಲು ಮುಖ್ಯವಾಗಿ, ಪ್ರಥಮವಾಗಿ ಹಜ್ಜೆಯನ್ನು ಇಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಡೀ ಉತ್ತರ ಕರ್ನಾಟಕದ ಜನತೆ ಪರವಾಗಿ ಈ ಮುಂಗಡಪತ್ರದಲ್ಲಿ ಇಷ್ಟೊಂದು ಸವಲತ್ತು ಕೊಟ್ಟಿರುವುದಕ್ಕೆ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸಿ ಕೊನೆಯಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಈ ಹಿಂದೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದೆ. ಆ ಮಾತನ್ನು ನಾನು ಹಿಂದಕ್ಕೆ ಪಡೆಯುತ್ತೇನೆ. ಒಬ್ಬರಿಗೆ ರೊಟ್ಟಿ ಚಟ್ನಿ, ಒಬ್ಬರಿಗೆ ಹೋಳಿಗೆ ತುಪ್ಪ ಎನ್ನತಕ್ಕಂಥ ಮಾತನ್ನು ಹೇಳಿದ್ದೆ. ಉತ್ತರ ಕರ್ನಾಟಕದವರಿಗೆ ರೊಟ್ಟಿ ಚಟ್ನಿ ಕೊಡತಕ್ಕಂಥದ್ದು, ಈ ಕಡೆಯವರಿಗೆ ಹೋಳಿಗೆ ತುಪ್ಪ ಕೊಡತಕ್ಕಂಥದ್ದು ಇದೆಯಲ್ಲಾ ಎನ್ನತಕ್ಕಂಥ ಮಾತು ಬಂತು. ಆದರೆ ಸನ್ಮಾನ್ಯ ಎಸ್.ಎಂ. ಕೃಷ್ಣರವರ ಮೂರು ವರ್ಷದ ಆಡಳಿತದಲ್ಲಿ ಚಟ್ನಿ ರೊಟ್ಟಿ ಇಲ್ಲ, ಇನ್ನು ಹೋಳಿಗೆ ತುಪ್ಪ ಬಂದಿಲ್ಲ, ಚಟ್ನಿ ರೊಟ್ಟಿ ತರಿಸಿಕೊಂಡಿದ್ದಾರೆ, ಚಪಾತಿ, ಬೆಲ್ಲ, ತುಪ್ಪವನ್ನು ಮಾತ್ರ ಈ ಮುಂಗಡಪತ್ರದ ಮೂಲಕ ನಮಗೆ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತಾ ಇನ್ನು ಮುಂದೆ ಬರತಕ್ಕಂಥ ಎರಡು ವರ್ಷಗಳಲ್ಲಿ ಹೋಳಿಗೆ ತುಪ್ಪವನ್ನು ಕೂಡ ಉತ್ತರ ಕರ್ನಾಟಕಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟೇ ಕೊಡುತ್ತಾರೆ ಎನ್ನತಕ್ಕ ವಿಶ್ವಾಸದಿಂದ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ (ಬ್ಯಾಡಗಿ) :- ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದ ಬ್ಯಾಡಗಿ ಕ್ಷೇತ್ರದ ಶಾಸಕನಾದ ನಾನು ಕರ್ನಾಟಕ ರಾಜ್ಯದ 2003-04ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತೇನೆ. ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ ಎನ್ನುವ ಕೂಗು ಮೊದಲಿನಿಂದಲೂ ಕೇಳಿ ಬರುತ್ತಿತ್ತು. ಇದರ ಬಗ್ಗೆ ಈಗಾಗಲೇ ನಂಜಯ್ಯನಮಠ್‌ರವರು ಹೇಳಿದ್ದಾರೆ. ಇವೊತ್ತು ಡಾ ।। ನಂಜುಂಡಪ್ಪನವರ ಸಮಿತಿಯನ್ನು ಸರ್ಕಾರ ನೇಮಿಸಿ ಯಾವ್ಯಾವ

ಜಿಲ್ಲೆಗಳಲ್ಲಿ, ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಕೆಲಸವಾಗಿದೆ, ತಾರತಮ್ಯ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕು, ಅದಕ್ಕೆ ಎಷ್ಟು ಹಣ ಸರ್ಕಾರ ಖರ್ಚು ಮಾಡಬೇಕು ಎನ್ನುವ ವಿಚಾರದಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ವರದಿಯನ್ನು ತರಿಸಿಕೊಂಡು ಅದರ ಮೇಲೆ ಸಾಕಷ್ಟು ಚರ್ಚೆಯನ್ನು ಮಾಡಿ ಉತ್ತರ ಕರ್ನಾಟಕಕ್ಕೆ ಸಾಕಷ್ಟು ಅನುಕೂಲತೆಗಳನ್ನು ಈ ಬಜೆಟ್‌ನಲ್ಲಿ ಮಾಡಿದ್ದಾರೆ. ನಾನು ಈ ಹಿಂದೆ ಪ್ರಪ್ರಥಮವಾಗಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುತ್ತಾ ಮಾತನಾಡುವಾಗ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು, ಏಕೆಂದರೆ ಎಷ್ಟೋ ವರ್ಷಗಳ ಕಾಲದಿಂದ ಸರ್ಕಾರದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿಲ್ಲವೆನ್ನುವ ಅಭಿಪ್ರಾಯವನ್ನು ಹೇಳಿದ್ದೆ. ಅದರಂತೆ ಈಗಾಗಲೇ ಸರ್ಕಾರ ಸುಮಾರು ಹುದ್ದೆಗಳನ್ನು ತುಂಬಿದೆ. ಮತ್ತೆ ಇನ್ನೆರಡ್ಮೂರು ತಿಂಗಳುಗಳಲ್ಲಿ ಉಳಿದಂಥ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ವ್ಯವಸ್ಥೆಯನ್ನು ಮಾಡಿದೆ. ಈ ದಿಸೆಯಲ್ಲಿ ಸರ್ಕಾರವನ್ನು ಸ್ವಾಗತಿಸುತ್ತಾ, ಮುಂಬರುವ ದಿನಗಳಲ್ಲಿ ಇರತಕ್ಕಂಥ ಎಲ್ಲಾ ಹುದ್ದೆಗಳನ್ನು ಸರ್ಕಾರ ತುಂಬಬೇಕು ಎಂದು ಹೇಳುತ್ತೇನೆ. ಇಷ್ಟೇ ಅಲ್ಲದೇ ನಮ್ಮ ಪ್ರಣಾಳಿಕೆಯಲ್ಲಿ 1984 ರಿಂದ 1992ರ ಅವಧಿಯಿಂದಲೂ ಪ್ರಾರಂಭವಾಗಿರುವ ಎಸ್.ಸಿ:ಎಸ್.ಟಿ ಶಿಕ್ಷಣ ಸಂಸ್ಥೆಗಳೇನಿವೆ ಅಂದರೆ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಜ್ಯೂನಿಯರ್ ಕಾಲೇಜುಗಳೇನಿವೆ ಹಾಗೂ ಡಿಗ್ರಿ ಕಾಲೇಜುಗಳೇನಿವೆ ಅವುಗಳಿಗೆ ಅನುದಾನವನ್ನು ಕೊಡತಕ್ಕಂಥ ಮಾತನ್ನು ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದರು. ಅದರಂತೆ ನಮ್ಮ ಮಾನ್ಯ ಮುಖ್ಯಂತ್ರಿಗಳು ಈಗಾಗಲೇ ಒಂದು ಆದೇಶವನ್ನು ಹೊರಡಿಸಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಿಗೆ ಅನುದಾನ ಸಂಹಿತೆಗೆ ಒಳಪಡಿಸಿದ್ದು ಕೂಡ ಹಿಂದಳಿದ ಜನಾಂಗಕ್ಕೆ, ಎಸ್‌ಸಿ:ಎಸ್‌ಟಿ ಜನಾಂಗಕ್ಕೆ ಈ ಸರ್ಕಾರ ಸುಮಾರು 14 ಕೋಟಿ ರೂಪಾಯಿಗಳನ್ನು ಇವೊತ್ತು ಬಿಡುಗಡೆ ಮಾಡಿ ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಅದರ ಮೇಲೆ ಕ್ರಮ ತೆಗೆದುಕೊಂಡಿದೆ. ನಾನು ವಿನಂತಿಸಿರುವುದೇನೆಂದರೆ, ಅದೇ ಅವಧಿಯಲ್ಲಿ ಪ್ರಾರಂಭ ಆಗಿರುವ ಜೂನಿಯರ್ ಕಾಲೇಜುಗಳು ಹಾಗೂ ಡಿಗ್ರಿ ಕಾಲೇಜುಗಳಿಗೂ ಕೂಡ ಅನುದಾನವನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಬಗ್ಗೆ ನಾವು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇವೆ. ಮುಂದಿನ ವರ್ಷಗಳಲ್ಲಿ ಅದನ್ನು ಕೊಡತಕ್ಕಂಥ ಭರವಸೆಯನ್ನು ಕೂಡ ಸನ್ಮಾನ್ಯ ಮುಖ್ಯಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಅವುಗಳಿಗೂ ಕೂಡ ಅನುದಾನವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಮಾತನ್ನು ಕೂಡ ಈ ಸಂಧರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಈಗಾಗಲೇ ಜಲ ನಿರ್ಮಲ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಒಂದು ಜಿಲ್ಲೆಯಲ್ಲಿ ಸಮಗ್ರವಾಗಿ ಪ್ರತಿಯೊಂದು ಗ್ರಾಮಕ್ಕೂ ಕೂಡ ಜನರ ಸಹಯೋಗದೊಂದಿಗೆ, ಅಂದರೆ, ಹತ್ತು ಪರ್ಸೆಂಟ್ ಹಣವನ್ನು ಜನರು ಕಟ್ಟಿದರೆ 90 ಪರ್ಸೆಂಟ್ ಹಣವನ್ನು ವಿಶ್ವಬ್ಯಾಂಕ್ ನೆರವಿನಿಂದ ಕೊಡತಕ್ಕಂಥ ಯೋಜನೆಯನ್ನು ತಂದಿದ್ದಾರೆ. ಅದರಂತೆ ಈ ಕೆಲಸ ಎಲ್ಲಾ ಹಳ್ಳಿಗಳಲ್ಲಿ ನಡೆದಿದೆ. ಹಾಗೆಯೇ ತಾಂಡಗಳು ವಿಶೇಷವಾಗಿ ಐದು ಪರ್‌ಸೆಂಟ್ ಹಣವನ್ನು ಕಟ್ಟಬೇಕು. ಉಳಿದಂಥ 95 ಪರ್‌ಸೆಂಟ್ ಹಣವನ್ನು ಸರ್ಕಾರ ಕೊಟ್ಟು ವಿಶ್ವಬ್ಯಾಂಕ್‌ನ ನೆರವಿನೊಂದಿಗೆ ಸಮಗ್ರ ಅಭಿವೃದ್ಧಿಯನ್ನು ಮಾಡತಕ್ಕ ವ್ಯವಸ್ಥೆಯಲ್ಲಿ ಹೇವೇರಿ ಜಿಲ್ಲೆಯಲ್ಲಿ 26 ತಾಂಡಗಳ ಸಮಗ್ರ

ಅಭಿವೃದ್ಧಿಗಾಗಿ ಸರ್ಕಾರ ಮಾಡಿರುವ ಯೋಜನೆಯನ್ನು ನೋಡಿದರೆ, ಪ್ರತಿಯೊಂದು ಜಿಲ್ಲೆಯಲ್ಲಿ ಡಾ: ಅಂಬೇಡ್ಕರ್ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಸುಮಾರು 18 ಲಕ್ಷ ರೂಪಾಯಿಗಳನ್ನು ಕೊಟ್ಟು ಅಲ್ಲಿನ ಜನರಿಗೆ ಬೇಕಾಗಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡತಕ್ಕಂಥ ಹಿಂದೆಂದೂ ಕಾಣದಂಥ ಅವಕಾಶವನ್ನು ಈ ಸರ್ಕಾರ ಕಲ್ಪಿಸಿಕೊಟ್ಟಿದೆ. ಸರ್ಕಾರಕ್ಕೆ ನನ್ನದೊಂದು ಸಲಹೆ ಏನೆಂದರೆ, ಮುಂದಿನ ದಿನಗಳಲ್ಲಿ ಒಂದೊಂದು ಕ್ಷೇತ್ರದಲ್ಲಿ ಸುಮಾರು 25 ಗ್ರಾಮಗಳನ್ನು ದತ್ತು ಗ್ರಾಮವೆಂದು ಸ್ವೀಕರಿಸಿ, ಅವು ಲಂಬಾಣಿ ತಾಂಡಾಗಳಿರಬಹುದು, ಕೊರಚಕೊರಮರ ಹಟ್ಟಿಗಳಾಗಿರಬಹುದು, ಹರಿಜನ ಕೇರಿಗಳಾಗಿರಬಹುದು, ಹಿಂದುಳಿದ ವರ್ಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಾಲೋನಿಗಳಿಗೆ ಸಮಗ್ರವಾದ ಅಭಿವೃದ್ಧಿ ವ್ಯವಸ್ಥೆಯನ್ನು ಮಾಡಬೇಕು. ಎನ್ನುವುದು ನನ್ನ ಸಲಹೆ. ಆಕಸ್ಮಿಕವಾಗಿ ಗುಡಿಸಲುಗಳಿಗೆ ಬಣವೆಗಳಿಗೆ ಬೆಂಕಿ ಬಿದ್ದರೆ, ಹಟ್ಟಿಗಳಲ್ಲಿ ದನಕರುಗಳು ಸತ್ತರೆ ಹಿಂದಿನ ಕಾನೂನಿನ ಪ್ರಕಾರ ಐದುನೂರು ರೂಪಾಯಿಗಳನ್ನು ಕೊಡುತ್ತಿದ್ದರು. ಆದರೆ ಇವತ್ತಿನ ವ್ಯವಸ್ಥೆಯಲ್ಲಿ ಆ ಐದುನೂರು ರೂಪಾಯಿಯನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ಏನನ್ನೂ ಕೊಡಲಾರದ ಪರಿಸ್ಥಿತಿಯಲ್ಲಿದೆ. ನಾವು ಅನೇಕ ಕಡೆಗಳಲ್ಲಿ ತಹಶೀಲ್ದಾರರು, ಅಸಿಸ್ಟೆಂಟ್ ಕಮೀಷನರ್, ಪೊಲೀಸರು ಎಲ್ಲರಿಂದಲೂ ಅದರ ಬಗ್ಗೆ ಪಂಚನಾಮೆ ಮಾಡಿಸಿಕೊಂಡು ಜಿಲ್ಲಾಧಿಕಾರಿಗಳ ಕಛೇರಿಗೆ ಓಡಾಡಿ ಸುಸ್ತಾಗಿ ಅವರಿಗೆ ಯಾವುದೇ ರೀತಿಯಿಂದ ವ್ಯವಸ್ಥೆಯಾಗುತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ ಇದು ಆಗಾಗಬೇಕು. ಹೀಗಾಗಬೇಕು ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಬೆಂಕಿ ಹೇಗೆ ಬೀಳುತ್ತದೆ ಎನ್ನುವ ವಿಚಾರವನ್ನು ಅಧಿಕಾರಿಗಳು ಹೇಳುತ್ತಾರೆ, ಬೆಂಕಿ ಹೇಗೆ ಬೀಳುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಯಾವುದೇ ರೀತಿಯಿಂದ ಬೆಂಕಿ ಬೀಳಬಹುದು, ಸುಟ್ಟುಹೋಗಬಹುದು. ಅಂಥ ಸಂದರ್ಭಗಳಲ್ಲಿ ಕೊನೆಯ ಪಕ್ಷ ಅವರ ನಷ್ಟಕ್ಕೆ ಅನುಗುಣವಾಗಿ ಪರಿಹಾರವನ್ನು ಕೊಡದಿದ್ದರೂ ಕೂಡ, ಎಷ್ಟು ನಷ್ಟವನ್ನು ಹೊಂದಿದ್ದಾರೆ ಆ ರೀತಿಯಲ್ಲಿ ಸರ್ಕಾರ ಅಂಥ ಬಡವರಿಗೆ ಸಹಾಯ ಮಾಡುವ ಒಂದು ಯೋಜನೆಯನ್ನು ತಕ್ಷಣದಿಂದಲೇ ಜಾರಿಗೆ ತರಬೇಕೆಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಬಹಳಷ್ಟು ಅನುಕೂಲತೆಗಳನ್ನು ಒದಗಿಸಲಾಗಿದೆ. ಉತ್ತರ ಕರ್ನಾಟಕಕ್ಕೆ ಸಪರೇಟ್ ಆಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯನ್ನು ತೆರೆಯುವ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡುವ ಬಗ್ಗೆ, ಬಿಜಾಪುರದ ರೈತರಿಗೆ ತೋಟಗಾರಿಕೆಯನ್ನು ಪ್ರೋತ್ಸಾಹಿಸಲು ಹನಿ ನೀರಾವರಿಯನ್ನು ಮಾಡಲು ನೂರಕ್ಕೆ ನೂರರಷ್ಟು ಸಬ್ಸಿಡಿಯನ್ನು ಕೊಡುವ ಬಗ್ಗೆ ಬಜೆಟ್‌ನಲ್ಲಿ ತಿಳಿಸಿರುತ್ತಾರೆ. ಹಾಗೆಯೇ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬದವರಿಗೆ, ಅವರು ಹನಿ ನೀರಾವರಿಯನ್ನು ಮಾಡಲು ಮುಂದೆ ಬಂದರೆ ಅವರಿಗೂ ನೂರು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡತಕ್ಕದ್ದನ್ನು ಬಜೆಟ್‌ನಲ್ಲಿ ತಿಳಿಸಲಾಗಿದೆ. ನಾನೂ ಕೂಡ ತೋಟಗಾರಿಕಾ ಇಲಾಖೆಯನ್ನು ಉಪಯೋಗ ಮಾಡಿಕೊಂಡು ನನ್ನ ಹೊಲದಲ್ಲಿ ಒಂದು ಎಕರೆಗೆ ಗುಲಾಬಿ ಹೂವನ್ನು ಹಾಕಿದ್ದೇನೆ. ಎಲೆಬಳ್ಳಿ ಮತ್ತು ಬಾಳೆ ಗಿಡಗಳನ್ನು ಹಾಕಿದ್ದೇನೆ. ಹನಿ ನೀರಾವರಿ ಯೋಜನೆಯ ಮೂಲಕ ತೋಟಗಾರಿಕೆಯಲ್ಲಿ ಕೆಲಸ ಮಾಡಿದ್ದರಿಂದ ಬಹಳಷ್ಟು ಉತ್ಪನ್ನವನ್ನು ತೆಗೆಯತಕ್ಕದ್ದನ್ನು ನಾನೇ ಸ್ವತಃ ಒಬ್ಬ ರೈತನಾಗಿ

ಒಳ್ಳೆಯ ಫಸಲನ್ನು ಪಡೆಯತಕ್ಕದನ್ನು ಒಳ್ಳೆಯ ಉತ್ಪಾದನೆ ಬರತಕ್ಕದ್ದನ್ನು ಮನಗಂಡಿದ್ದೇನೆ. ಈ ರೀತಿಯಾಗಿ ಅನೇಕ ಯೋಜನೆಗಳನ್ನು ರೈತರಿಗೆ ಸರ್ಕಾರ ಕೊಡುತ್ತಿದೆ. ರೈತರಿಗೆ ಫರ್ಟಿಲೈಸರ್ಸ್‌ಗೆ ನೀಡುವಂಥ ಸಹಾಯಧನವನ್ನು 25 ಪರ್‌ಸೆಂಟ್‌ನಿಂದ 50 ಪರ್‌ಸೆಂಟ್‌ಗೆ ಏರಿಸಿದ್ದು ಅದಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡತಕ್ಕದನ್ನು ಮಾಡಿದೆ. ಬಹಳ ದಿನಗಳಿಂದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೂ ಮುಜುಗರವಾದ ಸಂಗತಿಯೊಂದು ಇತ್ತು. ಅದೇನೆಂದರೆ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಅವರ ಕುಟುಂಬದವರಿಗೆ ನಾವು ಏನನ್ನೂ ಕೊಡುತ್ತಿರಲಿಲ್ಲ. ಹೋದ ಸಲ ಮಾನ್ಯ ಮುಖ್ಯಮಂತ್ರಿಗಳು ಅಸಿಸ್ಟೆಂಟ್ ಕಮೀಷನರ್ ಮೂಲಕ ನಿಜವಾಗಿಯೂ ರೈತ ಇದರಿಂದಲೇ ಸತ್ತಿದ್ದರೆ ಪರಿಹಾರವನ್ನು ಕೊಡುತ್ತೇವೆಂದು ಅವರು ಹೇಳಿದ್ದರು. ಆದರೆ ಅದನ್ನು ಕೊಟ್ಟಿರಲಿಲ್ಲ. ಈ ಸಲ ಆ ರೀತಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡತಕ್ಕದ್ದನ್ನು ಮಾಡಿದ್ದಾರೆ. ಇದು ಸಹ ರೈತರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯಾಗಿದೆ. ತೆರಿಗೆ ಸುಧಾರಣೆಯ ನಿಟ್ಟಿನಲ್ಲಿ ವ್ಯಾಟ್ ಪದ್ಧತಿಯನ್ನು ಜಾರಿಗೆ ತರುವ ಕೆಲಸವನ್ನು ಈ ಸರ್ಕಾರ ಮಾಡಿದೆ. ವ್ಯಾಟ್‌ನ ಬಗ್ಗೆ ಮಾತನಾಡುತ್ತಾ ಮಾನ್ಯ ಸಭಾಪತಿಯವರು ಇದರಿಂದ ಅನೇಕರಿಗೆ ತೊಡಕಾಗಿದೆಯೆಂದು ಹೇಳಿದರು. ಏಕೆಂದರೆ, ಈ ದೇಶದಲ್ಲಿ ಒಂದೇ ರೀತಿಯಾದ ಕಾನೂನನ್ನು ತರಬೇಕೆಂಬುದು ಆಸೆ. ಎಲ್ಲಾ ರೀತಿಯಿಂದ ರೈತರಿಗೆ ಅನುಕೂಲವಾಗಬೇಕು.ಬಳಕೆದಾರರಿಗೆ ಅನುಕೂಲವಾಗಬೇಕು. ವ್ಯಾಪಾರಸ್ಥರೂ ಸಹ ಮೋಸ ಮಾಡದ ರೀತಿಯಲ್ಲಿ ತಾವು ಪಡೆದಂಥ ಮಾಲಿಗೆ ರಶೀದಿಯನ್ನು ಕೊಟ್ಟರೆ ಅದು ಎಲ್ಲಾ ರೀತಿಯಲ್ಲಿ ಇವರಿಗೆ ಅನುಕೂಲವಾಗಬೇಕು ಎಂಬ ದೃಷ್ಟಿಯಿಂದ ಕೇಂದ್ರ ಸರ್ಕಾರ ವ್ಯಾಟ್‌ನ್ನು ದೇಶಾದ್ಯಂತ ಜಾರಿಗೆ ತರಬೇಕೆಂದು ಹೇಳುತ್ತದೆ. ವ್ಯಾಟನ್ನು ಜಾರಿ ಮಾಡುವ ಸಂದರ್ಭದಲ್ಲಿ ಕೇವಲ ಕರ್ನಾಟಕ ಮಾತ್ರ ಮಾಡಿದ್ದೇವೆಂದು ಹೇಳಿ ಉಳಿದಂತಹ ನಮ್ಮ ನೆರೆಯ ರಾಜ್ಯಗಳಾದ ಆಂಧ್ರ, ಕೇರಳಾ, ತಮಿಳುನಾಡು ರಾಜ್ಯಗಳು ಮಾಡದಿದ್ದರೆ ಬಳಕೆದಾರರಿಗೆ ಇದರಿಂದ ಬಹಳ ಹೊಡೆತ ಬೀಳುತ್ತದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಅನೇಕ ವ್ಯಾಪಾರಸ್ಥ ವರ್ಗದವರು ಸ್ಪಂದಿಸಲಿಲ್ಲ ಇವತ್ತು ಕೆ.ಎಸ್.ಟಿ.ಯನ್ನು ನಾಲ್ಕು ಪರ್‌ಸೆಂಟ್ ಹಾಕಿದ್ದಾರೆ. ಉದಾಹರಣೆಗೆ ನಿಮಗೆ ಹೇಳಬೇಕೆಂದರೆ, ಕರ್ನಾಟಕದಲ್ಲಿ ಬ್ಯಾಡಗಿ ಮಾರುಕಟ್ಟೆ ಮೆಣಸಿನಕಾಯಿಗೆ ಅತ್ಯಂತ ಪ್ರಸಿದ್ಧವಾದ ದೊಡ್ಡದಾದ ಮಾರುಕಟ್ಟೆ ಇಡೀ ದೇಶದಲ್ಲಿ ಎರಡನೇ ದೊಡ್ಡ ಮೆಣಸಿನಕಾಯಿಯ ಮಾರುಕಟ್ಟೆ ಬ್ಯಾಡಗಿಯಾಗಿದೆ. ಸುಮಾರು 300 ಕೋಟಿ ರೂ. ವಹಿವಾಟನ್ನು ಪ್ರತಿ ವರ್ಷ ಅಲ್ಲಿ ನಡೆಸುತ್ತೇವೆ. ಇವತ್ತು ಮೆಣಸಿನಕಾಯಿಯ ಮೇಲಿರುವ ಪಪ್‌ನಿಂದ ಹೋಲಿರೀಜನ್ ಎಂಬ ಪದಾರ್ಥವನ್ನು ತೆಗೆಯುತ್ತಾರೆ. ಅದರಿಂದ ಲಿಪ್‌ಸ್ಟಿಕ್‌ಗೆ ಮತ್ತು ಹಾರ ಇರತಕ್ಕ ವಸ್ತುಗಳನ್ನು ಸಪರೇಟ್ ಮಾಡಿ ವಿದೇಶಕ್ಕೆ 80 ಪರ್‌ಸೆಂಟ್‌ನಷ್ಟು ರಫ್ತು ಮಾಡುತ್ತೇವೆ. ಇವತ್ತು ಮೆಣಸಿನಕಾಯಿಂದ ರೈತರಿಗೆ ಬಹಳ ಬೆಲೆ ಬಂದಿದೆ. ಏಕೆ ಬೆಲೆ ಬಂದಿದೆ ಅಂದರೆ ಹೋಲಿರೀಜನ್ ಮಾಡಿ ಅದರಿಂದ ಕಲರ್‌ನ್ನು ರಫ್ತು ಮಾಡುವ ವ್ಯವಸ್ಥೆ ಇರುವುದರಿಂದ, ವಿದೇಶಗಳಲ್ಲಿ ಇದಕ್ಕೆ ಹೆಚ್ಚು ಬೇಡಿಕೆ ಇರುವುದರಿಂದ ಇವತ್ತು ಮೆಣಸಿನಕಾಯಿಗೆ ಬಹಳ ಯೋಗ್ಯವಾದ

ಬೆಲೆ ಕೊಡುತ್ತಿದ್ದೇವೆ. ಆದರೆ ಅನಿವಾರ್ಯದಿಂದ ವ್ಯಾಟನ್ನು ಜಾರಿಗೆ ತಂದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಎರಡು ಪರ್‌ಸೆಂಟ್ ಇದ್ದ ತೆರಿಗೆಯನ್ನು ಬಜೆಟ್‌ನಲ್ಲಿ ನಾಲ್ಕು ಪರ್‌ಸೆಂಟ್‌ಗೆ ಏರಿಸಿದ್ದಾರೆ. ಈ ರೀತಿ ಏರಿಸುವುದರಿಂದ ಆ ದಲಾಲರು ರೈತರಿಗೆ ಅನ್ಯಾಯ ಮಾಡುತ್ತಾರೆ. ಇದರಿಂದ ಮಾರುಕಟ್ಟೆಯಲ್ಲಿ ನೂರಕ್ಕೆ ಐದಾರು ಪರ್‌ಸೆಂಟ್‌ನಷ್ಟು ಕಡಿಮೆ ಬೆಲೆಯಲ್ಲಿ ಅವರು ರೈತರಿಂದ ಮಾಲನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಬಹಳ ತೊಂದರೆಯಾಗುತ್ತದೆ. ವ್ಯಾಟನ್ನು ಜಾರಿಗೊಳಿಸಿದರೆ ಸಂತೋಷ. ಆ ರೀತಿ ಜಾರಿಗೊಳಿಸದಿದ್ದ ಸಂದರ್ಭದಲ್ಲಿ ಮೊದಲೇನು ಎರಡು ಪರ್‌ಸೆಂಟ್ ತೆರಿಗೆ ಇತ್ತು ಅದನ್ನು ಹಾಗೆಯೇ ಇಡಬೇಕೆಂದು ಹೇಳಬಯಸುತ್ತೇನೆ. ಮತ್ತೊಂದು ಮಹತ್ತರವಾದ ವಿಚಾರವನ್ನು ಸರ್ಕಾರ ಪ್ರಸ್ತಾಪ ಮಾಡಿದೆ. ನಾವೆಲ್ಲಾ ಸಣ್ಣವರಿದ್ದಾಗ ಶ್ರೀಮತಿ ಇಂದಿರಾಗಾಂಧಿಯವರು ಮನೆ ಕೊಡುತ್ತಾರಂತೆ ಎಂದು ಹೇಳುತ್ತಿದ್ದರು. ಇಷ್ಟು ಜನರಿಗೆ ಹೇಗೆ ಮನೆ ಕೊಡುತ್ತಾರೆಂದು ನಾವೆಲ್ಲರೂ ನಕ್ಕಿದ್ದು ಉಂಟು. ಬ್ಯಾಂಕನ್ನೇ ನೋಡಿರದಿದ್ದ ಪರಿಸ್ಥಿತಿ ನಮಗೆ ಇತ್ತು. ನಾವು ಬ್ಯಾಂಕ್‌ನ ಬಾಗಿಲಿಗೇ ಹೋಗದಿದ್ದ ಪರಿಸ್ಥಿತಿ ಇತ್ತು. ಆದರೆ ಇವತ್ತು ಬ್ಯಾಂಕುಗಳನ್ನೆಲ್ಲಾ ರಾಷ್ಟ್ರೀಯ ಮಾಡಿದ್ದಾರೆ. ಇಂದಿರಾಗಾಂಧಿಯವರು ಮನೆಗಳನ್ನು ಕೊಟ್ಟರು, ಆನಂತರ ಬೇರೆ ಬೇರೆ ಸರ್ಕಾರಗಳು ಬಂದು ಆ ಕಾರ್ಯಕ್ರಮದ ಹೆಸರು ಬದಲಾವಣೆಯಾಗಿದೆ, ಇವತ್ತು ರಾಜೀವ್‌ಗಾಂಧಿಯವರ ಹೆಸರಿನಲ್ಲಿ ಸಂಸ್ಥೆಯನ್ನು ಮಾಡಿ ಅದರ ಮೂಲಕ ಮನೆಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಆ ದೃಷ್ಟಿಯಿಂದ ನಮ್ಮ ಸರ್ಕಾರ ಇವತ್ತು ವಸತಿ ಹೀನರಿಗೆ 11 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದೆ. ಮುಂದಿನ ದಿನಗಳಲ್ಲಿ ಒಂದೊಂದೂ ಕ್ಷೇತ್ರಕ್ಕೆ ಒಂದೊಂದು ಸಾವಿರ ಮನೆಗಳನ್ನು ಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಇವತ್ತು ಮೂರೂವರೆ ಸಾವಿರ ನಿವೇಶನಗಳನ್ನು ಕೊಟ್ಟಿದ್ದೇವೆ. ಮೂರುವರೆ ಸಾವಿರ ಮನೆಗಳನ್ನೂ ಕೊಟ್ಟಿರುವುದು ಹೆಮ್ಮೆಯ ವಿಷಯವಾಗಿದೆ. ಹಾಗೆಯೇ ಪಟ್ಟಣ ಪ್ರದೇಶಗಳಲ್ಲಿ ಯಾರ್ಯಾರು ಮನೆಗಳನ್ನು ಕಟ್ಟಲು ಮುಂದೆ ಬರುತ್ತಾರೆ, ಆ ಶಾಸಕರುಗಳು ಹತ್ತು ಪರ್‌ಸೆಂಟ್ ಅಥವಾ ಪ್ರತಿ ತಿಂಗಳಿಗೆ ಅಥವಾ ದಿವಸಕ್ಕೆ ಹತ್ತು, ಇಪ್ಪತ್ತು, ಮೂವತ್ತು ರೂಪಾಯಿಗಳನ್ನು ತಮ್ಮ ಶಕ್ತಿಗೆ ಅನುಸಾರವಾಗಿ ಕಟ್ಟಲು ಯಾರು ಮುಂದೆ ಬರುತ್ತಾರೆ ಅವರಿಗೆ ಸಾವಿರ ಮನೆಗಳನ್ನು ಕೊಡತಕ್ಕ ಯೋಜನೆಯನ್ನು ರಾಜೀವ್‌ಗಾಂಧಿ ಕಾರ್ಪೊರೇಷನ್ ಮೂಲಕ ಕಟ್ಟತಕ್ಕ ವ್ಯವಸ್ಥೆ ಇವತ್ತು ಜಾರಿಗೆ ಬಂದಿದೆ. ನನಗೆ ಗೊತ್ತಿರುವಂತೆ ಗದಗ್, ಕೂಡ್ಲಿಗಿ ಕ್ಷೇತ್ರದಲ್ಲಿ ಬಹಳಷ್ಟು ಮನೆಗಳನ್ನು ಕಟ್ಟಿ ಹೊಸ ಹೊಸ ನಗರಗಳನ್ನು ನಿರ್ಮಾಣ ಮಾಡಿದ್ದಾರೆ. ಆ ದೃಷ್ಟಿಯಿಂದ ನಾನೂ ಬ್ಯಾಡಗಿ ನಗರದಲ್ಲಿ ಸಾವಿರ ಮನೆಗಳನ್ನು ಕಟ್ಟತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇನೆ. ಅದೇ ರೀತಿ ಹಮಾಲರಿಗೆ ನಾವು ಎ.ಪಿ.ಎಂ.ಸಿ ಮುಖಾಂತರವಾಗಿ ಸೈಟನ್ನು ಕೊಂಡುಕೊಡುತ್ತೇವೆ, ಅವರಿಗೂ ಕೂಡ 40 ಸಾವಿರ ರೂಪಾಯಿಗಳಿಗೆ ಮನೆಗಳನ್ನು ಕಟ್ಟಿಕೊಡತಕ್ಕದ್ದು. ಇನ್ನು ಲಿಡ್ಕರ್ ಯೋಜನೆಯಲ್ಲಿ ಈಗಾಗಲೇ ನನ್ನ ಕ್ಷೇತ್ರದಲ್ಲಿ 46 ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಿದ್ದಾರೆ. ಅದಕ್ಕೆ 40 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥದ್ದು. ಅದರಲ್ಲಿ 50 ಪರ್ಸೆಂಟ್ ಸಬ್ಸಿಡಿಯಲ್ಲಿ ಬರತಕ್ಕಂಥದ್ದು. ಅಂಬೇಡ್ಕರ್ ಹಾಗೂ ವಾಲ್ಮೀಕಿ ಯೋಜನೆಗಳಡಿಯಲ್ಲಿ ಮನೆಗಳನ್ನು

ಕಟ್ಟಿಕೊಡತಕ್ಕಂಥದ್ದು. ಕೊಳಚೆ ನಿರ್ಮೂಲನಾ ಪ್ರದೇಶಗಳಲ್ಲಿ ವಾಸಿಸುವ ಜನಗಳಿಗೆ ಮನೆಗಳನ್ನು ಕಟ್ಟಿಕೊಡತಕ್ಕಂಥದ್ದು, ಅದೇ ರೀತಿ ಹೌಸಿಂಗ್ ಬೋರ್ಡ್ ಮುಖಾಂತರವಾಗಿ ಮನೆಗಳನ್ನು ಕಟ್ಟಿಕೊಡತಕ್ಕಂಥದ್ದು, ಈ ರೀತಿಯಾಗಿ ಹತ್ತು ಹಲವಾರು ಯೋಜನೆಗಳನ್ನು ಈ ಸರ್ಕಾರ ಜಾರಿಗೆ ತಂದಿದೆ. ಇಂಥ ಒಂದು ಸರ್ಕಾರ ಇಂಥ ಒಂದು ಯೋಜನೆಗಳನ್ನು ಜಾರಿ ಮಾಡಿರುವುದರಿಂದ ನಿಜವಾಗಿಯೂ ಬಡವರಿಗೆ ದಾರಿದೀಪವಾದಂತಾಗಿದೆ. ಇನ್ನು ಕುಟೀರ ಯೋಜನೆ ಮೂಲಕವಾಗಿ ಮನೆಗೆ ದೀಪವನ್ನು ಹಾಕುವ ಯೋಜನೆಯನ್ನು ಕೂಡ ಸರ್ಕಾರ ಜಾರಿಗೆ ತಂದಿದೆ. ಇವೊತ್ತು ಜಲ ನಿರ್ಮಲ ಯೋಜನೆಯಲ್ಲಿ ನಿರ್ಬಂಧ ಇಲ್ಲ. ಈ ಯೋಜನೆಯಲ್ಲಿ ನಾವು ಎಷ್ಟು ಹಣವನ್ನು ಕೂಡಿಸಿಕೊಡುತ್ತೇವೆಯೋ ಅದನ್ನು ಬಳಸಿಕೊಂಡಂತೆ ಅಲ್ಲಿ ಪರ್ಮನೆಂಟ್ ಆಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕಂಥದ್ದು. ಹಳ್ಳಿಗಳಲ್ಲಿ ಕೇವಲ ಡಾಂಬರು ರಸ್ತೆಯಲ್ಲ, ಅಲ್ಲಿ ಕಾಂಕ್ರೀಟ್ ರಸ್ತೆಗಳನ್ನೂ ಕೂಡ ಮಾಡಬಹುದು ಎನ್ನುವ ರೀತಿಯಲ್ಲಿ ನಮ್ಮ ಸರ್ಕಾರ ಯೋಜನೆಯನ್ನು ಜಾರಿಗೊಳಿಸಿದೆ. ಒಂದೊಂದು ಜಿಲ್ಲೆಗೆ ಕನಿಷ್ಠ ಒಂದುನೂರು ಕೋಟಿ ರೂ. ಹಣವನ್ನು ಕೊಡತಕ್ಕಂಥದ್ದು ಇವೊತ್ತು ನಮ್ಮಲ್ಲಿ ಜಾರಿಗೆ ಬಂದಿದೆ. ಆ ರೀತಿಯಲ್ಲಿ ಈ ಸಾಲಿನ ಬಜೆಟ್‌ನಲ್ಲಿ ಹತ್ತು ಹಲವಾರು ಯೋಜನೆಗಳನ್ನು ಸರ್ಕಾರ ಬಡವರಿಗಾಗಿ, ಎಸ್‌ಸಿ:ಎಸ್‌ಟಿ ಜನರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಮಾಡಿದೆ. ನಗರಾಭಿವೃದ್ಧಿ ಯೋಜನೆಯಲ್ಲೂ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಮಾಡಿದೆ. ಇದಲ್ಲದೇ ತೆರಿಗೆ ಇಳಿಕೆಯನ್ನು ಮಾಡುವುದಕ್ಕಾಗಿ ನಮ್ಮ ಸರ್ಕಾರ ಬಹಳಷ್ಟು ಕೆಲಸಗಳನ್ನು ಮಾಡಿದೆಯೆಂದು ಹೇಳಬಯಸುತ್ತೇನೆ. ಇಂಥ ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

† ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :– ಮಾನ್ಯ ಉಪಾಧ್ಯಕ್ಷರೆ, 2003-04ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ. ಚಾಣಕ್ಯ ನೀತಿಯಲ್ಲಿ ಸುಂದರವಾದ ಕೆಲವು ಮಾತುಗಳು ಬರುತ್ತವೆ. ದುಂಬಿಗಳು ಹೂವಿನಿಂದ ಮಕರಂದವನ್ನು ಹೀರುವಂತೆ ಜನರಿಗೆ ನೋವಾಗದ ರೀತಿಯಲ್ಲಿ ರಾಜ ಅರ್ಥಾತ್ ಸರ್ಕಾರ ತೆರಿಗೆಯನ್ನು ಸಂಗ್ರಹಿಸಬೇಕು ಎನ್ನುವಂಥ ಮಾತು ಚಾಣಕ್ಯ ನೀತಿಯಲ್ಲಿದೆ. ಬಹುಶಃ ಮೊನ್ನೆ ಸರ್ಕಾರ ಮೌಲ್ಯಾಧಾರಿತ ತೆರಿಗೆಯನ್ನು ಜಾರಿಗೆ ತರಲು ಇಚ್ಚಿಸಿದಂಥ ಸಂದರ್ಭದಲ್ಲಿ ವ್ಯಾಟ್ ಬಗ್ಗೆ ಮತ್ತು ಟ್ಯಾಕ್ಸೇಷನ್‌ನ ಅದರ ಸಾಧಕಬಾಧಕಗಳ ಬಗ್ಗೆ ಚರ್ಚೆಮಾಡುವಂತಹ ಅವಕಾಶ ಸಿಕ್ಕಂಥ ಸಂದರ್ಭದಲ್ಲಿ ಸಾಕಷ್ಟು ನನ್ನ ವಿಚಾರಗಳನ್ನು ಹೇಳಿದ್ದೇನೆ. ಆದ್ದರಿಂದ ಈಗ ಅದರ ಬಗ್ಗೆ ಮತ್ತೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಬಜೆಟ್‌ನಲ್ಲಿ ಉಲ್ಲೇಖವಾದ ಇನ್ನಿತರ ಅಂಶಗಳ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಇಚ್ಚಿಸುತ್ತಿದ್ದೇನೆ. ಐಟಂ 5ರಲ್ಲಿ ಬರಗಾಲ ಹಾಗೂ ಅದರ ಪರಿಹಾರದ ಬಗ್ಗೆ ಸಾಕಷ್ಟು ಮಾತುಗಳು ಇವೆ. ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ನಾಲ್ಕನೇ ಒಂದರಷ್ಟು ಭಾಗದ ಹಣವನ್ನು ಕಡಿತ ಮಾಡಿ ಬರಗಾಲ ಪರಿಹಾರಕ್ಕೆ ಉಪಯೋಗಿಸಿದ್ದೀರಿ. ಅದರ ಬಗ್ಗೆ ನಾನು ಸ್ವಾಗತವನ್ನು ಮಾಡುತ್ತೇನೆ. ಆದರೆ ಅದರ ಜೊತೆಗೆ ಬಾಕಿ ಇರತಕ್ಕಂಥ 30 ಲಕ್ಷ ರೂಪಾಯಿಗಳೇನಿವೆ ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ಸರ್ಕಾರಕ್ಕೆ

ನನ್ನ ವಿಶೇಷ ವಿನಂತಿ ಏನೆಂದರೆ ರಾಜ್ಯದಲ್ಲಿ ಬಂದ ಬರ ಮಳೆಯಿಂದ ಈ ವರ್ಷ ಬರ ನಿವೃತ್ತಿಯಾಗಬಹುದು, ಏಕೆಂದರೆ ಬರ ಹೋಗುವಂಥ ಎಲ್ಲಾ ಲಕ್ಷಣಗಳು ಇವೆ. ಆದರೆ ಇಲ್ಲಿ ನಾನು ವಿನಂತಿಸುವುದೇನೆಂದರೆ, ಬರದಿಂದ ಒಂದು ವರ್ಷ ಅಂದರೆ ಒಂದು ಸಂವತ್ಸರ ಹಾಳಾಗಬಹುದು. ಆದರೆ ಮಳೆ ಬಂದಿದೆ ಅದು ಸುಧಾರಿಸಬಹುದು, ಆದರೆ ವಿಶೇಷ ವಿನಂತಿ ತಮ್ಮ ಮೂಲಕ ಸರ್ಕಾರಕ್ಕೆ ಏನೆಂದರೆ ಯಾವುದೇ ಕಾರಣಕ್ಕೂ ಯುವ ಪ್ರತಿಭೆಗೆ ಬರ ಬರಬಾರದು. ಏಕೆಂದರೆ ಯುವ ಪ್ರತಿಭೆಗೆ ಬರ ಬರುವುದಕ್ಕೆ ಪ್ರಾರಂಭವಾದರೆ ಅಥವಾ ಯುವಕರು ಅವಕಾಶ ವಂಚಿತರಾಗಿ ತಮ್ಮ ಪ್ರತಿಭೆಯನ್ನು ವ್ಯಕ್ತಮಾಡುವುದಕ್ಕೆ ಅವಕಾಶವಿಲ್ಲದಂಥ ಸಂಧರ್ಭಗಳ ಪರಿಸ್ಥಿತಿ ಉದ್ಭವವಾದಲ್ಲಿ ಇದರಿಂದಾಗಿ ಬಹುಶಃ ಇಡೀ ಜನಾಂಗದ ಪ್ರತಿಭೆಯ ಆಯುಷ್ಯವೇ ಹಾಳಾಗುವಂಥ ಸಾಧ್ಯತೆ ಇರುವುದರಿಂದ ಸರ್ಕಾರ ಇಂಥ ಯುವ ಜನಾಂಗಕ್ಕೆ ಅವರ ಪ್ರತಿಭೆಗೆ ಬರ ಬರದ ರೀತಿಯಲ್ಲಿ ಒಂದು ವಿಶೇಷ ರೀತಿಯಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ನನ್ನ ಕಳಕಳಿ ವಿನಂತಿಯೆಂದರೆ ಸರ್ಕಾರ ಸಿ.ಇ.ಟಿ. ಬಗ್ಗೆ ವಿಶೇಷ ಕ್ರಮ ತೆಗೆದುಕೊಂಡು ಸಹಾಯ ಮಾಡಿ ಇದರ ಬಗ್ಗೆ ದಿಟ್ಟ ಕ್ರಮ ತೆಗೆದುಕೊಂಡು ಈ ಯುವ ಜನಾಂಗಕ್ಕೆ ಸಹಾಯ ಮಾಡಬೇಕೆನ್ನುವ ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿಶೇಷವಾಗಿ ಯಾಂತ್ರೀಕೃತ ರಾಜ್ಯ ಮೀನುಗಾರಿಕೆಗೆ ಸಂಬಂಧಪಟ್ಟಂತೆ 90 ದಿವಸಗಳ ರಜೆ ಇರುವುದನ್ನು ಈಗ 65 ದಿವಸಗಳಿಗೆ ಕಡಿತ ಮಾಡಿರುವುದರಿಂದ ಇನ್ನುಳಿದ 25 ದಿವಸಗಳಲ್ಲಿ ಬೇಕಾದಂಥ ಡೀಸಲ್‌ನ್ನು ಸಬ್ಸಿಡಿಯಲ್ಲಿ ಸರಬರಾಜು ಮಾಡಲು ಅವಶ್ಯಕತೆ ಇರುವುದರಿಂದ 50 ಸಾವಿರ ಕಿಲೋಲೀಟರ್ ಡೀಸೆಲ್‌ನ್ನು ತೆರಿಗೆ ರಹಿತವೆಂದು ಸರ್ಕಾರ ಘೋಷಣೆ ಮಾಡಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದನ್ನು ಕನಿಷ್ಠ 60 ಸಾವಿರ ಕಿಲೋಲೀಟರ್‌ಗೆ ಏರಿಸಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನು ಕರ್ನಾಟಕದ ಹತ್ತು ಲಕ್ಷ ರೈತರಿಗೆ 'ಯಶಸ್ವಿನಿ' ಸೌಲಭ್ಯ ಸಿಕ್ಕಿದೆ. ಶಸ್ತ್ರ ಚಿಕಿತ್ಸೆಯಿಂದ ಹಿಡಿದು ಎಲ್ಲಾ ರೀತಿಯ ಸೌಲಭ್ಯಗಳು ಇದರಿಂದ ರೈತರಿಗೆ ಸಿಗುವಂತಾಗಿದೆ. ನಾನು ಸರ್ಕಾರವನ್ನು ವಿನಂತಿಸುವುದೇನೆಂದರೆ ರಾಜ್ಯದಲ್ಲಿ ಬಿಲೋ ಪಾವರ್ಟಿ ಲೈನ್‌ನಲ್ಲಿ ಯಾವ ಬಡವರುಗಳು ಬರುತ್ತಾರೆಯೋ ಅವರಿಗೂ ಕೂಡ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.ಈ ರೀತಿ ಮಾಡಿದರೆ ಶಾಸಕರುಗಳ ಹತ್ತಿರ ಬರುವ ಎಷ್ಟೋ ಬಡವರಿಗೆ ಸಹಾಯ ಮಾಡಲು ಶಾಸಕರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಕಾರ್ಯಕ್ರಮವನ್ನು ಜಾರಿಗೆ ತರಲು ಸರ್ಕಾರ ಯೋಚನೆ ಮಾಡಬೇಕೆಂದು ವಿನಂತಿಮಾಡುತ್ತೇನೆ. ಇನ್ನು ಅಕ್ಷರ ದಾಸೋಹ ಯೋಜನೆಯಡಿಯಲ್ಲಿ 5ನೇ ತರಗತಿಯವರೆಗಿನ ಮಕ್ಕಳಿಗೆ ಮಾತ್ರ ಮಧ್ಯಾಹ್ನದ ಬಿಸಿಯೂಟವನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಆದರೆ ಅದೇ ಶಾಲೆಯಲ್ಲಿ ಓದುವ 6,7, 8ನೇ ತರಗತಿಯ ಮಕ್ಕಳುಗಳು ಹಸಿವಿನಿಂದ ನೋವು ಅನುಭವಿಸುವ ಸ್ಥಿತಿ ಬರುತ್ತದೆ. ಆ ರೀತಿಯ ಸ್ಥಿತಿ ಬರಬಾರದು. ಆದುದರಿಂದ ಕನಿಷ್ಠ ಈ ಯೋಜನೆಯನ್ನು ಪ್ರೌಢಶಾಲೆಗೂ ವಿಸ್ತರಿಸಬೇಕು ಎಂದು ನಾನು ವಿನಂತಿ ಮಾಡುತ್ತೇನೆ. ಇದರಲ್ಲಿ ನಾನು ಒಂದು ಸಲಹೆಯನ್ನು ಕೊಡುವುದೇನೆಂದರೆ ನಾವು ತಿನ್ನುವ ಅನ್ನದ ಅಂಶಗಳಲ್ಲಿ ಒಂದು ಅಂಶ ಶರೀರಕ್ಕೆ ಹೋಗುತ್ತದೆ ಇನ್ನೊಂದು ಅಂಶ ಮನಸ್ಸನ್ನು ನಿರ್ಮಾಣ ಮಾಡುತ್ತದೆ. ಇದು ನನಗೆ ಗೊತ್ತಿರುವಂಥ ಪ್ರತೀತಿ ಇದಾಗಿದೆ. ಸರ್ಕಾರ ಕೊಡಲು ನಿರ್ಧರಿಸಿರುವ ಮಧ್ಯಾಹ್ನದ ಊಟದ ಅನ್ನ ಆನ್‌ಲೈನ್

ಲಾಟರಿ ಆದಾಯದ ಮೂಲಕ ಬರುವುದರಿಂದ ಬಹುಶಃ ಈ ಅನ್ನ ಮಕ್ಕಳ ಶರೀರ ಮತ್ತು ಮನಸ್ಸಿನಲ್ಲಿ ಕೂಡ ಕೆಟ್ಟ ಪರಿಣಾಮಗಳನ್ನು ಉಂಟುಮಾಡುವ ಸಾಧ್ಯತೆ ಇರುವುದರಿಂದ ಬಹುಶಃ ಆನ್‌ಲೈನ್ ಲಾಟರಿಯನ್ನು ಬ್ಯಾನ್ ಮಾಡಿ ಅಥವಾ ಆನ್‌ಲೈನ್ ಲಾಟರಿಯಿಂದ ಬರುವ ಹಣವನ್ನು ಬೇಕಾದರೆ ರಸ್ತೆ ನಿರ್ಮಾಣಕ್ಕೆ ಉಪಯೋಗಿಸಿ. ಆದರೆ ಮಧ್ಯಾಹ್ನದ ಊಟದ ಯೋಜನೆಗೆ ಹಣವನ್ನು ಬೇರೆ ಒಳ್ಳೆಯ ರೀತಿಯಿಂದ ಸಂಗ್ರಹವಾಗುವ ತೆರಿಗೆಯ ಹಣವನ್ನು ಉಪಯೋಗ ಮಾಡಿದರೆ ಮಕ್ಕಳಲ್ಲಿ ಸತ್ಪ್ರೇರಣೆ ಉಂಟಾಗುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಮಕ್ಕಳ ಮನಸ್ಸು ಕೂಡ ಒಳ್ಳೆಯದಿರುವ ಸಾಧ್ಯತೆಗಳಿರುವುದರಿಂದ ಇದರ ಬಗ್ಗೆ ಸರ್ಕಾರ ಪುನರಪಿ ಯೋಚನೆಯನ್ನು ಮಾಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇನ್ನು ಸರ್ಕಾರ ಶಾಲಿ ಮತ್ತು ಅನುದಾನಿತ ಶಾಲೆಗಳಲ್ಲಿ ಅಧ್ಯಾಪಕ ಹಾಗೂ ಮಕ್ಕಳ ರೇಷಿಯೋ ಏನಿಗೆ ಅದು ಒಂದೇ ರೀತಿಯಲ್ಲಿ ಆಗುವಂತೆ ಮಾಡಬೇಕು. ಇಲ್ಲದಿದ್ದರೆ ನಗರ ಶಾಲೆಗಳು ಅದರಲ್ಲೂ ಕನ್ನಡ ಮಾಧ್ಯಮದ ಶಾಲೆಗಳಂತೂ ಸಾಕಷ್ಟು ಸಫರ್ ಆಗುವ ಸಾಧ್ಯತೆಗಳು ಇರುವುದರಿಂದ ಇದರ ಬಗ್ಗೆ ಸರ್ಕಾರ ಪುನರಪಿ ವಿಮರ್ಶೆ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಇನ್ನು ಹೃದ್ರೋಗ ಆಸ್ಪತ್ರೆಯ ಸೌಲಭ್ಯಗಳಿಗಾಗಿ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖವನ್ನು ಮಾಡಿದ್ದಾರೆ. ಅದನ್ನು ಸ್ವಾಗತ ಮಾಡುತ್ತಿದ್ದೇನೆ. ಆದರೆ ರಾಜ್ಯದ ಪ್ರಮುಖ ನಗರಗಳಿಗೆ ಮಾತ್ರ ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ. ಇದನ್ನು ಮಂಗಳೂರು ನಗರಕ್ಕೂ ಕೂಡ ವಿಸ್ತಾರ ಮಾಡಬೇಕು. ಏಕೆಂದರೆ ಇದು ಜಿಲ್ಲಾ ಕೇಂದ್ರ. ಇಲ್ಲೂ ಕೂಡ ಹೃದ್ರೋಗ ಚಿಕಿತ್ಸೆಗೆ ಸಂಬಂಧಪಟ್ಟಂತೆ ಸಾಕಷ್ಟು ರೋಗಿಗಳು ಬರುವುದರಿಂದ ಈ ಯೋಜನೆಯನ್ನು ಮಂಗಳೂರಿಗೂ ವಿಸ್ತರಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಇನ್ನು ರಾಜ್ಯದಲ್ಲಿ ರಾಜೀವ್ ಯುವಶಕ್ತಿ ಎಂದು ಹತ್ತು ಸಾವಿರ ರೂ.ಗಳ ಕ್ರೀಡಾ ನಿಧಿಯನ್ನು ಮಾಡಿದ್ದಾರೆ. ಬಹುಶಃ 6 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದನ್ನು ನಮ್ಮಲ್ಲಿರುವಂಥ ಎಲ್ಲಾ ಜಿಲ್ಲೆಗಳಿಗೆ ಕನಿಷ್ಠ 20 ಜಿಲ್ಲಾ ಕೇಂದ್ರಗಳಿಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಲ್ಲಿ ಅರ್ಧದಲ್ಲಿಯೇ ನಿಂತಿರುವಂಥ ಕ್ರೀಡಾಂಗಣಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಈ ನಿಧಿಯಿಂದ ಯಾವುಯಾವುದೋ ಕ್ಲಬ್‌ಗಳಿಗೆ ಹಣ ಹೋಗುವ ಬದಲು ಸಮಗ್ರವಾಗಿ ಜಿಲ್ಲೆಯಲ್ಲಿರುವಂಥ ಕ್ರೀಡಾ ಚಟುವಟಿಕೆಗಳಿಗೆ ಆಧಾರವಾಗುವಂಥ ಕ್ರೀಡಾಂಗಣಗಳನ್ನು ಪೂರ್ತಿಗೊಳಿಸುವ ನಿಟ್ಟಿನಲ್ಲಿ ಆ ಹಣವನ್ನು ಉಪಯೋಗ ಮಾಡಿದರೆ ಒಳ್ಳೆಯದಾಗುತ್ತದೆ. ಕ್ರೀಡಾ ನೀತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ನಾನು ತುಂಬಾ ಸಂಗತಿಗಳನ್ನು ನಿರೀಕ್ಷೆ ಮಾಡುತ್ತಿದ್ದೆ. ಗ್ರೇಸ್ ಮಾರ್ಕ್ಸ್‌ನಿಂದ ಹಿಡಿದು ಬೇರೆ ರೀತಿಯಲ್ಲಿರುವಂಥ ರಿಸರ್ವೇಶನ್ ಪಾಲಿಸಿಯನ್ನು ಜಾರಿಗೆ ತರಬಹುದು ಎಂದು ನಿರೀಕ್ಷೆ ಮಾಡಿದ್ದೆ. ಬಹುಶಃ ಇದರ ಬಗ್ಗೆ ಸರ್ಕಾರ ಹೆಚ್ಚಿನ ಚಿಂತನೆ ಮಾಡಬೇಕಾಗಿದೆ. ಇನ್ನು ಪ್ರವಾಸೋದ್ಯಮ ನೀತಿಯ ಬಗ್ಗೆ ಕೂಡ ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ. ಪ್ರವಾಸಿ ವಾಹನಗಳ ಮೇಲಿನ ತೆರಿಗೆ ಬಗ್ಗೆ ಸಮಗ್ರವಾಗಿ ಯೋಚನೆ ಮಾಡುವ ಅವಶ್ಯಕತೆ ಇದೆ. ಬಹುಶಃ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಟ್ಯಾಕ್ಸೇಶನ್ ವಾಹನಗಳ ಮೇಲಿದೆ ಅದೇ ರೀತಿಯಲ್ಲಿರುವಂಥ ತೆರಿಗೆಯನ್ನು ನಮ್ಮ ರಾಜ್ಯದಲ್ಲಿ

ತರಬೇಕು. ಇಲ್ಲದಿದ್ದರೆ ಸಾಕಷ್ಟು ಹೊಡೆತ ಪ್ರವಾಸೋದ್ಯಮಕ್ಕೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ. ಈ ಬಗ್ಗೆ ಪುನರ್ವಿಮರ್ಶೆ ಮಾಡಬೇಕು. ಈಗೇನು ಪ್ಯಾಕೇಜ್ ಇಟ್ಟುಕೊಂಡಿದ್ದಾರೆ. ಬಹುಶಃ ಪಕ್ಕದ ಕೇರಳ ಹತ್ತಿರ ಇರುವಂಥ ಗೋವಾ, ಈ ಎರಡೂ ರಾಜ್ಯಗಳನ್ನು ಕಂಪೇರ್ ಮಾಡಿದಾಗ ಪ್ರವಾಸೋಧ್ಯಮಕ್ಕೆ ಪ್ರೋತ್ಸಾಹದಲ್ಲಿ ನಾವು ಅತ್ಯಂತ ನಗಣ್ಯ ಮಾಡಿದ್ದೇವೆ. ಸಿ.ಆರ್.ಹೆಚ್. ಸಮಸ್ಯೆಗಳೂ ಕೂಡ ಬರುವುದರಿಂದ, ಬಹುಶಃ ಈ ನಿಟ್ಟಿನಲ್ಲಿ ಸೂಕ್ತ ಸಂದರ್ಭದಲ್ಲಿ ಕಟ್ಟೆಚ್ಚರಗಳನ್ನು ತೆಗೆದುಕೊಂಡು ಕೋಸ್ಟ್‌ಲ್ ಪ್ರವಾಸೋಧ್ಯಮ, ಕರಾವಳಿ ಪ್ರವಾಸೋದ್ಯಮ ಕೂಡ ಅಭಿವೃದ್ಧಿಯಾಗುವಂಥ ನಿಟ್ಟಿನಲ್ಲಿ ಕರಾವಳಿ ಪ್ರವಾಸೋಧ್ಯಮ ಅಭಿವೃದ್ಧಿ ಪ್ರಾಧಿಕಾರವನ್ನು ಘೋಷಣೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ಬಜೆಟ್‌ನಲ್ಲಿ ಡಾ: ಶಿವರಾಮಕಾರಂತರ ಬಗ್ಗೆ ಕೂಡ ಉಲ್ಲೇಖ ಮಾಡಲಾಗಿದೆ. ಈ ಉಲ್ಲೇಖ ಮಾಡಿರುವುದರಲ್ಲಿ ಜ್ಞಾನಪೀಠಪ್ರಶಸ್ತಿ ವಿಜೇತರಾದ ಡಾ: ಶಿವರಾಮಕಾರಂತರ ಪ್ರಿಯವಾದ ಯಕ್ಷಗಾನ ಮತ್ತು ಜಾನಪದ ಟ್ರಸ್ಟಿಗೆ 50 ಲಕ್ಷ ರೂಪಾಯಿಗಳನ್ನು ಸರ್ಕಾರ ಘೋಷಣೆ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಅ.ಪ.ಬಿ. 83: ಎಫ್ ಡಬ್ಲ್ಯೂ.ಎಲ್.99, ಬೆಂಗಳೂರ, ದಿನಾಂಕ 26.8.99ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಪಿಳಿಕುಳ ನಿಸರ್ಗಧಾಮ ಯಾವುದಿದೆ ಅದಕ್ಕೆ ದಿವಂಗತ ಡಾ: ಶಿವರಾಮಕಾರಂತರ ಹೆಸರನ್ನು ನಾಮಕರಣ ಮಾಡಬೇಕೆಂದು ಈ ಮೂಲಕ ಸರ್ಕಾರ ಆದೇಶಿಸುತ್ತಿದೆ ಎಂದು ಹೇಳುವಂಥದ್ದು ದಿನಾಂದ 26.8.99 ರಲ್ಲಿಯೇ ಡಿಕ್ಲೇರ್ ಆಗಿದ್ದರೂ ಕೂಡ ಇವೊತ್ತಿನವರೆಗೂ ಅದು ಅನುಷ್ಠಾನಕ್ಕೆ ಬಂದಿಲ್ಲ. ಕನಿಷ್ಠ ಡಾ: ಶಿವರಾಮಕಾರಂತರ ಹೆಸರು ಸ್ಮರಣೀಯವಾಗುವ ನಿಟ್ಟಿನ ಹಿನ್ನೆಲೆಯಲ್ಲಿ ಈ ಪಿಳಿಕುಳ ನಿಸರ್ಗಧಾಮಕ್ಕೆ ಅವರ ಹೆಸರನ್ನು ಇಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

7.10 ಪಿ.ಎಂ.

ಕೊನೆಯದಾಗಿ ಎನ್‌ಹ್ಯಾನ್ಸ್‌ಮೆಂಟ್ ಆಫ್ ಸ್ಟಾಂಪ್ ಡ್ಯೂಟಿ ಅದರ ಬಗ್ಗೆ flats and adversely affected housing sector ಅದಕ್ಕೆ ಸಂಬಂಧಪಟ್ಟ ಹಾಗೆ ಟ್ಯಾಕ್ಸೇಷನ್ ಯಾವರೀತಿ ಮಾಡಿದ್ದಾರೆಂದರೆ ಮೂರು ಲಕ್ಷ ರೂಪಾಯಿಗಳವರೆಗೆ 4.1 ಪರ್ಸೆಂಟ್, ಹಾಗೂ ರಿಜಿಸ್ಟ್ರೇಷನ್ 2 ಪರ್ಸೆಂಟ್ ರೇಟ್ ಇತ್ತು. ಎಂದರೆ ಸುಮಾರು 18,300 ರೂಪಾಯಿ ಇತ್ತು, ಆದರೆ ಈಗ ಮಾಡಿದಂತಹ ಆಧಾರದಲ್ಲಿ ಮೂರು ಲಕ್ಷ ರೂಪಾಯಿಗೆ ಎಂಟು ಪರ್ಸೆಂಟ್ ಹಾಗೂ ರಿಜಿಸ್ಟ್ರೇಷನ್‌ಗೆ ಒಂದು ಪರ್ಸೆಂಟ್ ಎಂದರೆ 27 ಸಾವಿರ ರೂಪಾಯಿಯಾಗುತ್ತದೆ. ಅಂದರೆ ಸುಮಾರು 9 ಸಾವಿರ ರೂಪಾಯಿ ಜಾಸ್ತಿಯಾಗುತ್ತಿದೆ. ಅದೇ ರೀತಿ ಐದು ಲಕ್ಷ ರೂಪಾಯಿಗೆ 32,645 ಸಾವಿರ ರೂಪಾಯಿಯಾಗುತ್ತಿದೆ. ಅಂದರೆ ಎಂಟು ಲಕ್ಷದ ಫ್ಲಾಟ್‌ಗೆ 63,500 ರೂಪಾಯಿಗಳಿಂದ 72 ಸಾವಿರ ರೂಪಾಯಿಗಳಾಗುತ್ತದೆ. ನನ್ನ ವಿಶೇಷ ವಿನಂತಿ ಹೌಸಿಂಗ್ ಕನ್‌ಸ್ಟ್ರಕ್ಷನ್ ಆಕ್ಟಿವಿಟೀಸ್‌ಗೆ ಇದರಿಂದ ತುಂಬಾ ಅಫೆಕ್ಟ್ ಆಗುವುದರಿಂದ, ಇರದ ಬಗ್ಗೆ ಸರ್ಕಾರ ಪುನರ್ ವಿಮರ್ಶೆ ಮಾಬೇಕೆಂದು ಹೇಳಿ ಈ ಒಂದು ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಆಯವ್ಯಯ ಭಾಷಣದ ಬಗ್ಗೆ ಒಂದೆರಡು ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶ

ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಅರ್ಪಿಸುತ್ತಾ, ಮುಖ್ಯವಾಗಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ತಾವು ಕಳೆದ ಸಲ 25 ರಿಂದ 40 ಲಕ್ಷ ರೂಪಾಯಿ ನೀಡಲಾಗಿತ್ತು. ಆ ಒಂದು ನಿಧಿಯಿಂದ ಒಳ್ಳೆಯ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೆವು. ಆದರೆ ಅದು ಈ ಸಲದ ಬಜೆಟ್ ಭಾಷಣದಲ್ಲಿ ಕಾಣುತ್ತಾ ಇಲ್ಲ. ಹೀಗಿದ್ದಾಗ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ನಮಗೆ ಕಷ್ಟ ಸಾಧ್ಯವಾಗುತ್ತದೆ. ನಾವು ಈಗಾಗಲೇ ಹೇಳಿರುವಂತಹ ಕೆಲಸ ಕಾರ್ಯಗಳನ್ನು ಕೂಡ ಮುಂದುವರೆಸಿಕೊಂಡು ಹೋಗುವುದಕ್ಕೆ ಕಷ್ಟ ಸಾಧ್ಯವಾಗಿರುವುದರಿಂದ ಇದರ ಬಗ್ಗೆ ಬರುವ ವರ್ಷ 40 ಲಕ್ಷ ರೂಪಾಯಿ ನಿಧಿಯನ್ನಾದರೂ ನೀಡಬೇಕೆಂದು ಈ ಮೂಲಕವಾಗಿ ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ ಸರ್ಕಾರದ ಯೋಜನೆ ಪ್ರಕಾರ ಈಗಾಲೇ ಹೇಳಿದ ರೀತಿಯಲ್ಲಿ ಸ್ವಚ್ಛಗ್ರಾಮದಿಂದ 130 ಕೋಟಿ ರೂಪಾಯಿಗಳ 1300 ಗ್ರಾಮಗಳಿಗೆ ಕೊಟ್ಟಿದ್ದೇವೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದಕ್ಕೆ ಇನ್ನು ಮುಂದಿನ ದಿನಗಳಲ್ಲಿ ನೂರು ಕೋಟಿ ರೂಪಾಯಿಗಳನ್ನು ಕೊಟ್ಟು ಪ್ರತಿ ಗ್ರಾಮಕ್ಕೆ 10 ಲಕ್ಷ ರೂಪಾಯಿ ಯೋಜನೆಗಳನ್ನು ಹಾಕಿಕೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ಅನುಷ್ಠಾನಕ್ಕೆ ಮಾಡುವ ನಿಟ್ಟಿನಲ್ಲಿ ಕೂಡ ಇವತ್ತು ಸರ್ಕಾರ ಯೋಚನೆ ಮಾಡಬೇಕಾಗಿದೆ. ಆದರೆ ಆ ಯೋಜನೆಗಳನ್ನು ಹೇಳುತ್ತೇವೆ. ಅದನ್ನು ಮುಂದುವರೆಸಿಕೊಂಡು ಹೋಗದೆ ಇದ್ದಾಗ, ಆರ್ಥಿಕವಾಗಿ ಕುಂಠಿತಗೊಂಡಾಗ, ಆಗ ಮಾತ್ರ ಅದು ನಿಮ್ಮ ಬಜೆಟ್‌ನಲ್ಲಿ ಮಾತ್ರ ಉಳಿಯುತ್ತದೆ. ಅದು ಅನುಷ್ಠಾನವಾಗುವುದಿಲ್ಲ. ಈ ಬಗ್ಗೆ ಕೂಡ ಸರ್ಕರ ಯೋಚನೆಯನ್ನು ಮಾಡಬೇಕಾಗುತ್ತದೆ. ಅದರ ಜೊತೆಗೆ ಈಗಾಗಲೇ ಘೋಷಣೆ ಮಾಡಿರುವಂತೆ 'ಅಕ್ಷರ ದಾಸೋಹ' ಕಾರ್ಯಕ್ರಮವನ್ನು ತಂದು ಮಕ್ಕಳಿಗೆ ಬಿಸಿ ಊಟವನ್ನು ಕೊಟುತ್ತೇವೆ ಎಂದು ಹೇಳಿರುವುದನ್ನು ಸ್ವಾಗತ ಮಾಡುತ್ತೇವೆ. ಆದರೆ ಅದನ್ನು ಆನ್‌ಲೈನ್ ಲಾಟರಿ ಮುಖಾಂತರ ಕೊಡುವುದನ್ನು ನಾನು ವಿರೋಧ ಮಾಡುತ್ತೇನೆ. ಆ ಒಂದು ಮಾತನ್ನು ಹಿಂದೆ ತೆಗೆದುಕೊಂಡು ಆ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದರ ಜೊತೆಗೆ ಗಿರಿಜನರ ಕಲ್ಯಾಣಕ್ಕಾಗಿ ಆಸ್ಪತ್ರೆಗಳನ್ನು ಆದ್ಯತೆ ಮೇಲೆ ಕೊಡುತ್ತೇವೆ ಎನ್ನುವ ಯೋಜನೆಗಳನ್ನು ಕೂಡ ಸರ್ಕಾರ ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಇರುವಂತಹ ಕೆಲವೊಂದು ಕೋಲೊಡಿ ಹಾಗೂ ಬಂಜಾರ ಗಿರಿಜನರು ಇರುವಂತಹ ಕಡೆಗಳಲ್ಲಿ ಸಂಚಾರಿ ಆಸ್ಪತ್ರೆಯನ್ನು ಕೊಟ್ಟು ಆ ಮೂಲಕ ಅವರಿಗೆ ಆರೋಗ್ಯದ ಹೆಚ್ಚು ಸವಲತ್ತು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದರ ಜೊತೆಯಲ್ಲಿ ನಾವು ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾಪಂಚಾಯತ್ ರಸ್ತೆಗಳನ್ನು ನೋಡಿದಾಗ ನಮಗೆ ತುಂಬಾ ಕನಿಕರವಾಗುತ್ತದೆ. ಆ ರಸ್ತೆಯಲ್ಲಿ ವಾಹನಗಳು ಓಡಾಟ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಜಿಲ್ಲಾಪಂಚಾಯತ್ ರಸ್ತೆಗಳಿಗೆ ಕೂಡ ರಾಜ್ಯ ಹೆದ್ದಾರಿಗಳಿಗೆ ಸರ್ಕಾರದವರು ಎಷ್ಟು ನಿಗದಿ ಮಾಡುತ್ತಿದ್ದಾರೆ ಅಷ್ಟೇ ಹಣವನ್ನು ನಿರ್ವಹಣೆಗೆ ನಿಗದಿ ಮಾಡಬೇಕು. ಅದಲ್ಲದೆ ಈಗಾಗಲೇ ಘೋಷಣೆ ಮಾಡಿರುವ ಹತ್ತು ಸಾವಿರ ಕಿಲೋಮೀಟರ್ ಗ್ರಾಮೀಣ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮಾಡುತ್ತೇವೆ ಎನ್ನುವ ವಿಚಾರವನ್ನು ಕೂಡ ಹೇಳಿದ್ದೀರಿ. ಅದರಲ್ಲಿ ನಮ್ಮ ಕ್ಷೇತ್ರದಲ್ಲಿ ಕೂಡ ಐದಾರು ರಸ್ತೆಗಳು ಬರುತ್ತದೆ. ಅದ್ಯಾವುದೆಂದು

ನಾನು ಉಲ್ಲೇಖ ಮಾಡುವುದಕ್ಕೆ ಹೋಗದೆ ಅದನ್ನು ಕೂಡ ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಬೇಕೆಂದು ಹೇಳುತ್ತಾ ಈ ಬಜೆಟ್‌ನಲ್ಲಿ ಹೇಳಿರುವಂತಹ ವಿಚಾರವೇನೆಂದರೆ, ಪ್ರತಿ ಮತ ಕ್ಷೇತ್ರದಲ್ಲಿ ಎರಡು ಅಂಬೇಡ್ಕರ್ ಭವನವನ್ನು ಕೊಡುವುದಕ್ಕೆ ಅವಕಾಶ ಕೊಡುತ್ತೇವೆ ಎನ್ನುವ ವಿಚಾರವನ್ನು ಹೇಳಿದ್ದೀರಿ. ಅದಕ್ಕೆ ಎಷ್ಟು ಹಣ ನಿಗದಿ ಮಾಡುತ್ತೀರಿ? ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಕೊಡುತ್ತೀರಿ ಎಂಬುದನ್ನೂ ಹೇಳಬೇಕು. ಅದರ ಜೊತೆಗೆ ಈಗಾಗಲೇ ಅಂಗನವಾಡಿಗಳ ಬಗ್ಗೆ ಇಡೀ ರಾಜ್ಯದಲ್ಲಿ ಬೇಡಿಕೆ ಇದೆ. ಆ ಅಂಗನವಾಡಿಗಳ ಮೂಲಕ ಅಲ್ಲಿನ 3 ರಿಂದ 6 ವರ್ಷದ ಸಣ್ಣ ಮಕ್ಕಳಿಗೆ ಹೆಚ್ಚು ಅನುಕೂಲ ಕೂಡ ಆಗಿದೆ. ಆದುದರಿಂದ ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ರಾಜ್ಯಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಆ ಮೂಲಕ ಹೆಚ್ಚು ಅಂಗನವಾಡಿಗಳು ನಮ್ಮ ರಾಜ್ಯಕ್ಕೆ ಬರುವಂತೆ ಮಾಡಬೇಕೆಂದು ಹೇಳುತ್ತಾ, ತಾವು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ನೂರು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ ಆ ಮೂಲಕ ಗ್ರಾಮೀಣ ರಸ್ತೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ತಾವು ಪ್ರಾರಂಭ ಮಾಡುತ್ತೇವೆನ್ನುವ ವಿಚಾರವನ್ನು ಕೂಡ ಹೇಳಿದ್ದಾರೆ. ಅದನ್ನು ಖಂಡಿತವಾಗಿ ಕೂಡ ಮಾಡಿ, ಎಲ್ಲಾ ರಸ್ತೆಗಳು ಅಭಿವೃದ್ಧಿಯಾಗುವಂತಹ ಕೆಲಸ ಮಾಡಬೇಕೆಂದು ಹೇಳುತ್ತಾ, ಇನ್ನು ರೈತರಿಗೆ ಹನ್ನೆರಡು ಗಂಟೆಗಳ ಕಾಲ ವಿದ್ಯುತ್ ಅನ್ನು ಕೊಡುತ್ತೇವೆಂದು ಕಳೆದ ಸಲ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಈ ಸಲ ಯೋಚನೆ ಮಾಡಿದಾಗ ಥ್ರೀ ಫೇಸ್ ವಿದ್ಯುತ್ ಅನ್ನು ಮೂರು ಗಂಟೆಗಳ ಕಾಲ ಗ್ರಾಮಾಂತರ ಪ್ರದೇಶಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ನಾನು ಈ ಸದನದ ಮೂಲಕ ಕೇಳಿಕೊಳ್ಳುವುದೇನೆಂದರೆ, ಕನಿಷ್ಟ ಎಂಟು ಗಂಟೆಗಳ ಕಾಲ ಥ್ರಿ ಫೇಸ್ ವಿದ್ಯುತ್ ಅನ್ನು ಖಂಡಿತವಾಗಿ ಕೊಡಬೇಕೆಂದು ಹೇಳುತ್ತಾ, ಈಗಾಗಲೇ ಉಪ ಗ್ರಾಮಗಳನ್ನು ಗುರುತಿಸಿದ್ದು ನಮ್ಮ ಕ್ಷೇತ್ರವಾದ ಬೆಳ್ತಂಗಡಿಯಲ್ಲಿ ಕೂಡ 225 ಉಪ ಗ್ರಾಮಗಳನ್ನು ಗುರುತಿಸಿದ್ದಾರೆ. ಮತ್ತು ಅದಕ್ಕೆ ವಿದ್ಯುತ್ ಅನ್ನು ಒದಗಿಸುತ್ತೇವೆ ಎನ್ನುವ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಆದರೆ ಇದುವರೆಗೂ ಕೂಡ ಅದು ಅನುಷ್ಠಾನಕ್ಕೆ ಬಂದಿಲ್ಲ. ಆ 87 ಉಪ ಗ್ರಾಮಗಳನ್ನು ಎರಡು ವರ್ಷಗಳ ಹಿಂದೆ ಮೈಸೂರು ಲ್ಯಾಂಪ್‌ನವರಿಗೆ ಗುತ್ತಿಗೆ ವಹಿಸಿಕೊಡಲಾಗಿದೆ ಎನ್ನುವ ವಿಚಾರವನ್ನು ಸರ್ಕಾರ ಉತ್ತರದಲ್ಲಿ ಹೇಳಿದೆ. ನಾನು ವಿನಂತಿ ಮಾಡುವುದಿಷ್ಟೆ, ಅಲ್ಲಿ ಸ್ಥಳೀಯ ಗುತ್ತಿಗೆದಾರರು ಯಾರಿದ್ದಾರೆ ಅವರು ಕೆಲಸಗಳನ್ನು ಮಾಡಿದರೆ ನಮ್ಮ ಪುತ್ತೂರು, ಸುಳ್ಯ ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲ್ಲೂಕಿಗೆ ಖಂಡಿತಾ ಅನುಕೂಲವಾಗುತ್ತದೆನ್ನುವ ವಿಚಾರವನ್ನು ಹೇಳುತ್ತಾ, ಕೃಷಿ ಕ್ಷೇತ್ರದಲ್ಲಿ ಹೆಚ್ಚು ಒತ್ತನ್ನು ಸರ್ಕಾರ ಕೊಡಬೇಕು, ರೈತರಿಗೆ ಹನಿ ನೀರಾವರಿ ಇರಬಹುದು, ಸ್ಪಿಂಕ್ಲರ್ ಇರಬಹುದು, ಅವರಿಗೆ ಸಹಾಯಧನವನ್ನು ಶೇಕಡ 50 ರಷ್ಟು ಎಸ್‌ಸಿ: ಎಸ್‌ಟಿಯವರಿಗೆ ಶೇಕಡ ನೂರರಷ್ಟು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಅದರಲ್ಲಿ ಎಷ್ಟು ಜನರಿಗೆ ಎಷ್ಟು ಹಣ ವಿನಿಯೋಗ ಮಾಡುತ್ತೀರಿ ಎನ್ನುವುದನ್ನು ತಾವು ಹೇಳದೆ ಇರುವುದರಿಂದ ಅದು ನಮಗೆ ಗೊಂದಲವಾಗಿದೆ. ಅದಕ್ಕೆ ಎಷ್ಟು ಹಣವನ್ನು ಕೊಡುತ್ತೀರಿ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಬೇಕಾಗಿರುವಂಥಾದ್ದು ಆಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಇನ್ನು ತಮಗೆ ಗೊತ್ತಿದೆ, ರೈತ ಸಾಲದಿಂದಲೇ ಹುಟ್ಟಿ, ಸಾಲದಿಂದಲೇ ಬೆಳೆದು ಸಾಲದಿಂದಲೇ ಸಾಯುತ್ತಿದ್ದಾನೆ. ಹಾಗೆ

ಸತ್ತಂತಹ ಮನುಷ್ಯನಿಗೆ ಸರ್ಕಾರ ಈ ವರ್ಷ ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದು ಯೋಜನೆಯನ್ನು ಹಾಕಿಕೊಂಡಿದೆ. ಆದರೆ ನಾನು ಹೇಳುವುದೇನೆಂದರೆ ಆ ರೈತನನ್ನು ಸಾಯುವುದಕ್ಕೆ ಬಿಡಬಾರದು. ಸತ್ತಮೇಲೆ ನೀವು ಒಂದು ಲಕ್ಷ ರೂಪಾಯಿ ಕೊಟ್ಟರೆ ಅದು ಸತ್ತ ಮನುಷ್ಯನಿಗೆ ಸಿಗುವುದಿಲ್ಲ, ಅವನ ಕುಟುಂಬಕ್ಕೆ ಹೋಗುತ್ತದೆ. ಆದರೆ ಒಬ್ಬ ರೈತನಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಸತ್ತ ಮೇಲೆ ಕೊಟ್ಟರೆ, ಅದು ಸಾಧುವಲ್ಲ. ಅದಕ್ಕೆ ನಾನು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಆ ರೈತರು ಸಾಯದೆ ಇರುವ ಹಾಗೆ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ. ಹಾಗಾಗಿ ಅವನಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಸರ್ಕಾರ ವಿತರಣೆ ಮಾಡಬೇಕಾಗಿದೆ. ಈಗಾಗಲೇ ಬ್ಯಾಂಕುಗಳಲ್ಲಿ ಡೆಪಾಸಿಟ್‌ಗಳನ್ನೂ ಶೇಕಡ ಆರರ ಬಡ್ಡಿದರದಲ್ಲಿ ಇಟ್ಟಾಗ, ಅದು ಶೇಕಡ 8ರಂತೆ ರೈತನಿಗೆ ಸಿಗುವಂತಹ ಯೋಜನೆಗಳನ್ನು ಮಾಡಿದೆ. ಅದಕ್ಕೆ ಏಜೆನ್ಸಿ ಕಡಿಮೆ ಮಾಡಿದಾಗ ಅದು ಜಿಲ್ಲಾ ಕೇಂದ್ರ ಬ್ಯಾಂಕ್ ಇರಬಹುದು, ಅಪೆಕ್ಸ್ ಬ್ಯಾಂಕ್ ಇರಬಹುದು ಅಥವಾ ಪ್ರಾಥಮಿಕ ಸಹಕಾರ ಸಂಘ ಇರಬಹುದು, ಆ ಮೂಲಕ ಶೇಕಡ 8 ರಂತೆ ಬಡ್ಡಿ ದರವನ್ನು ವಿಧಿಸಿ ರೈತನಿಗೆ ಕೊಟ್ಟಾಗ ಖಂಡಿತವಾಗಿ ಕೂಡ ಅವನು ಕೃಷಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಬರುತ್ತದೆ. ಆ ನಿಟ್ಟಿನಲ್ಲಿ ಅವರನ್ನು ಋಣಮುಕ್ತರನ್ನಾಗಿ ಮಾಡುವಂತಹ ಒಂದು ಯೋಜನೆಯನ್ನು ಸರ್ಕಾರ ಮಾಡಬೇಕಾಗಿದೆ. ಸಾಧಾರಣ 15 ವರ್ಷದ ಒಳಗಾಗಿ ಪೂರ್ತಿ ಸಾಲವನ್ನು ಕಟ್ಟಿ ಅದರಲ್ಲಿ ಒಳ್ಳೆಯ ಕೃಷಿಯನ್ನು ಮಾಡುವಂತಹ ರೀತಿಯಲ್ಲಿ ಪೂರ್ತಿ ಸಾಲವನ್ನು ಸಂಪೂರ್ಣವಾಗಿ ಕಟ್ಟುವ ನಿಟ್ಟಿನಲ್ಲಿ ಕೂಡ ಸರ್ಕಾರ ಪ್ರಯತ್ನಗಳನ್ನು ಮಾಡಬೇಕಾಗಿದೆ. ಆ ಮೂಲಕ ಅವನು ಬೆಳೆದಂತಹ ಉತ್ಪನ್ನ ಏನಿದೆ ಅದನ್ನು ಸರಿಯಾದಂತಹ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಸಹಕಾರ ಸಂಘದ ಮೂಲಕ ಮಾರಾಟಕ್ಕೆ ಮಾರ್ಕೆಟ್ ವ್ಯವಸ್ಥೆಯನ್ನು ಮಾಡಿದಾಗ ನಾವೇನು ರೈತ ದೇಶದ ಬೆನ್ನಲುಬು ಎಂದು ಹೇಳುತ್ತೇವೆ, ಅವನನ್ನು ಉಳಿಸುವಂತಹ ಕಾರ್ಯವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7.20ಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 28.03.2003ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

* * *

ಕಾ.ಸೂ.ಪಿ.೦-220 ಸ.ಶಾ.ಮು.ಮಂ-08. 350 ಪುಸ್ತಕಗಳು 4-11-03